

ಮಲೆಗಳಲ್ಲಿ ಮದುಮಗಳು-೫೦

ಸಂಪಾದಕ:
ಡಿ.ಎಸ್. ನಾಗಭೂಷಣ

ಮಲೆಗಳಲ್ಲಿ ಮದುಮಗಳು-೫೦

('ಮಲೆಗಳಲ್ಲಿ ಮದುಮಗಳು' ಕಾದಂಬರಿ ಕುರಿತ ವಿವಿಧ ನೋಟಗಳು)

: ಸಂಪಾದಕ :

ಡಿ.ಎಸ್. ನಾಗಭೂಷಣ

ಮೆ|| ಎಂ. ಮೂನಿಸ್ವಾಮಿ ಅಂಡ್ ಸನ್ಸ್

ಪ್ರಕಾಶಕರು ಮತ್ತು ವಿತರಕರು

'ಸರ್ವೋದಯ', ನಂ. ೭೨, ಪ್ರೊ|| ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ,

ಬಸವನಗುಡಿ, ಬೆಂಗಳೂರು-೫೬೦ ೦೦೦೪.

www.hulkul.org.in

Malegalalli Madumagalu-50 - a collection of critical articles on the novel 'Malegalalli Madumagalu' of Kuvempu by different authors, edited by D.S. Nagabhushana, Shivamogga, published by M/s Mooniswamy and sons, book publishers and distributors at No. 72, 'Sarvodaya', Prof. A.R. Krishnashastry Road, Basavanagudi, Bengaluru-560004

Cover Design : B.G. Gujjarappa

First impression: May, 2019

Paper used: 70gsm Maplitho

Pages : viii + 90

Price : Rs. 90 /-

ಮಲೆಗಳಲ್ಲಿ ಮದುಮಗಳು–೫೦

(ವಿಮರ್ಶಾ ಲೇಖನಗಳ ಸಂಗ್ರಹ)

ಮುಖ ಪುಟ ವಿನ್ಯಾಸ : ಬಿ.ಜಿ. ಗುಜ್ಜಾರಪ್ಪ

ಮೊದಲ ಮುದ್ರಣ : ಮೇ, ೨೦೧೯

ಬಳಸಿರುವ ಕಾಗದ : ೭೦ಜಿ.ಎಸ್.ಎಂ. ಮ್ಯಾಪ್ಲಿತೋ

ಪುಟಗಳು : ೮ + ೯೦

ಬೆಲೆ : ರೂ. ೯೦/–

ಮುದ್ರಣ:
ರಿಪ್ಲಿಕಾ ಆಫ್‌ಸೆಟ್ ಪ್ರಿಂಟರ್ಸ್
ನಂ.೧೪, ೧ನೇ ಮುಖ್ಯ ರಸ್ತೆ, ಕೈಗಾರಕಾನಗರ
ರಾಜಾಜಿನಗರ, ಬೆಂಗಳೂರು–೫೬೦೦೪೪

ಸಂಪಾದಕರ ಮಾತು

'ಮಲೆಗಳಲ್ಲಿ ಮದುಮಗಳು' ಶತಮಾನದ ಕಾದಂಬರಿ. ಕೇವಲ ಕನ್ನಡದ್ದಲ್ಲ, ಭಾರತದ ಶತಮಾನದ ಕಾದಂಬರಿ ಎಂದೂ ಹೇಳಲಾಗುತ್ತದೆ. ಈ ಕಾದಂಬರಿ ರಚಿತವಾಗಿ (೧೯೬೭) ಐವ್ವತ್ತು ವರ್ಷಗಳು ತುಂಬಿದ ಸಂದರ್ಭದಲ್ಲಿ ಈ ಕೃತಿಯ ಒಂದು ಪುನರಾವಲೋಲಕನ ಅಗತ್ಯವೆಂದು ನನಗೆ ಅನ್ನಿಸಿತು. ಅದಕ್ಕೆ ಮುಖ್ಯ ಕಾರಣ, ಕಾದಂಬರಿ ಪ್ರಕಟವಾದಾಗ ಅದಕ್ಕೆ ಒಳ್ಳೆಯ ಸ್ವಾಗತವೇನೂ ದೊರೆತಿರಲಿಲ್ಲ ಎಂಬುದು. ಹಾಗೆ ನೋಡಿದರೆ ಅದರ ತಥಾಕಥಿತ ದೌರ್ಬಲ್ಯಗಳನ್ನೇ ಎತ್ತಿ ಹೇಳಿ ಅದಕ್ಕೆ ಅನ್ಯಾಯ ವನ್ನೇ ಮಾಡಲಾಯಿತು. ಅದಕ್ಕೆ ಕಾರಣ ಆ ಕಾದಂಬರಿ ಪ್ರಕಟವಾದಾಗ ಇದ್ದ ಸಾಹಿತ್ಯ ಕಾಲಧರ್ಮ. ಆದರೆ ಈ ಕಾದಂಬರಿ ಇಂತಹ ಸಂಚಾರಿ ಕಾಲಧರ್ಮಗಳ ಗೊಡವೆ ಇಲ್ಲದೆ ನಿರಪೇಕ್ಷ ಸಾಹಿತ್ಯ ಮನದಂಡಗಳಿಗೆ ಮಾತ್ರ ಒದಗುವ ಮಹತ್ಕೃತಿಯಾದ್ದರಿಂದ ಆ ಕಾಲಧರ್ಮ ತನ್ನ ಸಂಚಾರವನ್ನು ಮುಗಿಸಿ ಹೋದ ಮೇಲೆ ಕನ್ನಡಿಗರ ಮನಸ್ಸಿನಲ್ಲಿ ಒಂದು ಚಿರಸ್ಥಾಯಿ ಸ್ಥಾನ ಪಡೆದು ಉಳಿದಿದೆ. ಅಂದ ಮಾತ್ರಕ್ಕೆ ಈ ಕೃತಿಗೆ ಸಲ್ಲಬೇಕಾದ ಸಾಹಿತ್ಯ ವಿಮರ್ಶೆಯ ನ್ಯಾಯ ಸಂದಿದೆ ಎಂದು ಹೇಳಲಾಗದು. ಕಾರಣ, ಈ ಕಾದಂಬರಿ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಒಂದಲ್ಲ ಒಂದು ರೂಪದಲ್ಲಿ ಆಳುತ್ತಿರುವ ಆಧುನಿಕ ಸಾಹಿತ್ಯ ವಿಮರ್ಶೆಯ ಪರಿಕರಗಳಿಗೆ ಒದಗಾಲಾಗದಷ್ಟು ಹೊಸದೂ, ವಿಶಿಷ್ಟವೂ ಆಗಿದೆ. ಆ ಕಾರಣದಿಂದಲೇ ಈ ಕಾದಂಬರಿ ರಚನೆಯಾಗಿ ಐವ್ವತ್ತು ವರ್ಷಗಳಾದ ಸಂದರ್ಭವೇ ಒಂದು ನೆಪವಾಗಿ ಈ ಕೃತಿ ರೂಪುಗೊಂಡಿದೆ.

ಪ್ರಸ್ತುತ ಕೃತಿಯು ಈ ಕಾದಂಬರಿ ತನ್ನ ಬಾಳುವೆಯ ಐವತ್ತು ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಶಿವಮೊಗ್ಗದ ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ ರಾಜ್ಯದ ಮೂರು ಕಡೆ–ಮೈಸೂರು, ಧಾರವಾಡ ಮತ್ತು ಉಡುಪಿ–ವಿವಿಧ ಸಂಸ್ಥೆಗಳ ಸಹಕಾರದೊಂದಿಗೆ ಆಯೋಜಿಸಿದ ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳ ಬರಹ ರೂಪಗಳನ್ನು ಒಳಗೊಂಡಿದೆ. ಕೊನೆಯಲ್ಲಿ ಅನುಬಂಧಗಳ ರೂಪದಲ್ಲಿ ಈ ವಿಚಾರ ಸಂಕಿರಣಗಳ ಸಂಕ್ಷಿಪ್ತ ವರದಿಗಳನ್ನೂ ನೀಡಲಾಗಿದೆ. ಇವು ಈ ಕೃತಿ ರೂಪುಗೊಳ್ಳಲು ಹಿನ್ನೆಲೆಯಾದ ವಿಚಾರಗಳನ್ನೂ ಓದುಗರಿಗೆ ಪರಿಚಯ ಮಾಡಿಕೊಡುತ್ತದೆ. ಈ ವಿಚಾರ ಸಂಕಿರಣಗಳನ್ನು ಆಯೋಜಿಸಲು ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ ದೊಂದಿಗೆ ಸಹಕರಸಿದ ಬೆಂಗಳೂರಿನ ಕುವೆಂಪು ವಿಚಾರ ವೇದಿಕೆ, ಮೈಸೂರು ವಿಶ್ವವಿದ್ಯಾಲಯ, ಧಾರವಾಡದ ಗಿರಡ್ಡಿ ಗೋವಿಂದರಾಜ ಪ್ರತಿಷ್ಠಾನ,

ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಮತ್ತು ಉಡುಪಿಯ ರಥಬೀದಿ ಗೆಳೆಯರು ಇವರಿಗೆ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷನಾಗಿ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಮುಖ್ಯವಾಗಿ ಈ ಸಂಘಟನೆಗಳ ಜವಾಬ್ದಾರಿ ಸ್ಥಾನಗಳಲ್ಲಿರುವ ಎಂ.ಸಿ. ನರೇಂದ್ರ, ವೆಂಕಟೇಶ ಮಾಚಕನೂರು, ಕಡಿದಾಳು ಪ್ರಕಾಶ್ ಮತ್ತು ಮುರಳೀಧರ ಉಪಾಧ್ಯ ಅವರನ್ನು ಇಲ್ಲಿ ನೆನೆಯಬೇಕು. ಇದೇ ಸಂದರ್ಭದಲ್ಲಿ ನೆನೆಯಬೇಕಾದ ಮತ್ತೊಬ್ಬ ವ್ಯಕ್ತಿ ಯೆಂದರೆ ಗೆಳೆಯ ಜಿ.ಬಿ. ಶಿವರಾಜು ಅವರು. ನನ್ನ ತೀವ್ರ ಒತ್ತಾಸೆ ಮತ್ತು ಕಾರ್ಯಕ್ರಮ ನಕ್ಷೆಯ ಹೊರತಾಗಿಯೂ, ಅವರ ಪ್ರೋತ್ಸಾಹದ ಮಾತುಗಳು ಮತ್ತು ಸಂಘಟನಾ ಕೌಶಲಗಳ ನೆರವಿಲ್ಲದಿದ್ದರೆ ಈ ವಿಚಾರ ಸಂಕಿರಣಗಳ ಕಾರ್ಯಕ್ರಮ ನೆಲಬಿಟ್ಟು ಏಳುತ್ತಿರಲಿಲ್ಲವೇನೋ! 'ಮಲೆಗಳಲ್ಲಿ ಮದುಮಗಳು-೫೦' ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಮೈಸೂರಿನಲ್ಲಿ ಸಕಲ ಏರ್ಪಾಡುಗಳ ನಂತರ ಕೊನೆಯ ಘಳಿಗೆಯಲ್ಲಿ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ನಿಧನದಿಂದಾಗಿ ಅನಿವಾರ್ಯವಾಗಿ ರದ್ದಾದನಂತರ ಧೃತಿಗೆಡದೆ ಕಾರ್ಯಕ್ರಮವನ್ನು ಪುನರಾಯೋಜಿಸಲು ಎಂ.ಸಿ. ನರೇಂದ್ರ ಅವರ ಹೆಗಲಿಗೆ ಹೆಗಲು ಕೊಟ್ಟು ನಿಂತವರು ಈ ಗೆಳೆಯರೇ.

ಇನ್ನು ಈ ಪುಸ್ತಕದಲ್ಲಿನ ವಿಚಾರಗಳ ಬಗ್ಗೆ ನಾನು ಇಲ್ಲಿ ಹೇಳುವ ಅಗತ್ಯವಿಲ್ಲ. ಈ ಕಾದಂಬರಿಗೆ ಆದ ವಿಮರ್ಶಾ ಅನ್ಯಾಯವನ್ನು, ಅದಕ್ಕೆ ಕಾರಣವಾದ ಅಂಶಗಳೂ ವಿಷದವಾಗುವ ರೀತಿಯಲ್ಲಿ ಸರಿಪಡಿಸಿ, ಅದನ್ನು ಅದಕ್ಕೆ ತಕ್ಕನಾದ ಹೊಸ ನೆಲೆಯಲ್ಲಿ ನಿಲ್ಲಿಸುವ ಪ್ರಯತ್ನವಿದು ಎಂದಷ್ಟೇ ನಾನು ಹೇಳಬಲ್ಲೆ. ಆದರೆ ಈ ಪ್ರಯತ್ನದಲ್ಲಿ ನಾನು ನನ್ನ ನಿರೀಕ್ಷೆಗೆ ತಕ್ಕಂತಾದರೂ ಯಶಸ್ವಿಯಾಗಿದ್ದೇನೆ ಎಂದು ಹೇಳಲಾರೆ. ಅದಕ್ಕೆ ಕಾರಣಗಳು ಹಲವು. ನನಗೆ ಕಂಡ ಎರಡು ಮುಖ್ಯ ಕಾರಣಗಳೆಂದರೆ – ಒಂದು, ಇಂದು ನಮ್ಮ ಸಾಹಿತ್ಯ-ಸಂಸ್ಕೃತಿ ವಲಯವನ್ನು ಆವರಿಸಿಕೊಂಡಿರುವ ಜಡತೆ. ಎರಡು: ಸಾಹಿತ್ಯ ಕೃತಿಯೊಂದನ್ನು ಸಂಪೂರ್ಣ ಹೊರಗಿನಿಂದ ಓದುವ ಸಾಮಾಜಿಕ ರಾಜಕಾರಣ ಇಂದು ನಮ್ಮ ಸಾಹಿತ್ಯ ವಿಮರ್ಶೆಯ ಮುಖ್ಯ ನೆಲೆಯಾಗಿರುವುದು. ಇಲ್ಲಿನ ಕೆಲವು ಪ್ರಬಂಧಗಳಲ್ಲಿ ಇದರ ಸೆಳಕುಗಳನ್ನು ಕಾಣಬಹುದು. ಮುಖ್ಯವಾಗಿ, ತಾವು ನಂಬಿದ ಸಾಮಾಜಿಕ-ರಾಜಕೀಯ ತಾತ್ವಿಕತೆಯ ಪ್ರತಿಪಾದನೆಯನ್ನು ಕೃತಿಯಲ್ಲಿ ಅರಸಿ, ಅದರಲ್ಲಿ ವಿಫಲವಾಗಿ ಆ ವೈಫಲ್ಯವನ್ನು ಕೃತಿಯ ವೈಫಲ್ಯವೆಂದು ನಿರೂಪಿಸುವ ಪ್ರಯತ್ನ ಕೃತಿಗೆ ಮಾಡುವ ಅನ್ಯಾಯವೆಂದೇ ನಾನು ಭಾವಿಸಿದ್ದೇನೆ. ಹಾಗೇ ಈ ಪ್ರವೃತ್ತಿಗೆ ವ್ಯತಿರಿಕ್ತವಾಗಿ ಇಲ್ಲಿನ ಕೆಲವು ವಿಮರ್ಶಕರು ತಮ್ಮ ಈ ಹಿಂದಿನ ಕೆಲವು ಪೂರ್ವಾಗ್ರಹಗಳಿಂದ ಬಿಡುಗಡೆ ಹೊಂದು ಕಾದಂಬರಿಯನ್ನು ಮುಕ್ತ ಕಣ್ಣುಗಳಿಂದ ನೋಡಿ ಕಾದಂಬರಿಯ ಸಮಗ್ರ

ಸೌಂದರ್ಯದ ಗುಟ್ಟುಗಳನ್ನು ಬಿಚ್ಚಿಟ್ಟಿರುವುದನ್ನೂ ನಾವು ಕಾಣಬಹುದು.

ಪ್ರೊ॥ ಬಿ. ಕೃಷ್ಣಪ್ಪನವರು ನಾಲ್ಕು ದಶಕಗಳ ಹಿಂದೆ 'ಮಲೆಗಳಲ್ಲಿ ಮದುಮಗಳು'ವಿನ ಮೇಲೆ ಮಾಡಿದ ಜಾತಿ ಪಕ್ಷಪಾತದ ಟೀಕೆ ಈಗಲೂ ಅವರ ಅದೇ ಟೀಕೆಯ ಮಾತುಗಳ ಪುನರಾವರ್ತನೆಯ ರೂಪದಲ್ಲಿ ಮಾತ್ರ ಪ್ರಸ್ತಾಪಿತವಾಗುತ್ತಾ, ಕೃತಿಯ ಸಂವಿಧಾನ, ತಾತ್ವಿಕತೆ ಮತ್ತು ದರ್ಶನಗಳ ಹಿನ್ನೆಲೆಯ ಚರ್ಚೆಗಳ ಮೂಲಕ ಇತ್ಯರ್ಥ ಕಾಣದಿರುವುದು ನಮ್ಮ ಸಾಹಿತ್ಯ ವಿಮರ್ಶೆ ಇಂದು ಸಿಕ್ಕಿಹಾಕಿಕೊಂಡಿರುವ ಸಂದಿಗ್ಧತೆಯ ಸೂಚನೆಯಾಗಿದೆ ಎಂದಷ್ಟೇ ಇಲ್ಲಿ ನಾನು ಹೇಳಬಲ್ಲೆ. ಇಲ್ಲಿ ಇನ್ನೊಂದು ಸಂಗತಿಯನ್ನೂ ಹೇಳಬಹುದು. ಅದೆಂದರೆ ಇಲ್ಲಿನ ಪ್ರಬಂಧವೊಂದರಲ್ಲಿ ಸೂಚಿಸಿರುವ ಹಾಗೆ ಕುವೆಂಪು ಕನ್ನಡ ಸಾಹಿತ್ಯದಲ್ಲಿ ಪುನರುಜ್ಜೀನಗೊಂಡದ್ದು ಬಂಡಾಯ-ದಲಿತ ಸಾಹಿತ್ಯದ ಕಾರಣದಿಂದ ಅಲ್ಲ. ಮೊದಲಾಗಿ ಬಂಡಾಯ-ದಲಿತಗಳೆಂದು ಒಟ್ಟಿಗೆ ಹೇಳುವುದೇ ಸಾಹಿತ್ಯ ಮೀಮಾಂಸೆಯ ದೃಷ್ಟಿಯಿಂದ ಸಮರ್ಪಕವಲ್ಲ. ಅದೇನೇ ಇರಲಿ, ಕುವೆಂಪು ಬಗ್ಗೆ ಕನ್ನಡ ಸಾಹಿತ್ಯ ಲೋಕದಲ್ಲಿ ಹೊಸ ಅಧ್ಯಯನದ ಆಸಕ್ತಿ-ಕುತೂಹಲಗಳು ಆರಂಭವಾದದ್ದು, ಅಖಿಲ ಕರ್ನಾಟಕ ಲೇಖಕರ ಮತ್ತು ಕಲಾವಿದರ ಒಕ್ಕೂಟ ರಚನೆ ಮತ್ತು ಅದರ ಕಲಾಪಗಳು ಆರಂಭವಾದ ನಂತರ. ಕುವೆಂಪು ಕುರಿತು ಅತ್ಯುತ್ತಮ ವಿಮರ್ಶೆ ಬಂದದ್ದು ಆ ಸಂದರ್ಭದಲ್ಲೇ.

ಈ ಕೃತಿ ಈ ಅತ್ಯುತ್ತಮ ವಿಮರ್ಶೆಯ ದಾರಿಯನು ಮುಂದುವರೆಸುವ ಒಂದು ಪ್ರಯತ್ನ ಮಾತ್ರವಾಗಿದೆ ಎಂದಷ್ಟೇ ಹೇಳಿ ಮಿಕ್ಕದ್ದನ್ನು ಇಲ್ಲಿನ ಪ್ರಬಂಧಗಳನ್ನು ಪರಾಂಬರಿಸಿ ಓದುಗರು ತೀರ್ಮಾನಿಸಬಹುದು ಎಂದು ತಿಳಿಸಬಯಸುವೆ. ಆದರೆ ಒಂದು ಮಾತನ್ನಂತೂ ಹೇಳಬೇಕು: ಇಲ್ಲಿನ ಬಹುತೇಕ ಪ್ರಬಂಧಗಳು ಕಾದಂಬರಿಯನ್ನು ಹೊಸ ಕಣ್ಣುಗಳಿಂದ ನೋಡಲು ಮತ್ತು ಅ ಮೂಲಕ ಕಾಣಿಸಿಸಲು ಪ್ರಾಮಾಣಿಕ ಪ್ರಯತ್ನ ಮಾಡಿವೆ. ಪ್ರಬಂಧಗಳು ಕೃತಿಯನ್ನು ವಿವಿಧ ದಿಕ್ಕುಗಳಿಂದ ನೋಡುವ ಪ್ರಯತ್ನ ಮಾಡಿವೆಯಾದರೂ ಅವೆಲ್ಲ ಪರಸ್ಪರ ಪೂರಕವಾಗಿ ಕಾದಂಬರಿಯನ್ನು ಕುರಿತಂತೆ ಹೊಸ ಸಂಕಲನವನ್ನು ಕಟ್ಟಬಲ್ಲವಾಗಿವೆ ಎಂದು ನಾನು ನಂಬಿದ್ದೇನೆ. ಓದುಗರು ಗಮನಿಸ ಬಹುದಾದದಂತೆ ವಿಮರ್ಶಕರು ಯಾವ ನೆಲೆಯಿಂದಲೇ ಆಗಲೀ, ದಿಕ್ಕಿನಿಂದಲೇ ಆಗಲಿ ಈ ಕೃತಿಯನ್ನು ಅರ್ಥಮಾಡಿಕೊಳ್ಳಲು, ವಿವರಿಸಲು, ವ್ಯಾಖ್ಯಾನಿಸಲು ಹೊರಟರೂ ಅದು ಒಂದಲ್ಲ ಒಂದು ಹಂತದಲ್ಲಿ ಇಡೀ ಕೃತಿಯ ವಿಮರ್ಶೆಯ ಕಡೆಗೆ ತುಡಿಯುವುದು ಈ ಕೃತಿಯ ಇಡಿತನ ಅಥವಾ ಸಾವಯವ ಸಮಗ್ರತೆಗೆ ಸಾಕ್ಷಿ ಎಂಬುದನ್ನು ತೋರಿಸುತ್ತದೆ. ಇಲ್ಲಿನ ಒಂದು ಲೇಖನದಲ್ಲಿ ಜಿ. ರಾಜಶೇಖರ ಅವರು ಈ ಕೃತಿಯನ್ನು 'ರಸೈಕ' ದೃಷ್ಟಿಯಿಂದ ಓದುವುದು ತರವೇ? ಎಂಬ ಪ್ರಶ್ನೆಯನ್ನು ಹಾಕಿದ್ದಾರೆ. ಆದರೆ ಈ

ದೃಷ್ಟಿಯಿಂದ ಓದಿದರೂ ತನ್ನೆಲ್ಲ ರಾಜಕೀಯ-ಸಾಮಾಜಿಕತೆಗಳೊಂದಿಗೇ ಈ ಕೃತಿ ಬಿಚ್ಚಿಕೊಳ್ಳುವಷ್ಟು ಅದು ಅವಿಭಾಜ್ಯವಾಗಿದೆ ಎಂಬುದು ರಾಜಶೇಖರರಿಗೆ ಗೊತ್ತಿಲ್ಲದಿಲ್ಲ ಎಂದು ನಾನು ಭಾವಿಸುತ್ತೇನೆ. ಅದೇನೇ ಇರಲಿ, ಈ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಮಾತನಾಡಿ ದ್ದಲ್ಲದೆ, ಆ ಮಾತುಗಳನ್ನು ಒಂದು ವ್ಯವಸ್ಥಿತ ಲೇಖನ ರೂಪಗಳಲ್ಲಿ-ಕೆಲವರು ತಮ್ಮ ಮಾತುಗಳನ್ನು ವಿಸ್ತರಿಸಿಯೂ, ಇನ್ನು ಕೆಲವರು ಸಂಕ್ಷಿಪ್ತಗೊಳಿಸಿಯೂ-ಬರೆದುಕೊಟ್ಟ ಎಲ್ಲ ವಿದ್ವಾಂಸರಿಗೂ ನನ್ನ ವಂದನೆಗಳನ್ನು ಹೇಳಬಯಸುವೆ. ಇಲ್ಲಿ ಈ ಪ್ರಬಂಧಗಳನ್ನು ಅವು ಮಂಡಿತವಾದ ವಿಚಾರ ಸಂಕಿರಣಗಳ ಅನುಕ್ರಮದಲ್ಲೇ ಪ್ರಸ್ತುತಪಡಿಸಲಾಗಿದೆ.

ಪ್ರಬಂಧಕಾರರಲ್ಲದೆ ನಮ್ಮ ಕರೆಗೆ ಓಗೊಟ್ಟು ವಿಚಾರ ಸಂಕಿರಣಗಳಲ್ಲಿ ಉದ್ಘಾಟಕರಾಗಿ, ಸಮಾರೋಪ ಭಾಷಣಕಾರರಾಗಿ ಭಾಗವಹಿಸಿದ ದೇವನೂರ ಮಹಾದೇವ, ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಅವರು, ಪ್ರೊ॥ ಜಿ.ಹೆಚ್. ನಾಯಕ, ಪ್ರೊ॥ ಎನ್ ಬೋರಲಿಂಗಯ್ಯ, ಚೆನ್ನವೀರ ಕಣವಿ, ಡಾ॥ ಗುರುಲಿಂಗ ಕಾಪಸೆ ಹಾಗೂ ಡಾ॥ ವಿವೇಕ ರೈ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಜೊತೆಗೆ ಧಾರವಾಡದ ವಿಚಾರ ಸಂಕಿರಣದಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಆಯ್ದ ಭಾಗಗಳನ್ನು ವಾಚಿಸಿದ ಗೆಳೆಯ ಎ.ಎಂ. ಶಿವಸ್ವಾಮಿಯವರಿಗೂ ನನ್ನ ನಮನಗಳು ಸಲ್ಲುತ್ತವೆ. ಹಾಗೇ ವಿಚಾರ ಸಂಕಿರಣಗಳ ಸಂಘಟನೆಯಲ್ಲಿ ನನ್ನೊಂದಿಗೆ ಸಹಕರಿಸಿದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಎಲ್ಲ ಟ್ರಸ್ಟಿಗಳಿಗೂ ಧನ್ಯವಾದಗಳನ್ನು ಹೇಳಬಯಸುವೆ. ಹಾಗೇ ಈ ಪುಸ್ತಕದ ಕೊನೆಯಲ್ಲಿ ಅನುಬಂಧಗಳಾಗಿ ಮೂರು ವಿಚಾರ ಸಂಕಿರಣಗಳ ಸಂಕ್ಷಿಪ್ತ ವರದಿಗಳನ್ನು ನಮ್ಮ 'ಹೊಸ ಮನುಷ್ಯ' ಪತ್ರಿಕೆಗಾಗಿ ಬರೆದುಕೊಟ್ಟಿರುವ ಗೆಳೆಯ ಬಿ.ವಿ. ಸುರೇಂದ್ರ ಅವರಿಗೂ ಧನ್ಯವಾದಗಳು ಸಲ್ಲುತ್ತವೆ.

ಮೂರೂ ವಿಚಾರ ಸಂಕಿರಣಗಳ ಎಲ್ಲ ಪ್ರಬಂಧಗಳೂ ಪುಸ್ತಕ ರೂಪದಲ್ಲಿ ಬರಬೇಕೆಂದು ಬಯಸಿದವರು ಕುವೆಂಪು ವಿಚಾರ ವೇದಿಕೆಯ ಎಂ.ಸಿ. ನರೇಂದ್ರ ಅವರು. ಈಗ ಅವರೇ ತಮ್ಮ ಮೆ. ಎಂ. ಮೂನಿಸ್ವಾಮಿ ಅಂಡ್ ಸನ್ಸ್ ಪ್ರಕಾಶನದ ಮೂಲಕ ಈ ಪುಸ್ತಕವನ್ನು ಪ್ರಕಟಿಸುತ್ತಿದ್ದಾರೆ. ಇದರ ಮುಖಪುಟ ವಿನ್ಯಾಸ ಮಾಡಿ ದವರು ಖ್ಯಾತ ಕಲಾವಿದ ಗೆಳೆಯ ಬಿ.ಜಿ. ಗುಜ್ಜಾರಪ್ಪ ಅವರು. ಈ ಪುಸ್ತಕದ ಪುಟ ವಿನ್ಯಾಸ ಮಾಡಿದವರು ಹೆಚ್.ಎಸ್. ವೀಣಾ ಅವರು. ಇದರ ಕರಡು ತಿದ್ದಿದವರು ಸವಿತಾ ನಾಗಭೂಷಣ. ಪುಸ್ತಕವನ್ನು ಮುದ್ರಿಸುತ್ತಿರುವವರು ರಿಪ್ಲಿಕಾ ಆಫ್‌ಸೆಟ್ ಪ್ರಿಂಟರ್ಸ್‌ನ ಸೋದರರಾದ ದಯಾನಂದ ಸಾಗರ್ ಹಾಗೂ ರವಿಪ್ರಕಾಶ್. ಇವರೆಲ್ಲರಿಗೂ ನನ್ನ ನಮನಗಳು.

೨೯ ಏಪ್ರಿಲ್ ೨೦೧೯ **ಡಿ.ಎಸ್. ನಾಗಭೂಷಣ**

ಶಿವಮೊಗ್ಗ.

ಪರಿವಿಡಿ

೧. 'ಮಲೆಗಳಲ್ಲಿ ಮದುಮಗಳು-೫೦' : ಆಶಯದ ಮಾತುಗಳು

– ಡಿ.ಎಸ್. ನಾಗಭೂಷಣ

ಎಲ್ಲರಿಗೂ ನಮಸ್ಕಾರ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿ ಭಾಗಿಯಾಗಲು ನಾವೆಲ್ಲ ಇಲ್ಲಿ ಸೇರಿದ್ದೇವೆ. ಒಂದು ಕಾದಂಬರಿಗೆ ಅಥವಾ ಯಾವುದೇ ಕೃತಿಗೆ ಹತ್ತು, ಇಪ್ಪತ್ತೈದು, ಐವತ್ತು, ಅರವತ್ತು ಅಥವಾ ನೂರು ವರ್ಷಗಳಾಗುವುದು ವಿಶೇಷ ಸಂಗತಿ ಏನಲ್ಲ. ಏಕೆಂದರೆ ಕಾಲ ನಿರಂತರವಾಗಿ ಹರಿಯುತ್ತಿರುತ್ತದೆ. ಕನ್ನಡದಲ್ಲೇ ಈಗಾಗಲೆ ನಾಲ್ಕಾರು ಕಾದಂಬರಿಗಳ ಐವತ್ತು-ಅರವತ್ತು ವರ್ಷಗಳ ಹುಟ್ಟುಹಬ್ಬಗಳನ್ನು ಅವುಗಳಿಗೇ ವಿಶಿಷ್ಟವಾದ ಕಾರಣಗಳಿಗಾಗಿ ಆಚರಿಸಲಾಗಿದೆ. ಆದರೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಈ ಹುಟ್ಟುಹಬ್ಬದ ಸಂಭ್ರಮಕ್ಕೆ ಒಂದು ವಿಶೇಷ ಕಾರಣವಿದೆ. ಈ ವಿಷಯಕ್ಕೆ ಆಮೇಲೆ ಬರೋಣ.

ಈ ಕಾದಂಬರಿಯನ್ನು ವರ್ಷಕ್ಕೆರಡು ಬಾರಿಯಾದರೂ ಇಡಿಯಾಗಿ ಓದುವ ನನಗೆ ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಆಶ್ರಯದಲ್ಲಿ ಈ ಕಾದಂಬರಿಯ ಐವತ್ತನೇ ಹುಟ್ಟುಹಬ್ಬವನ್ನು ಆಚರಿಸುವುದು ಉಚಿತವೆನ್ನಿಸಿತು. ಏಕೆಂದರೆ ನಿಮಗೆ ಗೊತ್ತಿರ ಬಹುದಾದಂತೆ ಲೋಹಿಯಾ ವಿಚಾರಗಳಿಗೂ ಕುವೆಂಪು ವಿಚಾರಗಳಿಗೂ ಹಲವು ಸಂಗತಿಗಳ ವಿಷಯದಲ್ಲಿ ಬಹು ಸಾಮ್ಯತೆ ಇದೆ. ಗಾಂಧಿವಾದಿಗಳಾದ ಇಬ್ಬರೂ ಸಮಾನತೆ ಎಂಬ ಮೌಲ್ಯದ ಆರಾಧಕರು ಮತ್ತು ಈ ಮೌಲ್ಯವನ್ನು ಸಾಧಿಸಲು ಅಗತ್ಯವಾದ ಸಾಧನಗಳ ವಿಷಯದಲ್ಲೂ ಸಮಾನ ಮನಸ್ಕರು ಎಂದು ಹೇಳಬಹುದು. ಅದು ಅಹಿಂಸೆ ಇರಬಹುದು, ಸರಳ ಸಭ್ಯ ಜೀವನ ಮಟ್ಟ ಇರಬಹುದು, ಜಾತಿ ವಿನಾಶ ಇರಬಹುದು, ಸಾಮಾಜಿಕ ನ್ಯಾಯ ಇರಬಹುದು, ಧರ್ಮ ಕುರಿತ ವಿವೇಚನಾಶೀಲ ನಿಲುವೇ ಇರಬಹುದು ಮತ್ತು ಬಹುಮುಖ್ಯವಾಗಿ ಪರಂಪರೆ ಮತ್ತು ಆಧುನಿಕತೆಗಳ ಸಮನ್ವಯ ದೃಷ್ಟಿಯೇ ಇರಬಹುದು. ಹಾಗಾಗಿಯೇ ಈ ಇಬ್ಬರೂ ಒಮ್ಮೆ ಮೈಸೂರಿನಲ್ಲಿ ಭೇಟಿಯಾಗಿದ್ದು ಸಹಜವೇ. ಈ ಭೇಟಿಯಲ್ಲಿ ಲೋಹಿಯಾ ಕುವೆಂಪು ಅವರನ್ನು ರಾಜಕಾರಣಕ್ಕೆ ಆಹ್ವಾನಿಸುತ್ತಾರೆ. ಆದರೆ ಕುವೆಂಪು ತಮ್ಮ ಸ್ವಭಾವ ಸಹಜ ಹಿಂಜರಿಕೆಯಿಂದ ನೀಡಿದ ಉತ್ತರ ಗಮನಾರ್ಹವಾಗಿದೆ. ಅವರು ಹೇಳಿದ್ದು, 'ನೀವು

ಯಾವುದನ್ನು ರಾಜಕಾರಣದ ಮೂಲಕ ಮಾಡಬಯಸಿದ್ದೀರೋ ಅದನ್ನು ನಾನು ಸಾಹಿತ್ಯದ ಮೂಲಕ ಮಾಡುತ್ತಿರುವೆ. ಲೋಹಿಯಾ ಅದನ್ನು ಒಪ್ಪಿಕೊಂಡರು. ಏಕೆಂದರೆ ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಜಾಗತಿಕ ಸಮಾಜವಾದದ ಮೂಲಗುಣವಾದ ಭೌತವಾದಿ ಲೋಕದೃಷ್ಟಿಯನ್ನು ನಿರಾಕರಿಸಿತ್ತು. ಸಂಸ್ಕೃತಿಯೂ ರಾಜಕಾರಣದ ಮೂಲಸ್ಫೂರ್ತಿಗಳಲ್ಲಿ ಒಂದು ಎಂದು ನಂಬಿತ್ತು.

ಅದೇನೇ ಇರಲಿ, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಐವತ್ತನೇ ಹುಟ್ಟುಹಬ್ಬದ ವಿಚಾರವನ್ನು ನಮ್ಮ ಮನೆಗೊಮ್ಮೆ ಬಂದಿದ್ದ ಕುವೆಂಪು ವಿಚಾರವೇದಿಕೆಯ ಎಂ.ಸಿ. ನರೇಂದ್ರ ಅವರೊಂದಿಗೆ ಹಂಚಿಕೊಂಡಾಗ ಅವರು ಅದನ್ನು ದೊಡ್ಡ ಪ್ರಮಾಣದಲ್ಲೇ, ಭವ್ಯವಾಗಿಯೇ ಮಾಡುವ ಆಸೆ ವ್ಯಕ್ತಪಡಿಸಿದರು. ನಾನು ಇದನ್ನು ಶಿವಮೊಗ್ಗದಲ್ಲಿ ಮಾಡಬೇಕೆಂದಿದ್ದಾಗ ಅವರು ಮೊದಲು ಬೆಂಗಳೂರು, ನಂತರ ಮೈಸೂರಿಗೆ ಅದನ್ನು ಒಯ್ದರು. ನಂತರ ಮೈಸೂರು ವಿಶ್ವವಿದ್ಯಾನಿಲಯವನ್ನೂ ತಮ್ಮೊಂದಿಗೆ ಸೇರಿಸಿಕೊಂಡರು. ಈ ಹಬ್ಬ ಮೈಸೂರಿನಲ್ಲಿ ಅದೂ ನಿರ್ದಿಷ್ಟವಾಗಿ ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ನಡೆಯುತ್ತಿರುವುದು ಸಮಂಜಸವೇ ಆಗಿದೆ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ ಕುವೆಂಪು ಹುಟ್ಟಿದ್ದು ಮಲೆನಾಡಿನ ಕುಪ್ಪಳ್ಳಿಯಲ್ಲಾದರೂ ತಮ್ಮ ವ್ಯಕ್ತಿತ್ವವನ್ನು ಪ್ರಬುದ್ಧಗೊಳಿಸಿಕೊಂಡದ್ದು ಮೈಸೂರಿನ ಅಂದಿನ ವಾತಾವರಣದಲ್ಲೇ. ಮತ್ತೆ ಅವರು ಸಾವಿನವರೆಗೂ ಬದುಕಿದ್ದು ಇಲ್ಲಿಯೇ. ಈ ಅರ್ಥದಲ್ಲಿ ಮೈಸೂರು ಅವರ ಕರ್ಮಭೂಮಿ. ಕನ್ನಡ ಸಾಹಿತ್ಯಲೋಕದ ದೃಷ್ಟಿಯಲ್ಲಿ ಕುವೆಂಪು ಅಂದರೆ ಮೈಸೂರು, ಮೈಸೂರು ಅಂದರೆ ಕುವೆಂಪು ಎಂದೇ ಆಗಿಬಿಟ್ಟಿದೆ. ಇನ್ನು ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಮೊದಲು ಅಧ್ಯಾಪಕರಾಗಿ, ನಂತರ ಅದರ ಕುಲಪತಿಯಾಗಿ ಅದನ್ನು ಅನನ್ಯವಾಗಿ ಬೆಳೆಸಿದ ಕಥೆ ಎಲ್ಲರಿಗೂ ಗೊತ್ತು. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಅವರು ಈ ವಿಶ್ವವಿದ್ಯಾನಿಲಯಕ್ಕೆ ಕನ್ನಡ ಸಂಸ್ಕೃತಿಯ ಕಿರೀಟವನ್ನು ತೊಡಿಸಿದರು ಎಂದು ಹೇಳಬೇಕು.

ಈಗ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ವಿಷಯಕ್ಕೇ ಬರುವುದಾದರೆ, ನಾನು ನನ್ನ ಮಾತುಗಳ ಮೊದಲಲ್ಲಿ ಈ ಕಾದಂಬರಿಯ ವಿಶಿಷ್ಟ–ವಿಶೇಷತೆಯ ಪ್ರಸ್ತಾಪ ಮಾಡಿದೆ. ಹೌದು ಈ ಕಾದಂಬರಿ ಕನ್ನಡದಲ್ಲಿ ಮಾತ್ರವಲ್ಲ, ಜಾಗತಿಕ ಕಾದಂಬರಿಗಳ ನನ್ನ ಸೀಮಿತ ಜ್ಞಾನವನ್ನೂ ದುರ್ಲಕ್ಷಿಸಿ ಹೇಳುವುದಾದದರೆ, ವಿಶ್ವದ ಕಾದಂಬರಿಗಳ ಪೈಕಿಯೇ ವಿಶಿಷ್ಟ ಸ್ಥಾನದಲ್ಲಿ ನಿಲ್ಲುವಂತಹದ್ದು. ಮೊದಲಿಗೆ ಇದು ಕಾದಂಬರಿ ಎಂದರೇನು? ಎಂಬ ಬಗೆಗಿದ್ದ ನಮ್ಮ ಪರಿಕಲ್ಪನೆಯನ್ನೇ ಮೂಲಭೂತವಾಗಿ ಬದಲಾಯಿಸಿತು. ಎರಡನೆಯದಾಗಿ ಅದು ಆವರೆಗೆ ಕಾದಂಬರಿಗಳನ್ನು ಕಟ್ಟುತ್ತಿದ್ದ ವಾಸ್ತವತಾವಾದದ

ನೆಲೆಗಳನ್ನೇ ಮಿಕ್ಕಿ ಮೀರಿ ಹೋಯಿತು. ನಂತರದಲ್ಲಿ ಜಾಗತಿಕ ನೆಲೆಯಲ್ಲಿ ವಾಸ್ತವತಾವಾದದಲ್ಲಿ ಹಲವು ಪ್ರಯೋಗಗಳು ನಡೆದುಬಾದರೂ 'ಮಲೆಗಳಲ್ಲಿ 'ಮದುಮಗಳು'ವಿನಲ್ಲಿ ಕಾಣುವ ಪ್ರಯೋಗ ವಿಶ್ವವಿಶಿಷ್ಟವಾದದ್ದು. ಚರಿತ್ರೆ-ವರ್ತಮಾನ-ಭವಿಷ್ಯಗಳು ಅಭಿನ್ನವಾಗಿ ಸಹಜ ಸಂಗಮವೆಂಬಂತೆ ಏಕೀಭವಿಸಿ, ಅಖಂಡ ಕಾಲವೆಂಬ ತೊಟ್ಟಿಲಲ್ಲಿ ಒಂದು ಹೊಸ ವಾಸ್ತವವನ್ನು ನಿರ್ಮಿಸುವ ಸೋಜಿಗವನ್ನು ಕಾದಂಬರಿಯಲ್ಲಿ ಕಾಣಬಹುದು. ಅದು ವಾಸ್ತವತಾವಾದದ ಈ ಯಾವ-ಸಮಾಜವಾದಿ ವಾಸ್ತವತಾವಾದದಿಂದ ಹಿಡಿದು ಮಾಂತ್ರಿಕ ವಾಸ್ತವತಾವಾದವರೆಗಿನ-ಪ್ರಯೋಗಗಳ ತೆಕ್ಕೆಗೆ ಸೇರದ್ದು. ಅಪ್ಪಟ ಭಾರತೀಯ ವಾದದ್ದು; ಕನ್ನಡದ್ದೇ ಆದದ್ದು, ಇದಕ್ಕೆ ನೆಪವಾಗಿ ಒದಗಿ ಬಂದಿರುವುದು ಕನ್ನಡ ಭಾಷೆ ಮತ್ತು ಸಂಸ್ಕೃತಿ ಕೋಶಗಳು. ಹಾಗೆಂದೇ ನಾನು ಹಿಂದೊಮ್ಮೆ ಈ ಕಾದಂಬರಿಯನ್ನು ಆಧುನಿಕ ಕನ್ನಡ ಸಂಸ್ಕೃತಿಯ ಮಹಾಕಾವ್ಯ ಎಂದು ಬಣ್ಣಿಸಿದ್ದೆ. ಕನ್ನಡಿಗರ ಕುಲಚರಿತ್ರೆ- ಯೆಂದೂ ಕರೆದಿದ್ದೆ. ನಾನು ಇದನ್ನು ಇಲ್ಲಿ ವಿಸ್ತರಿಸಲು ಹೋಗದೆ, ಮುಂದಿನ ಪ್ರಬಂಧ- ಕಾರರು ಚರ್ಚಿಸಲು ಬಿಡುತ್ತೇನೆ.

ಕಾದಂಬರಿಯನ್ನು ಬಂಡವಾಳಶಾಹಿ ಯುಗದ ಮಹಾಕಾವ್ಯ ಎಂದು ಕರೆಯಲಾಗುತ್ತದೆ. ಅಂದರೆ ಮಹಾಕಾವ್ಯದ ಸೃಷ್ಟಿಗೆ ಅಗತ್ಯವಾದ ಕಾಲ ಪರಿಸ್ಥಿತಿ ಮುಗಿದು, ಅದು ಕಾದಂಬರಿಯ ರೂಪದಲ್ಲಿ ಹೊರಹೊಮ್ಮುವ ಕಾಲಪರಿಸ್ಥಿತಿಯಲ್ಲಿ ನಾವಿದ್ದೇವೆ ಎಂಬುದು ಇದರ ಅರ್ಥ. ಆದರೆ ಬಂಡವಾಳಶಾಹಿ ಎಂದರೆ ಅದು ಹುಟ್ಟಿದ ಯೂರೋಪ್‌ನಲ್ಲಿ ಒಂದು ಅರ್ಥ ಪಡೆದಿದ್ದರೆ, ಅದಕ್ಕೆ ಬಲಿಯಾದ ಭಾರತದಂತಹ ಏಷಿಯಾ ದೇಶಗಳಲ್ಲಿ ಅದು ಇನ್ನೊಂದು ಅರ್ಥ ಪಡೆಯವುದು; ಪಡೆದಿದೆ ಕೂಡ. ಹೀಗಾಗಿ ನಮ್ಮ ಕಾದಂಬರಿಗಳನ್ನು, ವಿಶೇಷವಾಗಿ 'ಮಲೆಗಳಲ್ಲಿ ಮದುಮಗಳು'ವಿನಂತಹ ಕಾದಂಬರಿಯನ್ನು ಬಂಡವಾಳಶಾಹಿ ಎಂಬ ಆರ್ಥಿಕ-ರಾಜಕೀಯ ವಿದ್ಯಮಾನವೊಂದರ ಪರಿಪ್ರೇಕ್ಷ್ಯದಲ್ಲಿ ನೋಡಲಾಗದೆಂದೇ ನನ್ನ ಅಭಿಪ್ರಾಯ. ಬದಲಾಗಿ, ಬಂಡವಾಳಶಾಹಿಯ ಜೊತೆಗೇ ಹುಟ್ಟಿದ ಪಶ್ಚಿಮದ ಆಧುನಿಕತೆಯೊಂದಿಗೆ ಭಾರತ- ದಂತಹ ದೇಶದ ಒಂದು ಸಮಾಜ ಮುಖಾಮುಖಿಯಾದ ರೀತಿ-ನೀತಿಗಳ ನೆಲೆಯಲ್ಲಿ ನೋಡಿದಾಗ ಮಾತ್ರ ಮೂಲತಃ ಒಂದು ಸಾಂಸ್ಕೃತಿಕ ಪಠ್ಯವೂ ಆಗಿರುವ ಒಂದು ಕಾದಂಬರಿಯ ಚಾರಿತ್ರಿಕ ಮಹತ್ವವನ್ನೂ, ವರ್ತಮಾನದ ಪ್ರಸ್ತುತತೆಯನ್ನೂ ಅರ್ಥ ಮಾಡಿಕೊಳ್ಳಬಹದೆಂದು ನಾನಾದರೂ ಭಾವಿಸಿದ್ದೇನೆ.

ಹಾಗೆ ನೋಡಿದರೆ ಕುವೆಂಪು ಅವರ ಮೊದಲ ಕಾದಂಬರಿ 'ಕಾನೂರು ಹೆಗ್ಗಡತಿ' ಯಲ್ಲೇ ಆಧುನಿಕತೆಯೊಡನೆಯ ಮುಖಾಮುಖಿಯನ್ನು ನೋಡಬಹುದು. ಆ ಕಾದಂಬರಿಯ ನಾಯಕ ಹೂವಯ್ಯನ ಪಾತ್ರ ನಿರ್ಮಿತಿಯ ವಿನ್ಯಾಸಗಳಲ್ಲಿ ಇದನ್ನು ಕಾಣಬಹುದು. ಆದರೆ ಇದು ನೇರವಾಗಿ. ಹೆಚ್ಚು ಢಾಳಾಗಿ ಮತ್ತು ಒಂದು ಪಾತ್ರದ

ಮಿತಿಗಳಲ್ಲಿ ಸಂಭವಿಸುವ ಮುಖಾಮುಖಿ. ಹಾಗಾಗಿಯೇ ಈ ಕಾದಂಬರಿ ಇದ್ದಕ್ಕಿದ್ದಂತೆ ಮುಗಿದಂತಾಗಿ, ಅದು ಸೃಷ್ಟಿಸುವ ದುರಂತವೂ ಒಂದು ಸಾಂಸ್ಕೃತಿಕ ಆಯಾಮವನ್ನು ಪಡೆಯದೆ, ದಿಕ್ಕೆಟ್ಟಂತೆ ನಮ್ಮ ಪರಂಪರೆಯ ಮೊದಲ ಆಧುನಿಕತಾವಾದಿಯಾದ ಬುದ್ಧನಿಗೆ ಬಹುಸರಳವಾಗಿ ಶರಣಾಗುತ್ತದೆ. ನಾನು ಈ ಮಾತನ್ನು ಈ ಕಾದಂಬರಿಗೆ ಇರುವ ಅದರದ್ದೇ ಆದ ಸಾಹಿತ್ಯಿಕ ಸಿರಿ ಸಮೃದ್ಧಿಯನ್ನು ದುರ್ಲಕ್ಷಿಸದೇ ಗೌರವದೊಂದಿಗೆ ಗಮ-ನಿಸಿಯೇ ಹೇಳುತ್ತಿರುವೆ. ಆದರೆ 'ಮಲೆಗಳಲ್ಲಿ ಮದುಮಗಳು' ನಾನು ಮೊದಲೇ ಹೇಳಿದಂತೆ ತನ್ನ ಬಹು ಆಯಾಮಗಳ ಕಥನ ಕ್ರಮದಿಂದಾಗಿ ಆಧುನಿಕತೆಯನ್ನು ಮುಖಾಮುಖಿಯಾಗುವ ರೀತಿ-ನೀತಿಗಳು ಕನ್ನಡಕ್ಕೇ ಅನನ್ಯವೆನ್ನಿಸುವವು.. ಈ ಕೃತಿ ತನ್ನ ವೈವಿಧ್ಯಮಯ ಪ್ರಕೃತಿ ಮತ್ತು ಮನುಷ್ಯ ಹಾಗೂ ಪ್ರಾಣಿ ಲೋಕವನ್ನು ತನ್ನ ಪೂರ್ಣ ದೃಷ್ಟಿಯಲ್ಲಿ ಹಿಡಿದು ನಮ್ಮ ಮುಂದೆ ನಿಲ್ಲಿಸುವ ದೃಶ್ಯಾವಳಿ ಮತ್ತು ಪಾತ್ರಗಳು ನಮ್ಮ ಪ್ರಜ್ಞೆಯ ಹಲವು ಅಜ್ಞಾತ ಸ್ತರಗಳನ್ನು ತಾಗಿ ಪರಂಪರೆ ಮತ್ತು ಆಧುನಿಕತೆಗಳ ಒಂದು ವಿವೇಚನಾಪೂರ್ಣ ಸಮನ್ವಯದ ಮೂಲಕ ಹುಟ್ಟಿಸುವ ಸರ್ವೋದಯದ ಅರಿವು ಅನುಭಾವಿಕವಾದದ್ದು. ಇಲ್ಲಿಯ ವಿವೇಕಾನಂದರು ದೂರದ ಅಮೆರಿಕೆಯ ಸಹಸ್ರ ದ್ವೀಪೋದ್ಯಾನದಲ್ಲಿ ಕಾಣುವ ಕಾಣ್ಕೆಯಂತೆ, ಹೂವಳ್ಳಿಯ ಕಾಡಿನಲ್ಲಿ ಕಾಣಿಸಿಕೊಳ್ಳುವ ಗಡ್ಡದಯ್ಯನ ದರ್ಶನದಂತೆ ಕಲಕತ್ತೆಯ ಭವತಾರಿಣಿಯೇ ಹೂವಳ್ಳಿಯ ಮಾರಮ್ಮ ನಾಗುವ ಬೆರಗಿನಂತೆ.

ಈ ಕಾದಂಬರಿಯನ್ನು ಕುವೆಂಪು 'ಕಾನೂರು ಹೆಗ್ಗಡತಿ'ಯನ್ನು ಬರೆದ ಹಲವು ವರ್ಷಗಳ ನಂತರ ಬರೆದರಾದರೂ, ಇದು ಹೇಳುವ ಕಥೆ ಅದು ಹೇಳುವ ಕಥೆಗಿಂತ ಬಹು ಹಿಂದಿನ ಕಾಲಕ್ಕೆ ಸೇರಿದ್ದು. ಆಧುನಿಕತೆ ಇನ್ನೂ ನಮ್ಮ ಮಲೆನಾಡಿನ ಗ್ರಾಮ ಸಮಾಜಕ್ಕೆ ಮೊದಲ ಹೆಜ್ಜೆಗಳನ್ನು ಇಡುತ್ತಿದ್ದ ಕಾಲವದು. ಹಾಗಾಗಿ ಆಧುನಿಕತೆ ಯೊಡನೆಯ ಇಲ್ಲಿನ ಮುಖಾಮುಖಿ ಬೇರುಮಟ್ಟದ್ದು ಮತ್ತು ಬಹು ಮೂಲಭೂತ ವಾದದ್ದು. ಜೊತೆಗೆ ನಾಯಕನಿಲ್ಲದ ಈ ಕಾದಂಬರಿಯ ಈ ಮುಖಾಮುಖಿ ಬಹುಮುಖಿ ಯಾದದ್ದು. ಸಮಾಜದ ಹಲವು ಸ್ತರಗಳು ಈ ಮುಖಾಮುಖಿಯಲ್ಲಿ ಭಾಗವಹಿಸಿ ಪ್ರತಿಸ್ಪಂದಿಸಿದ ರೀತಿ ನೀತಿಗಳು ಒಂದು ಅತ್ಯದ್ಭುತ ಜೀವಂತಿಕೆಯ ವರ್ಣಮಯ ಲೋಕವನ್ನು ಸೃಷ್ಟಿಸಿ ಈ ಮುಖಾಮುಖಿಯ ಶೋಧನೆಯನ್ನು ಹೆಚ್ಚು ಸೂಕ್ಷ್ಮ ಮತ್ತು ಸಂಕೀರ್ಣಗೊಳಿಸುವಂತಹವು. ಈ ದೃಷ್ಟಿಯಿಂದ ಈ ಕಾದಂಬರಿಯ ದೇವಯ್ಯ ಮತ್ತು ಮುಕುಂದಯ್ಯ ಆಧುನಿಕತೆಯನ್ನು ಎದುರಾಗುವ ಪರಿ ನಿರ್ಣಾಯಕವಾಗಿ ಬೇರೆ ಬೇರೆ ಯಾದದ್ದು ಮತ್ತು ಈ ಕಾದಂಬರಿ ಧ್ವನಿಸುವುದು ಮುಕುಂದಯ್ಯನ ಪರಿಯ ಸಾಧುತ್ವವನ್ನು ಎಂಬುದು ಇಲ್ಲಿ ಮುಖ್ಯ.

ಈ ಮುಕುಂದಯ್ಯನ ಪರಿ ಇಂದು ಹೆಚ್ಚು ಗಮನಾರ್ಹವೆನಿಸುವುದೂ ಹೌದು. ಇಂದಿನ ರೂಕ್ಷ ಹಿಂದುತ್ವವಾದಿ ರಾಜಕಾರಣಕ್ಕೆ ಸಂವಾದಿಯಾಗಿ ನಿಲ್ಲುವ ಈ ಪರಿ ಹಿಂದು ಧರ್ಮ ಆಧುನಿಕವಾಗಬೇಕಾದ ಪರಿಯನ್ನೂ ಹೇಳುತ್ತಾ ಹಿಂದುತ್ವವಾದಿಗಳ ಹಿಂದೂ ಧರ್ಮದ ನಿರೂಪಣೆಯನ್ನು ಪ್ರಶ್ನಿಸುತ್ತದೆ. ಜೊತೆಗೆ ದೇವಯ್ಯನ ಶೈಲಿಯ ಆಧುನಿಕತೆಯ ಕುರುಡು ಆರಾಧನೆಯಿಂದಾಗಿ ನಮ್ಮ ಆಧುನಿಕತಾವಾದಿಗಳಿಂದ ಬಹು ತಪ್ಪು ತಿಳುವಳಿಕೆಗೆ ಒಳಗಾಗಿರುವ ವಿವೇಕಾನಂದರ ಧರ್ಮಜಾಗೃತಿ ಅಥವಾ ಎಚ್ಚರದ ಮಾದರಿಯನ್ನು ಮರುಶೋಧನೆಗೆ ಒಳಪಡಿಸಿ ಅದನ್ನು ಇಂದಿನ ಸಂದರ್ಭಕ್ಕೆ ಉಚಿತವಾದ ರೀತಿಯಲ್ಲಿ ಮುನ್ನೆಲೆಗೆ ತರಲು ಪ್ರೇರೇಪಿಸುವಂತಿದೆ.

ಗುತ್ತಿ-ತಿಮ್ಮಿ ಮತ್ತು ಮುಕುಂದಯ್ಯ-ಚಿನ್ನಮ್ಮರ ಪ್ರೇಮ ಪ್ರತಿನಿಧಿಸುವ ಗಂಡು ಹೆಣ್ಣುಗಳ ನಡುವಣ ಸಹಜ ಪ್ರೇಮಕ್ಕೆ ಅಡ್ಡಿಯಾಗುವ ಕಲ್ಲೂರು ಮಂಜಭಟ್ಟರು ಮತ್ತು ಅವರ ಜಾಲ ಪ್ರತಿನಿಧಿಸುವ ಊಳಿಗಮಾನ್ಯಶಾಹಿ ಮತ್ತು ಪುರೋಹಿತಶಾಹಿಯೆಂಬ ಅಸಹಜ ಸಾಮಾಜಿಕ ಶಕ್ತಿಗಳ ವಿರುದ್ಧ ಸಹಜ ಸಾಮಾಜಿಕ ಸಂಬಂಧಗಳ ಒತ್ತಡಗಳಿಂದಾಗಿ ಬಂಡೇಳುವ ವಿವಿಧ ಸಾಮಾಜಿಕ ವರ್ಗಗಳು ಈ ಬಂಡಾಯದ ಅವಿಭಾಜ್ಯ ಭಾಗವಾಗಿ ತಮ್ಮೊಳಗೊಂದು ಅಧ್ಯಾತ್ಮಿಕ ಸಂಚಾರದ ಮಿಂಚೊಂದನ್ನು ಅನುಭವಿಸುತ್ತಾ ಸರ್ವೋದಯದೆಡೆಗೆ-'ಮುಕ್ತಿ'ಯೆಡೆಗೆ ಮುಖ ಮಾಡಿ ನಿಲ್ಲುವ ಅಪೂರ್ವ ವಿದ್ಯಮಾನವೊಂದನ್ನು ಈ ಕಾದಂಬರಿಯಲ್ಲಿ ನಾವು ನೋಡಬಹುದು. ಇಲ್ಲಿ ಅಧ್ಯಾತ್ಮಿಕ ಮಿಂಚಿನ ಸಂಚಾರವೆಂದರೆ ಮತ್ತೇನಲ್ಲ. ಅದು ತಮ್ಮೊಳಗೆ ಅಂತರ್ಗತವಾಗಿರುವ ವಿಶ್ವಶಕ್ತಿಯ ಅರಿವು. ಈ ಬಂಡಾಯ ಸರ್ವರಿಗೂ ಪ್ರವೇಶವಿರುವ ಒಂದು ಶಾಲೆಯ ಸ್ಥಾಪನೆಯ ಸೂಚನೆಯ ಮೂಲಕ ವಿದ್ಯೆಯ ಸಾರ್ವತ್ರೀಕರಣದ ಹಾದಿ ಸುಗಮಗೊಳಿಸುವಂತೆ ಈ ಕಥೆ ವಿನ್ಯಾಸಗೊಂಡಿದೆ. ಈ ಮೂಲಕ ಕಾದಂಬರಿಯು ಗಂಡು-ಹೆಣ್ಣಿನ ಸಹಜ ಪ್ರೇಮ ಮತ್ತು ವಿದ್ಯೆಯ ಸಾರ್ವತ್ರೀಕರಣಗಳೇ ಸಮಾಜದ ಜಡ ಸಂಬಂಧಗಳನ್ನು ಚಲನಶೀಲಗೊಳಿಸುವ ನಿಮಿತ್ತ ಶಕ್ತಿಗಳನ್ನ ನಿರ್ಮಿಸಬಲ್ಲವು ಎಂದು ಹೇಳುತ್ತಾ ಸಹಜ ಪ್ರೇಮ ಮತ್ತು ಸಾರ್ವತ್ರಿಕ ವಿದ್ಯೆಗಳನ್ನು ಆಧುನಿಕತೆಯ ಮೂಲ ಮೌಲ್ಯಗಳಾಗಿ ಸ್ವಾಗತಿಸುತ್ತದೆ ಎನ್ನಬಹುದು.

ಈ ಕಾದಂಬರಿಯ ನಿಜಸತ್ವವನ್ನು ಗುರುತಿಸುವ ಕೈ ಸನ್ನೆಯಂತಹ ಒಂದು ಮಾತನ್ನು ಇಲ್ಲಿ ನಿಮ್ಮ ಗಮನಕ್ಕೆ ತರಬೇಕು. ಅದು ಕುವೆಂಪು ಅವರ ಸಾಹಿತ್ಯವನ್ನು ಕನ್ನಡ ಸಾಹಿತ್ಯ ಚರಿತ್ರೆಯ ವಿಶಾಲ ಭಿತ್ತಿಯಲ್ಲಿ ಅರಿಯಲು ಕೆಲವು ಸೂಚನೆಗಳನ್ನು ನೀಡಿದ ತೇಜಸ್ವಿಯವರ ಮಾತು. ಸಾಹಿತ್ಯ ರಚನೆಯ ಪರಿಪೂರ್ಣ ಪ್ರತೀಕವೆಂದು ಹೇಳಲಾಗುವ (ಶ್ರೀರಾಮಾಯಣ ದರ್ಶನಂ' ಎಂಬ) ಒಂದು ಮಹಾಕಾವ್ಯವನ್ನು ರಚಿಸಿದ ನಂತರವೂ ಕುವೆಂಪು ಅವರಿಗೆ ಈ ಕಾದಂಬರಿಯನ್ನು ಬರೆಯುವ ಕಾರಣಗಳೇನಿದ್ದವು? ಎಂಬ

ಪ್ರಶ್ನೆ ಹಾಕುವ ಮೂಲಕ ಅವರು, ಕುವೆಂಪು ಅವರ ನಿಜಸತ್ವ ಅವರ ಮಹಾಕಾವ್ಯದಲ್ಲಿ ಅಭಿವ್ಯಕ್ತಗೊಳ್ಳಲಾಗದೆ 'ಮಲೆಗಳಲ್ಲಿ ಮದುಮಗಳು; ಕಾದಂಬರಿ ರಚನೆಗಾಗಿ ಅದು ಕಾಯುತ್ತಿತ್ತು ಎಂದು ಅವರು ಸೂಚಿಸುತ್ತಾರೆ. ಅಂದರೆ ಕುವೆಂಪು ಅವರ ಹೊಕ್ಕುಳ ರಚನೆ ಈ ಕಾದಂಬರಿಯೇ ಹೊರತು ಅವರ ಮಹಾಕಾವ್ಯವಲ್ಲ. ಕುವೆಂಪು ಅವರ ನಿಜವಾದ ಮಹಾಕಾವ್ಯವೆಂದರೆ ಈ ಕಾದಂಬರಿಯೇ ಎಂಬ ಈ ಕಾದಂಬರಿ ಕುರಿತು ಬಂದಿರುವ ವಿಮರ್ಶೆಯ ಮಾತನ್ನು ನಾವು ಈ ಹಿನ್ನೆಲೆಯಲ್ಲೇ ಅರ್ಥ ಮಾಡಿಕೊಳ್ಳಬೇಕೆನಿಸುತ್ತದೆ.

ಹಾಗೆ ನೋಡಿದರೆ, ತೇಜಸ್ವಿಯವರ ಈ ಮಾತುಗಳು ಕುವೆಂಪು ಪ್ರತಿಭೆಯನ್ನು ಅರ್ಥ ಮಾಡಿಕೊಳ್ಳಲು ನಿಜವಾದ ಕೀಲಿ ಕೈ ಒದಗಿಸಿತೆಂದೇ ಹೇಳಬೇಕು. ಏಕೆಂದರೆ, ಈ ಕಾದಂಬರಿ ಪ್ರಕಟವಾದಾಗ ಕನ್ನಡ ಸಾಹಿತ್ಯವನ್ನು ಆಗ ಆಳುತ್ತಿದ್ದ ನವ್ಯದ ಅಧಿಪತಿಗಳಿಂದ ಅಂತಹ ಸ್ವಾಗತವೇನೂ ದೊರೆಯಲಿಲ್ಲ. ಅದಿನ್ನೂ 'ಸಂಸ್ಕಾರ'ದ ಮಂಪರಿನಲ್ಲಿಯೇ ಇತ್ತು. ಅವರು ಅದರ ಸಮೃದ್ಧ ಸಂಸ್ಕೃತಿ ವರ್ಣನೆಯನ್ನು ವಿವರಗಳ ಸೊಕ್ಕು ಎಂದು ಕರೆದರು. ಮೈಯೆಲ್ಲ ಜೀವ ತುಂಬಿಕೊಂಡಿದ್ದ ಈ ಕೃತಿಗೆ ಕೇಂದ್ರ ಪ್ರಜ್ಞೆ ಇಲ್ಲದೆ ಸೊರಗಿದೆ ಎಂದು ಟೀಕಿಸಲಾಯಿತು. ಆದರೆ ಮುಖ್ಯವಾಗಿ ಗುತ್ತಿ-ಸುಬ್ಬಣ್ಣ ಹೆಗ್ಗಡೆ-ಪೀಂಚಲು ಎಂಬ ಮೂರು ಜೀವಶಕ್ತಿಗಳ ತ್ರಿಕೋನದ ಮೇಲೆ ಕಟ್ಟಲ್ಪಟ್ಟಿರುವ ಈ ಕೃತಿ ಮುಟ್ಟಿದೆಡೆಯಲ್ಲೆಲ್ಲ ಜೀವಂತವಾಗಿರುವುದು ಸಹಜವೇ ಆಗಿದೆ. ಒಟ್ಟಿನಲ್ಲಿ ಕೃತಿಯ ಅಧ್ಯಯನ ಒಟ್ಟು ಕನ್ನಡ ಸಾಹಿತ್ಯ-ಸಂಸ್ಕೃತಿಗಳ ತಲಸ್ಪರ್ಶಿ ಅಧ್ಯಯನವೇ ಆಗಿರುತ್ತದೆ.

ನಾನು ಖಚಿತಪಡಿಸಿಕೊಂಡಿರುವಂತೆ ಈ ಕಾದಂಬರಿಯನ್ನು ಪದವಿ ತರಗತಿಗೆ ಕನ್ನಡ ಸಾಹಿತ್ಯ ಬೋಧಿಸುವ ಮೇಷ್ಟ್ರುಗಳಿರಲಿ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಾಹಿತ್ಯ ಬೋಧಿಸುವ ಮೇಷ್ಟ್ರುಗಳಲ್ಲೂ ಬಹಳ ಜನರೂ ಓದಿಲ್ಲ. ಈ ಕಾರ್ಯಕ್ರಮವಾದರೂ ಅಂತಹವರು ಈ ಕಾದಂಬರಿಯನ್ನು ಓದಲು ಪ್ರೇರೇಪಣೆಯಾಗಲಿ ಎಂದು ಹಾರೈಸುವೆ. ನಮಸ್ಕಾರ.

೨. ಮಲೆಗಳಲ್ಲಿ ಮದುಮಗಳಿಗೆ ಕಣ್ಣಾಕಿ : ಉದ್ಘಾಟನಾ ಮಾತುಗಳು

– ದೇವನೂರ ಮಹಾದೇವ

ಕನ್ನಡದ ಮೊದಲ ಕಾದಂಬರಿ 'ಇಂದಿರಾ ಬಾಯಿ'ಗೆ ನೂರು ವರ್ಷ ತುಂಬಿದ ನೆನಪಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ಅಲ್ಲಿ 'ಮಲೆಗಳಲ್ಲಿ ಮದುಮಗಳು' ಶತಮಾನದ ಕಾದಂಬರಿ ಎಂದೆ. ಈ ಅನ್ನಿಸಿಕೆ ಕನ್ನಡಕ್ಕೆ ಮಾತ್ರ ಅಲ್ಲ ಭಾರತದ ವ್ಯಾಪ್ತಿಗೂ ಈಗಲೂ ನಿಜ ಅನ್ನಿಸುತ್ತಿದೆ.

ಮಲೆಗಳಲ್ಲಿ ಮದುಮಗಳನ್ನು ನಾನು ಮೊದಲು ಓದಿದಾಗ ಬಿಎ ಓದುತ್ತಿದ್ದೆ. ಆಗ ನನ್ನ ಸುತ್ತಮುತ್ತ ಇದ್ದ ವಿಮರ್ಶಕರು ಮಲೆಗಳಲ್ಲಿ ಮದುಮಗಳನ್ನು ಕತ್ತರಿಸಿ ತುಂಡು ಹಾಕುತ್ತಿದ್ದರು. ಆಗ ಅವರು ನನ್ನನ್ನು ಪ್ರಭಾವಿಸುತ್ತಿದ್ದವರೆ. ಆದರೂ ಅವರ ಮುಂದೆ ಒಂದು ಪ್ರಶ್ನೆ ಮುಂದಿಡುತ್ತಿದ್ದೆ. "ಇದುವರೆಗೆ ಕನ್ನಡದಲ್ಲಿ ಉತ್ತಮ ಕಾದಂಬರಿಗಳೆಂದು ಪರಿಗಣಿಸಲ್ಪಟ್ಟ ನಾಕಾರು ಕಾದಂಬರಿಗಳನ್ನು ತಕ್ಕಡಿಯ ಒಂದು ತಟ್ಟೆಯಲ್ಲಿಟ್ಟು, ಇನ್ನೊಂದು ತಟ್ಟೆಯಲ್ಲಿ ಮಲೆಗಳಲ್ಲಿ ಮದುಮಗಳನ್ನು ಇಟ್ಟರೂ ಗಾತ್ರದಲ್ಲೂ ಗುಣದಲ್ಲೂ ಮಲೆಗಳಲ್ಲಿ ಮದುಮಗಳು ಹೆಚ್ಚು ತೂಗುತ್ತದೆ. ತಕ್ಕಡಿಗೆ ಏನಾಗಿದೆ?" ಆಗ ಮುಗ್ಧವಾಗಿ ಕೇಳುತ್ತಿದ್ದೆ. ಈಗ ನನ್ನನ್ನು ನಾನು ಸ್ವಲ್ಪ ಪ್ರಬುದ್ಧ ಅಂದುಕೊಳ್ಳುವುದಾದರೆ, ನೀವೂ ಉದಾರವಾಗಿ ಪ್ರಬುದ್ಧ ಎಂದು ಪರಿಗಣಿಸುವುದಾದರೆ– ಈಗಲೂ ನನ್ನ ಪ್ರಶ್ನೆ ಇಷ್ಟೆ: 'ತಕ್ಕಡಿಗೆ ಏನಾಗಿದೆ?'

ಕ್ಷಮೆ ಇರಲಿ, ವಿಮರ್ಶೆ ನನಗೆ ಆಗಲೂ ಬರುತ್ತಿರಲಿಲ್ಲ; ಈಗಲೂ ಬರುವುದಿಲ್ಲ. ಅದಕ್ಕಾಗಿ ಈ ಕಾರ್ಯಕ್ರಮಕ್ಕೆ ಒಪ್ಪಿಕೊಂಡಾಗ ಯಾವ ಕೆಲಸವನ್ನೂ ಮಾಡದೆ 'ಮಲೆಗಳಲ್ಲಿ ಮದುಮಗಳು' ಓದಿ ಮುಗಿಸಿದೆ. ವಿಯಟ್ನಾಂ ಯುದ್ಧದ ಕ್ಷೋಭೆಗೆ ಅಮೇರಿಕಾದ ಪ್ರಜ್ಞಾವಂತ ಆಕಾಶವಾಣಿಯೊಂದು ಟಾಲ್‌ಸ್ಟಾಯ್‌ನ ಜಗತ್ಕೃತಿ 'ವಾರ್ ಅಂಡ್ ಪೀಸ್' ಅನ್ನು ನಿರಂತರವಾಗಿ ಓದಿದಂತೆ, ಓದಿ ಸಂವೇದನೆ ಪಡೆದುಕೊಂಡಂತೆ, ಮಾತಿಲ್ಲದಂತೆ. ಅಂತೆಯೇ 'ಮಲೆಗಳಲ್ಲಿ ಮದುಮಗಳು' ಓದಿದೆ. ಮಲೆಗಳಲ್ಲಿ ಮದುಮಗಳು ಮೇಲೆ ಈ ವಯಸ್ಸಲ್ಲೂ ಕಣ್ಣಾಕಿ ಕಣ್ಣಾಕಿ ನನ್ನ ಕಣ್ಣು ಈಗ ನೋಯುತ್ತಿದೆ.

ಕಾದಂಬರಿಯನ್ನು ಓದಲು ಆರಂಭಿಸಿದೊಡನೆ ಅಲ್ಲಿ ಬದುಕು ಬದುಕತೊಡಗುತ್ತದೆ. ಇಲ್ಲಿ ಕತೆ ಹೇಳುತ್ತಿಲ್ಲ; ಕತೆ ಕಟ್ಟುತ್ತಿಲ್ಲ; ಇಲ್ಲೆ ವರ್ತಮಾನದಲ್ಲೆ ಜೀವನ ಹುಟ್ಟಿ ಚಲಿಸುತ್ತಿದೆ

ಅನ್ನಿಸತೊಡಗುತ್ತದೆ, ನಿಧಾನಗತಿಯಲ್ಲಿ, ಸಾವಧಾನವಾಗಿ. ಇಲ್ಲಿ ಇದಾಗುತ್ತಿದ್ದರೆ ಅದೇ ಕಾಲದಲ್ಲಿ ಅಲ್ಲಿ ಇನ್ನೊಂದು ಜರುಗುತ್ತ ಆಗಲೇ ಅದೇ ವರ್ತಮಾನದಲ್ಲೇ ಮತ್ತೊಂದೂ ಆಗುತ್ತಾ ಆ ಆಗುವಿಕೆಯಲ್ಲಿ ನಡೆಯುವ ನಮಗೆ ಎಲ್ಲವೂ ಕೂಡಿಕೊಂಡ ಜೀವಜಾಲ ಎದುರಾಗುತ್ತದೆ. ಕಾದಂಬರಿಯ ಆರಂಭದಲ್ಲಿ ಕೃತಿಕಾರ-'ಇಲ್ಲಿ ಅವಸರವೂ ಸಾವಧಾನದ ಬೆನ್ನೇರಿದೆ!' ಎಂದು ಹೇಳಿರುವ ಮಾತು ಮಾತಾಗಿ ಉಳಿಯುವುದಿಲ್ಲ. ಈ ನೋಟವೇ ಕೃತಿಯ ಸಂವೇದನಾಶೀಲತೆಗೂ ಸೂಕ್ಷ್ಮತೆಗೂ ಕಾರಣವೇನೊ ಎಂಬಷ್ಟು. ಕಾದಂಬರಿಯಲ್ಲಿ ಒಂದು ಕಡೆ ಮಾತ್ರ ಸಾವಧಾನ ಮೈ ಮರೆಯುತ್ತದೆ. ಅದೇ ಉಂಗುರದ ಪ್ರಸಂಗ. ಸಾವಧಾನವು ಮೈಮರೆತ ಈ ಗಳಿಗೆಯನ್ನು ಹಿಡಿದುಕೊಂಡು, ಅಳವಡದ ಕಾದಂಬರಿಯನ್ನು ನಾಟಕ ಪ್ರಕಾರಕ್ಕೆ ಅಳವಡಿಸಲು ಎಪಿಕ್ ಹಿಡಿಯುವ ಸಾಮರ್ಥ್ಯದ ಪ್ರತಿಭಾವಂತರಾದ ಬಸವಲಿಂಗಯ್ಯ, ಕೆ.ವೈ. ನಾರಾಯಣಸ್ವಾಮಿ ಸಾಹಸ ಮಾಡಿದ್ದಾರೆ. ಮೈಮರೆತ ಕ್ಷಣದಲ್ಲಿ ಮೂಗುದಾರ ಹಾಕಿದ್ದಾರೆ. ನಾನಿಲ್ಲಿ ಹೇಳಲು ಕಷ್ಟಪಡುತ್ತಿರುವುದು ಇಷ್ಟೆ: 'ಮಲೆಗಳಲ್ಲಿ ಮದುಮಗಳು' ಕೃತಿಯ ಆಳ ಅಗಲ ಅಳತೆಗೆ ಅಳವಡದು ಎಂಬುದನ್ನಷ್ಟೆ.

ನನ್ನ ಭಾವಕೋಶದೊಳಗೆ ಇರುವ ರಾಮಾಯಣದ ಅರಣ್ಯವನ್ನು ಬಿಟ್ಟರೆ ಬಹುಶಃ 'ಮಲೆಗಳಲ್ಲಿ ಮದುಮಗಳು'ವಿನಲ್ಲೆ ಅರಣ್ಯ ಬೃಹತ್ ಆಗಿ ಮೈ ತಳೆದಿರುವುದು ಅನ್ನಿಸುತ್ತದೆ. ಈ ಅರಣ್ಯದೊಳಗೆ ಅರಣ್ಯವನ್ನೂ ಒಳಗೊಂಡ ಜೀವ ಸಂಕುಲದ ಪ್ರವಾಹವು ಏರಿಳಿತಗಳಲ್ಲಿ ಹರಿಯುತ್ತದೆ. ಇದರೊಳಗೆ ಕಗ್ಗಂಟಾಗಿರುವ ಮನುಷ್ಯನ ಕತೆಯೂ ಬರುತ್ತದೆ. ಹೀರೋ ಹುಲಿಯ ಎಂಬ ನಾಯಿಯ ಕತೆಯೂ ಬರುತ್ತದೆ. ಜಡವಾದ ಹುಲಿಕಲ್ಲು ನೆತ್ತಿಯೂ ಕೂಡ ಕಂಪನಗಳಿಂದ ಜೀವಂತವಾಗಿದೆ. ಪ್ರಕೃತಿಯ ಜೀವಂತಿಕೆ ಹೇಗಿದೆ ಎಂಬುದಕ್ಕೆ ಕಾದಂಬರಿಯ ಪುಟ ೪೭೭ರಿಂದ ಕೆಲವು ವಾಕ್ಯಗಳನ್ನು ಆಯ್ದು ಇಡುತ್ತಿರುವೆ. "ಯಾರು ಬದುಕಲಿ, ಯಾರು ಸಾಯಲಿ, ಯಾರು ಹುಟ್ಟಲಿ, ಹುಟ್ಟದೆ ಹೋಗಲಿ, ಮಳೆಗಾಲ ನಿಲ್ಲುತ್ತದೆಯೆ? ಮಳೆ ಹಿಡಿದು ಕೂತಿತ್ತು. ನಾಲ್ಕು ಪಾದಗಳನ್ನೂ ಬಲವಾಗಿ ಊರಿ!... ಆ ಪ್ರಕೃತಿಯ ಪ್ರತಿರೂಪದ ಸಹ್ಯಾದ್ರಿ ಪರ್ವತ ಕಾನನ ಶ್ರೇಣಿ ಮನುಷ್ಯನ ಅಲ್ಪ ಸುಖದುಃಖಗಳಿಗೆ ಸಂಪೂರ್ಣ ನಿಸ್ಸಂಗಿಯಾಗಿ..." ಎಂದು ಬರುತ್ತದೆ. ಮನುಷ್ಯ ಬದುಕಿನ ಆಸೆ ನಿರಾಸೆ ಕಷ್ಟ ಸುಖ ಶೋಕ ತಾಪಾದಿಗಳು ಯಃಕಶ್ಚಿತಗಳಾಗಿದ್ದುದರಲ್ಲಿ ಆಶ್ಚರ್ಯವೇನು? ಇವೆಲ್ಲಾ ಪ್ರಕೃತಿಯ ಕಡೆಗಣ್ಣಿನ ನೋಟಕ್ಕೂ ಬರಲಾರದೇನೊ ಎಂಬಂತೆ ಬರೆಯುತ್ತಾರೆ. ಈ ಗ್ರಹಿಕೆ ಈ ನೋಟ ಯಾರಿಗೆ ದಕ್ಕಲು ಸಾಧ್ಯ? ತಪಸ್ಸು ಮಾಡಿ ಪ್ರಕೃತಿಯನ್ನು ಸಾಕ್ಷಾತ್ಕರಿಸಿಕೊಂಡು ವರ ಪಡೆದವನಿಗೆ ಸಾಧ್ಯ ಅನ್ನಿಸಿಬಿಡುತ್ತದೆ. ಹರಿಯುತ್ತಿರುವ, ನಿಲುಕದ ಬದುಕಿನಂತೆ ಕೃತಿ ಚಲಿಸುತ್ತದೆ. ಸ್ಪರ್ಶ, ವಾಸನಾ, ಶಬ್ದ, ರುಚಿ ಇವು ಭಾಷೆಯಲ್ಲಿ ಚಿಗುರೊಡೆಯುವಂತೆ ರೂಪ ತಳೆಯುತ್ತದೆ.

ಹೀಗೆ ಇರುವುದ ರಿಂದಲೇ ಏನೋ, 'ಮಲೆಗಳಲ್ಲಿ ಮದುಮಗಳು'ಗೆ ಐವತ್ತೊಂದನೆ ವರ್ಷ ನಡೆಯುತ್ತಿದ್ದರೂ ಮಕ್ಕಳು ಮೊಮ್ಮಕ್ಕಳು ಆಗಿದ್ದರೂ ಕನ್ಯೆಯಂತೆ ಕಂಗೊಳಿಸುತ್ತಿದೆ, ನಿತ್ಯತ್ವದಲ್ಲಿ.

ಈ ಸೋಜಿಗಕ್ಕೆ, ಕೃತಿ ಬರೆಯುವ ಸಂದರ್ಭದಲ್ಲಿ ಕೃತಿಕಾರನ ಮನಸ್ಥಿತಿಯ ಬಗ್ಗೆ ಏನಾರು ಎವಿಡೆನ್ಸ್ ಸಿಗಬಹುದಾ ಎಂದು ಹುಡುಕಿದೆ. Eye witness ಮಗಳು ತಾರಿಣಿ ಚಿದಾನಂದ ಅವರು 'ಮಗಳು ಕಂಡ ಕುವೆಂಪು' ವಿನಲ್ಲಿ ಬರೆಯುತ್ತಾರೆ: 'ಮಲೆಗಳಲ್ಲಿ ಮದುಮಗಳು'ನಲ್ಲಿ ಮುಳುಗಿದ ಕುವೆಂಪು ಅವರಿಗೆ, ಕಾಫಿ ಕುಡಿಯಲು ಬನ್ನಿ ಎಂದರೆ, 'ತಾಳು, ತಾಳು ಚಿನ್ನಮ್ಮ ತಪ್ಪಿಸಿಕೊಂಡು ಹೋಗಬೇಕು. ಹಂಡೆ ಸದ್ದಾಗುತ್ತಿದೆ' ಅನ್ನುತ್ತಾರೆ. ಮದುವೆ ಮನೆ ಗದ್ದಲದಲ್ಲಿ ಹಂಡೆ ಶಬ್ದವಾದಾಗ ಚಿನ್ನಮ್ಮ ಪೀಂಚಲು ಜೊತೆ ರಾತ್ರೋ ರಾತ್ರಿ ಪರಾರಿಯಾಗುವ ಸಂಚು ರೂಪಿತವಾಗಿರುತ್ತದೆ. ಕಾದಂಬರಿ ಬರೆಯುತ್ತಿರುವ ಕುವೆಂಪು ಕೂಡ ಹಂಡೆ ಸದ್ದಿಗಾಗಿ ಆತಂಕದಿಂದ ಆಲಿಸುತ್ತಿದ್ದರು ಅನಿಸುತ್ತದೆ. ಮುಂದೆ ಕುವೆಂಪು "ಅಂತಕ್ಕನ ಮಗಳು ಕಾವೇರಿಯ ದುರಂತ ಸಾವನ್ನು ತಪ್ಪಿಸಲು ಎಷ್ಟು ಪ್ರಯತ್ನಿಸಿದರೂ ಆಗಲಿಲ್ಲ" ಅನ್ನುತ್ತಾರೆ. ಇಲ್ಲಿ ಕೃತಿಕಾರ ಕೃತಿಯನ್ನು ಸೃಷ್ಟಿಸುತ್ತಿದ್ದಾನೋ, ಕೃತಿಯೇ ಕೃತಿಕಾರನನ್ನು ಸೃಷ್ಟಿಸುತ್ತದೆಯೊ?

ಇದನ್ನು ಅರ್ಥ ಮಾಡಿಕೊಳ್ಳುವುದಕ್ಕಾಗಿ ಒಂದು ತದ್ವಿರುದ್ಧದ ಪ್ರಸಂಗ ಹೇಳುವೆ. ಕೆಲವು ವರ್ಷಗಳ ಹಿಂದೆ ನನ್ನ ಗೆಳೆಯರೊಬ್ಬರು–'ನೀವು ಯಾರೂ ಯಂಡಮೂರಿ ವೀರೇಂದ್ರನಾಥ್‌ರನ್ನು ಓದುವುದೇ ಇಲ್ಲ, ತುಂಬಾ ಚೆನ್ನಾಗಿ ಬರೆಯುತ್ತಾರೆ' ಎಂದರು. (ಬಹುಶಃ ಡಿ.ಎಸ್.ನಾಗಭೂಷಣ). ನನಗೆ ತಲೆ ಕೆಟ್ಟುಹೋಯ್ತು. ಯಂಡಮೂರಿಯವರ ಒಂದು ಪುಸ್ತಕವನ್ನು ರಾತ್ರಿ ಹನ್ನೊಂದು ಗಂಟೆಗೆ ಓದಲು ಶುರು ಮಾಡಿದವನು ಬೆಳಗಿನ ಜಾವ ಮೂರರವರೆಗೆ ಓದಿ ಮುಗಿಸಿ ನಿದ್ದೆಗೆಟ್ಟೆ. ಇದನ್ನು ಬರೆದಾತ, ಬರೆಯಬೇಕಾದ ಮಾಹಿತಿಯನ್ನು ಸಂಗ್ರಹಿಸಿದ್ದನು. ಅದನ್ನು ಭಾಷೆಯ ಮೂಲಕ ಸೀರಿಯಲ್ ಸಸ್ಪೆನ್ಸ್‌ಗೆ ತನ್ನ ಬುದ್ಧಿಯನ್ನೆಲ್ಲಾ ಧಾರೆ ಎರೆದು ಕಟ್ಟಿದ್ದನು. ಗೂಡ್ಸ್ ರೈಲಲ್ಲಿ ಸರಕು ಸಾಗಾಣಿಕೆ ಮಾಡಿದಂತೆ. ಆ ಸರಕು–ಧರ್ಮವೂ ಆಗಿರಬಹುದು, ತತ್ತ್ವಶಾಸ್ತ್ರವೂ ಆಗಿರಬಹುದು, ಹಾಗೆಯೇ ಪ್ರಗತಿಪರವೂ, ಪ್ರಗತಿವಿರೋಧಿಯೂ ಆಗಿರಬಹುದು. ಅದು ಏನೇ ಆಗಿದ್ದರೂ ಸರಕು ಸಾಗಾಣಿಕೆಯಷ್ಟೆ; ಸೃಜನಾತ್ಮಕ ಕೃತಿಯಲ್ಲ. ಈ ಸೂಕ್ಷ್ಮತೆಯನ್ನು ಸಾಹಿತ್ಯಲೋಕ ಪಡೆದುಕೊಳ್ಳದಿದ್ದರೆ ಯಂಡಮೂರಿಯನ್ನೇ ಸ್ವಲ್ಪ ಸ್ಟ್ಯಾಂಡರ್ಡ್ ಮಾಡಿ ಕೊಂಡು ಬರೆದ ಕೃತಿಗಳು ಸಾಹಿತ್ಯ ಕೃತಿಗಳೆಂದು ಪ್ರಸಿದ್ಧಿ ಪಡೆಯಲೂಬಹುದು. ಯಂಡ ಮೂರಿ ಓದಿದ ಮೇಲೆ ಆ ಪ್ರಕಾರಕ್ಕೆ ಸೇರಿದ ಬರವಣಿಗೆಯ ಬಗ್ಗೆ ಒಂದು ಉಪಮೆ ಮೂಲಕ ಆಗ ಏನೋ ಹೇಳಿದ ನೆನಪು. ಕೃತಿಯೊಂದು, ಕೃತಿಕಾರನನ್ನೂ ಸೃಜಿಸುವ ಪರಿಯನ್ನು ಗ್ರಹಿಸುವುದಕ್ಕಾಗಿ ಇಷ್ಟೆಲ್ಲಾ ಹೇಳಬೇಕಾಯ್ತು. ಸೃಜನಶೀಲತೆಯ ಚಿಲುಮೆ

ನೆಲ ಸೀಳಿಕೊಂಡು ಬಂದಂತೆ ಲಿಯೋ ಟಾಲ್‌ಸ್ಟಾಯ್‌ನಲ್ಲಿ ಎದ್ದು ಕಾಣುತ್ತದೆ. ಎಷ್ಟೆಂದರೆ, ಬರೆದಾದ ಮೇಲೆ ಟಾಲ್‌ಸ್ಟಾಯ್ ತಾನು ಬರೆಯಬೇಕೆಂದಿದ್ದುದು ಇದಲ್ಲ ಎಂದು ಬಹಳ ಸಲ ಅತೀವವಾಗಿ ಪರಿತಪಿಸುತ್ತಾನೆ. ಚಿಲುಮೆಯಂಥ ಸೃಜನ ಶೀಲತೆ ಯಲ್ಲಿ ಈ ಬೆರಗು ಸಂಭವಿಸಬಹುದು.

ಈ ನಿಲುಕಲಾಗದ, ತುಂಬಿತುಳುಕುವ, ತಬ್ಬಿಗೆ ಸಿಗದ ವಿಸ್ಮಯವೆ ಕಾರಣವಾಗಿ 'ಮಲೆಗಳಲ್ಲಿ ಮದುಮಗಳು' ಅವಜ್ಞೆಗೂ ಉಪೇಕ್ಷೆಗೂ ಒಳಗಾಗಲು ಕಾರಣವಾಗಿರ ಬಹುದೇ? 'ವಾರ್ ಅಂಡ್ ಪೀಸ್' ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದ ಕಾಲ ಮಾನದಲ್ಲಿ ಅದರ ಬಗ್ಗೆ ಬರುತ್ತಿದ್ದ ವಿಮರ್ಶೆಗಳಂತೆಯೇ ಕನ್ನಡದಲ್ಲಿ ಮಲೆಗಳಲ್ಲಿ ಮದುಮಗಳಿಗೂ ಆಗುತ್ತದೆ. ಇವಾನ್ ಟರ್ಗೀನೇವ್ ರಷ್ಯಾದ ಮಹಾನ್ ಲೇಖಕ. ಟಾಲ್‌ಸ್ಟಾಯ್‌ಗಿಂತ ವಯಸ್ಸಲ್ಲಿ ಹತ್ತು ವರ್ಷ ದೊಡ್ಡವನು. ತನ್ನ ಜೀವಿತ ಕಾಲದಲ್ಲೆ ವಿಶ್ವಖ್ಯಾತಿ ಗಳಿಸಿದಾತ. ಆಂಗ್ಲರು ಅವನನ್ನು ಡಿಕೆನ್ಸ್‌ಗೆ ಹೋಲಿಸಿದರೆ ಜರ್ಮನರು ಗಯಟೆಗೂ ಫ್ರೆಂಚರು ಬಾಲ್ಜಾಕ್‌ಗೂ ಹೋಲಿಸುತ್ತಿದ್ದರು. ಜಗತ್ತಿನ ಅನೇಕಾನೇಕ ಪ್ರತಿಭಾವಂತರು ಟರ್ಗೀನೇವ್‌ನನ್ನು ತಮ್ಮ ಸಾಹಿತ್ಯದ ಗುರು ಎಂದು ಪರಿಗಣಿಸಿದ್ದರು. ಇಂಥ ಇವಾನ್ ಟರ್ಗೀನೇವ್ 'ವಾರ್ ಅಂಡ್ ಪೀಸ್' ಬಗ್ಗೆ ಬರೆಯುತ್ತ "ಟಾಲ್ ಸ್ಟಾಯ್‌ನ ಗಹನವಾದ ಸ್ವೋಪಜ್ಞತೆ, ಅದರ ಅಪಾರವಾದ ಶಕ್ತಿ ಇವೇ ವಿದೇಶಿ ಓದುಗರು ಕಾದಂಬರಿಯನ್ನು ಶೀಘ್ರವಾಗಿ ಓದಿ ಮೆಚ್ಚಲಾಗದಂತೆ ಮಾಡಿವೆ" ಎನ್ನುತ್ತಾನೆ. ಈ ದೊಡ್ಡ ಲೇಖಕ ಟರ್ಗೀನೇವ್ ಯಾರನ್ನು ಮೆಚ್ಚಿಸಬೇಕೆಂದಿದ್ದಾನೆ? ಆದರೆ ಟಾಲ್‌ಸ್ಟಾಯ್ ನೋಟ ಹೀಗಿದೆ– 'ಯುರೋಪಿನಲ್ಲಿ ಯಾವ ಅರ್ಥದಲ್ಲಿ ಕಾದಂಬರಿ ಅನ್ನುತ್ತಾರೋ ಅಂಥದನ್ನು ಬರೆಯುವುದಕ್ಕೆ ನಮಗೆ ರಷಿಯನ್ನರಿಗೆ ಒಪ್ಪವಲ್ಲ. ಇದು ಕಥೆಯಲ್ಲ; ಇಲ್ಲಿ ಯಾವುದೇ ಐಡಿಯಾವನ್ನು ಮುಂದು ಮಾಡಿಲ್ಲ; ಏನನ್ನೂ ಸಾಧಿಸುವುದಕ್ಕೆ ಹೋಗಿಲ್ಲ' ಅನ್ನುತ್ತಾನೆ. ರಷ್ಯಾ ಎಂದಿರುವುದನ್ನು ಏಷ್ಯಾ ಎಂದು ವಿಸ್ತರಿಸಿಕೊಂಡು ಮಲೆಗಳಲ್ಲಿ ಮದುಮಗಳನ್ನು ಹೀಗೆಯೇ ನೋಡಬೇಕೆನಿಸುತ್ತದೆ. 'ಮಲೆಗಳಲ್ಲಿ ಮದುಮಗಳು' ಬಗ್ಗೆ ಪಾಶ್ಚಾತ್ಯಕ್ಕೆ ತುತ್ತಾದ ಕನ್ನಡ ಬುದ್ಧಿವಂತರ ಕೊಂಕಿಗೆ, ಪಾಶ್ಚಾತ್ಯ ಮೋಹಿತ ಟರ್ಗೀನೇವ್ ಥರದವರ ಮಾದರಿ ಕಾರಣವಾಗಿ ಇರಬಹುದೆನ್ನಿಸುತ್ತದೆ.

ಅಂತೆಯೇ 'ವಾರ್ ಅಂಡ್ ಪೀಸ್' ಬಗ್ಗೆ ಹೆನ್ರಿ ಜೇಮ್ಸ್‌ನ ಆಕ್ಷೇಪಣೆಗಳ ನಡುವೆ ಇರುವ ಹೊಳಹುಗಳನ್ನು ಗಮನಿಸಬೇಕಾಗಿದೆ."ಸಂಯೋಜನೆಯ ತತ್ವವನ್ನು ಧಿಕ್ಕರಿಸುವ ಚಿತ್ರವು ಸೌಂದರ್ಯವನ್ನು ಪಡೆಯಲಾರದು. ಕಲೆಯಾಗಬೇಕೆಂದು ಚಿತ್ರಕಾರ ಉದ್ದೇಶ ಪೂರ್ವಕವಾಗಿ ಬಯಸದೇ ಇರುವಾಗ ಅದು ರಚನೆಗೊಂಡ ಚಿತ್ರವೇ ಆಗಿರುವುದಿಲ್ಲ. ಕಲೆಯ ಬದಲಿಗೆ ಅದರಲ್ಲಿ ಜೀವನ ಇರಬಹುದು. ಆದರೆ ಆಕಸ್ಮಿಕ ಯಾದೃಚ್ಛಿಕ ಅಂಶಗಳನ್ನು ಒಳಗೊಂಡಿರುವ ಇಂಥ ಅಸಡ್ಡಾಳ (baggie)ದೈತ್ಯ ಕೃತಿಗಳು ಕಲಾತ್ಮಕವಾಗಿ ಯಾವ ಅರ್ಥವನ್ನು ಪ್ರಕಟಿಸುತ್ತವೆ? ಇಂಥ ಕೃತಿಗಳು 'ಕಲೆಗಿಂತ ಮಿಗಿಲು,

ಕಲೆಗಿಂತ ಶ್ರೇಷ್ಠ' ಎಂದೆನ್ನುವ ಮಾತುಗಳಿವೆ. ಆದರೆ ಈ ಕೃತಿಗಳ ಅರ್ಥವೇನು?" ಎಂದು ಪ್ರಶ್ನಿಸಿ, ಆಮೇಲೆ–"ಟಾಲ್‌ಸ್ಟಾಯ್‌ನನ್ನು ನೋಡಿದರೆ, ಅದೊಂದು ಬದುಕಿನ ಅಚ್ಚರಿಯ ಮೊತ್ತ, ಅಗಾಧವಾದ ಸಂಭವ, ಅಭೂತಪೂರ್ವ ಆಕಸ್ಮಿಕ, ನೈಸರ್ಗಿಕವಾದ ವಿಶಾಲ ಸರೋವರದಂಥವನು. ಸುಮ್ಮನೆ ಪ್ರತಿಫಲಿಸುತ್ತಾನೆ... ಇಲ್ಲಿ ನಮ್ಮ ಸಹಾಯಕ್ಕೆ ಬರುವ, ಬದುಕನ್ನು ವಿವರಿಸುವ ದೈವೀ ಪ್ರತಿಭೆಯ ಕಲಾವಿದ ಹುಡುಕಿದರೂ ಸಿಗುವುದಿಲ್ಲ" ಅನ್ನುತ್ತಾನೆ. ಆಯ್ತು, ದೈವಕ್ಕೆ ರೆಸ್ಟ್ ತೆಗೆದುಕೊಳ್ಳುವ ಆಸೆಯಾಗಿ ತನ್ನ ಕೆಲಸವನ್ನು ಮನುಷ್ಯ ರೂಪವೊಂದಕ್ಕೆ ವಹಿಸಿಕೊಟ್ಟಿದ್ದರ ದೆಸೆ ಯಿಂದಾಗಿ ಆಗ ವಾರ್ ಅಂಡ್ ಪೀಸ್ ಹುಟ್ಟಿತು ಅಂತಲೂ ಹೇಳಬಹುದಲ್ಲ ! ಇಷ್ಟು ಸಾಕು. ಗೊತ್ತಿದ್ದೋ ಗೊತ್ತಿಲ್ಲದೆಯೋ ಹೆನ್ರಿ ಜೇಮ್ಸನ ಮಾತುಗಳು ಒಂದು ಎಪಿಕ್ ಬಗ್ಗೆ ಹೇಳಿದಂತಿದೆ.

ಟಾಲ್‌ಸ್ಟಾಯ್ ಪ್ರಾಸಂಗಿಕವಾಗಿ 'ವಾರ್ ಅಂಡ್ ಪೀಸ್' ನ್ನು ಹೋಮರ್‌ನ ಎಪಿಕ್ ಇದ್ದಂತೆ ಎಂದು ಮ್ಯಾಕ್ಸಿಂಗಾರ್ಕಿಗೆ ಹೇಳಿದ್ದಿದೆ. ರಷ್ಯಾ ಮಣ್ಣಿಗೆ ಸಹಜವಾದ ಮಹಾಕಾವ್ಯ ಸೃಷ್ಟಿ ಟಾಲ್‌ಸ್ಟಾಯ್‌ನ ಭೂಮಿಕೆಗಿದೆ. ಜಗತ್ತಿನ ಪ್ರತಿಭೆಯ ಸೃಷ್ಟಿಯಲ್ಲಿ ಏಷ್ಯಾಖಂಡದ ಮಣ್ಣಲ್ಲಿ ಸಂಭವಿಸಿದ ಮಹಾಕಾವ್ಯ ಮಹಾಭಾರತದ ನಂತರದಲ್ಲಿ ನಿಲ್ಲುವ ಕೃತಿ 'ವಾರ್ ಅಂಡ್ ಪೀಸ್' ಎಂದು ನನಗನ್ನಿಸುತ್ತಿರುತ್ತದೆ. ಈ ಪರಂಪರೆಯಲ್ಲಿ ಬರುವ ಕೃತಿಯೇ 'ಮಲೆಗಳಲ್ಲಿ ಮದುಮಗಳು'. ಈ ನೋಟ ಪಡೆದಾಗ ಅಗಾಧವಾದ ಸೃಷ್ಟಿಯೊಂದನ್ನು ಸ್ವೀಕರಿಸುವ ಅರ್ಹತೆ ಪಡೆಯುತ್ತೇವೆ. ಇಂದು ಕಾದಂಬರಿ ಕ್ಷೇತ್ರದಲ್ಲಿ ಅನೇಕ ಪ್ರಯೋಗಗಳಾಗಿವೆ, ಆಗುತ್ತಲೂ ಇವೆ. ಒಂದಕ್ಕೊಂದು ಕ್ರಾಸ್ ಆಗಿ ವಿನೂತನ ಕೃತಿಗಳೂ ಹುಟ್ಟುತ್ತಿವೆ. ಎಲ್ಲವೂ ಇರಲಿ ಎಲ್ಲವೂ ಬರಲಿ. ಜೊತೆಗೆ ಏಷ್ಯಾದ ಮಣ್ಣಲ್ಲಿ ಸಹಜವಾದ ಮಹಾಕಾವ್ಯಗಳು ಇದ್ದಿರಬಹುದು. ಯಾರಿಗೆ ಗೊತ್ತು? ಎಲ್ಲೋ ಯಾರಿಂದಲೋ ಯಾರಿಗೆ ಗೊತ್ತು? ಕಾಲೋಸ್ಮಿ!

ನನ್ನ ಮಿತವಾದ ಓದಿನ ಹಿನ್ನೆಲೆಯಲ್ಲಿ ಹೇಳಬಹುದಾದಷ್ಟನ್ನು ಹೇಳಿದ್ದೇನೆ. ಇದನ್ನು ವಿಸ್ತಾರವಾದ ಹಾಗೂ ಆಳವಾದ ಓದಿನ ಪ್ರಜ್ಞೆಯವರು ಪರೀಕ್ಷಿಸಬೇಕಾಗಿದೆ, ಬೆಳೆಸಬೇಕಾಗಿದೆ. ಇದಕ್ಕಾಗಿ ಎರಡು ಬಿತ್ತನೆ ಬೀಜಗಳನ್ನು ಹೆಸರಿಸುವೆ. ಒಂದು ಡಿ.ಎಸ್. ನಾಗಭೂಷಣ ಅವರ 'ಕುವೆಂಪು ಅವರ ಕಥನ ಪ್ರತಿಭೆಯ ದಾರ್ಶನಿಕ ನೆಲೆಗಳು' ಹಾಗೂ ಇನ್ನೊಂದು ಪ್ರೀತಿ ಶುಭಚಂದ್ರ ಅವರ 'ಕನ್ನಡ ಕಾವ್ಯಮೀಮಾಂಸೆ : ಕುವೆಂಪು ಕೊಡುಗೆ'. (ನೋಡಿ : 'ಕುವೆಂಪು : ಒಂದು ಪುನರನ್ವೇಷಣೆ ಸಂ: ಡಿ.ಎಸ್. ನಾಗಭೂಷಣ, ಲೋಹಿಯಾ ಪ್ರಕಾಶನ) ಈ ಎರಡೂ ಲೇಖನಗಳನ್ನು ಬಿತ್ತಿ ಬೆಳೆಯಬಹುದೇನೋ. ನನ್ನಿಂದ ಉರುಳುಸೇವೆ ಮಾಡಿಸಿಕೊಂಡು ಇಷ್ಟನ್ನು

೩. ಜಾಗತಿಕ ಕಾದಂಬರಿ ಪರಂಪರೆ ಮತ್ತು 'ಮಲೆಗಳಲ್ಲಿ ಮದುಮಗಳು' : ಕೆಲವು ಟಿಪ್ಪಣಿಗಳು

– ಓ.ಎಲ್. ನಾಗಭೂಷಣಸ್ವಾಮಿ

೧. ಜಾಗತಿಕ ಕಾದಂಬರಿಗಳ ಹಿನ್ನೆಲೆಯಲ್ಲಿ 'ಮಲೆಗಳಲ್ಲಿಮದುಮಗಳು'ವನ್ನು ನೋಡುವುದು ಹೇಗೆ? ಕೆಲವು ಸುಪ್ರಸಿದ್ಧ ಕಾದಂಬರಿಕಾರರ ಕೃತಿಗಳಿಂದ ಕುವೆಂಪು ಹೇಗೆ ಪ್ರಭಾವಿತರಾದರು ಎಂದು ನೋಡುವುದು ಚಿರಪರಿಚಿತ ವಿಧಾನವಾದರೂ ಅದ-ರಿಂದ ಹೆಚ್ಚು ಲಾಭವಿಲ್ಲ ಅನ್ನಿಸುತ್ತದೆ. ನಿಜ, ತಾವು ಟಾಲ್ಸ್‌ಟಾಯ್‌ನ ಕಾದಂಬರಿ-ಗಳಿಂದ ಪ್ರೇರಿತರಾದ ಬಗ್ಗೆ ಕುವೆಂಪು ಹೇಳಿಕೊಂಡಿದ್ದಾರೆ; ಟಾಲ್ಸ್‌ಟಾಯ್ ಮತ್ತು ಥಾಮಸ್ ಹಾರ್ಡಿ ತಮ್ಮ ಕಾದಂಬರಿ ರಚನೆಯ ಮೇಲೆ ಪ್ರಭಾವ ಬೀರಿದ ಲೇಖಕರು ಎಂದೂ ಕುವೆಂಪು ಹೇಳಿಕೊಂಡಿದ್ದಾರೆ. ನಿಜ, ಟಾಲ್ಸ್‌ಟಾಯ್‌ನ 'ಅನ್ನಾ ಕರೆನಿನ' ಕಾದಂಬರಿಯ ಸ್ವರೂಪಕ್ಕೂ 'ಕಾನೂರು ಹೆಗ್ಗಡಿತಿ'ಯ ಸ್ವರೂಪಕ್ಕೂ ಎದ್ದು ಕಾಣುವಂಥ ಹೋಲಿಕೆಗಳಿವೆ. ನಿಜ, 'ಇಲ್ಲಿ ಯಾವುದೂ ಮುಖ್ಯವಲ್ಲ' ಎಂಬ ಸುಪ್ರಸಿದ್ಧ ಉಕ್ತಿ ವಾರ್ ಅಂಡ್ ಪೀಸ್ ಕಾದಂಬರಿಯಲ್ಲಿ ಹೆಚ್ಚು ಕಡಿಮೆ ಅದೇ ಸ್ವರೂಪದಲ್ಲೇ ಪಿಯರೆ ಎಂಬ ಪಾತ್ರದ ಸ್ವಗತದಲ್ಲಿ ಕೇಳುತ್ತದೆ. 'ಅನ್ನ ಕರೆನಿನ' ಕಾದಂಬರಿಯಂತೆಯೇ ಕಾನೂರು ಹೆಗ್ಗಡಿತಿ, ಕಥೆಯೇ ಪ್ರಧಾನವಾದ ಕೃತಿಯಾದರೆ 'ಮಲೆಗಳಲ್ಲಿ ಮದುಮಗಳು', 'ವಾರ್ ಅಂಡ್ ಪೀಸ್'ನ ರೀತಿಯಲ್ಲಿ ಕಥನ ಮಾತ್ರ ಮುಖ್ಯವಾಗಿರುವ, ಕಥೆ ಅಮುಖ್ಯವಾಗಿರುವ, ನಿಯತಿ ಕೃತ ಎಂಬಂತೆಯೂ ಕೇಂದ್ರವೇ ಇಲ್ಲದ ನಿಯಮ ರಹಿತ ರಚನೆ ಎಂಬಂ-ತೆಯೂ ಏಕ ಕಾಲದಲ್ಲೇ ಕಾಣುತ್ತದೆ. ನಿಜ, ನಿಸರ್ಗದ ವರ್ಣನೆಯಲ್ಲಿ ಕುವೆಂಪು ಭಾಷೆಗೂ ಥಾಮಸ್ ಹಾರ್ಡಿಯ ಭಾಷೆಗೂ ಅನೇಕ ಸಾಮ್ಯಗಳು ಕಾಣುತ್ತವೆ. ಆದರೆ, ಇಂಥ ಸಮಾನ ಸಂಗತಿಗಳ ಹುಡುಕಾಟ ಮುಖ್ಯವಲ್ಲ. ಜಾಗತಿಕ ಕಾದಂಬರಿಗಳ ಹಿನ್ನೆಲೆಯಲ್ಲಿ ಕುವೆಂಪು ಕೃತಿಗಳನ್ನು ನೋಡುವ ಕೆಲಸವು ಆಧುನಿಕತೆಯನ್ನು ಕುವೆಂಪು ಗ್ರಹಿಸಿದ ರೀತಿ, ಪರಂಪರೆ ಮತ್ತು ಆಧುನಿಕತೆಗಳ ಸಂಬಂಧವನ್ನು ಕುವೆಂಪು ಗ್ರಹಿಸಿದ ರೀತಿ, ಮಹಾಕಾವ್ಯ ಮತ್ತು ಕಾದಂಬರಿ ಪ್ರಕಾರಗಳನ್ನು ಒಂದಾಗಿ ಬೆಸೆದ ರೀತಿ ಇವನ್ನು ಕಂಡುಕೊಳ್ಳುವುದು ಫಲಪ್ರದ ಎನಿಸುತ್ತದೆ.

೨. ಆಧುನಿಕ ಮನುಷ್ಯ ಗುಲಾಬಿ ಹೂವಿನ ಹಾಗೆ; ಇಂದು ನಾವು ನೋಡುತ್ತಿರುವ ಗುಲಾಬಿಯ ಹೂ ಲಕ್ಷಾಂತರ ವರ್ಷಗಳ ವಿಕಾಸದ ಫಲವಾಗಿರುವಂತೆಯೇ ಮುಂದಿನ ಕಾಲದಲ್ಲಿ ರೂಪತಳೆಯಲಿರುವ ಹೂವುಗಳ ಬೀಜ ರೂಪವೂ ಹೌದು; ಆಧುನಿಕ

ಮನುಷ್ಯ ಎತ್ತರವಾದ ಶಿಖರದ ಮೇಲೆ ನಿಂತು ಒಂದು ಕೈಯನ್ನು ಕಣಿವೆಯ ತಳಾತಳಕ್ಕೂ [ಗತ] ಇನ್ನೊಂದು ಕೈಯನ್ನು ನಕ್ಷತ್ರಗಳಿಗೂ [ಭವಿಷ್ಯ] ಚಾಚಿಕೊಂಡಿರುತ್ತಾನೆ-ಈ ಹೋಲಿಕೆಯನ್ನು ಕುವೆಂಪು ಅವರು ಯುವಕವಿಗಳ ಸಮ್ಮೇಳನದಲ್ಲಿ ಆಡಿದ್ದಾರೆ. ಪರಂಪರೆ ಮತ್ತು ಆಧುನಿಕತೆಗಳನ್ನು ಕುರಿತ ರೂಪಕ ಇದು. ಆಧುನಿಕತೆಗೆ ಅಡಿಯಾಳಾಗದೆ, ಗತವನ್ನು ಆರಾಧಿಸದೆ ಸ್ವಸ್ಥವಾದ, ಆರೋಗ್ಯಕರವಾದ ನೋಟವನ್ನು ಬೆಳೆಸಿಕೊಳ್ಳುವುದು ಹೇಗೆ ಅನ್ನುವುದು ಕುವೆಂಪು ಅವರ ಮುಖ್ಯ ಹುಡುಕಾಟವೇ ಆಗಿತ್ತು.

೩. ಕಾವ್ಯಮೀಮಾಂಸೆಯನ್ನು ಕುರಿತ ಕುವೆಂಪು ಅವರ ಚಿಂತನೆಗಳು ಈ ಮಾತಿಗೆ ಪ್ರಬಲವಾದ ಸಾಕ್ಷ್ಯಗಳನ್ನು ಒದಗಿಸುತ್ತವೆ. ಕುವೆಂಪು ಕೃತಿಗಳೇ ಅವರ ಕಾವ್ಯಮೀಮಾಂಸೆಯ ಆನ್ವಯಿಕ ಪ್ರಯೋಗಶಾಲೆ. ಅವರ ಮುಖ್ಯ ಕೃತಿಗಳಾದ 'ಶ್ರೀ ರಾಮಾಯಣ ದರ್ಶನಂ', 'ಕಾನೂರು ಹೆಗ್ಗಡಿತಿ', ಮತ್ತು 'ಮಲೆಗಳಲ್ಲಿ ಮದುಮಗಳು' ಇವು ಪ್ರಕಟವಾದ ಇಸವಿ ಬೇರೆಬೇರೆಯಾದರೂ ಅವರು ಈ ಮೂರೂ ಕೃತಿಗಳ ರಚನೆಯಲ್ಲಿ ಏಕಕಾದಲ್ಲಿ ತೊಡಗಿದ್ದರೆಂಬುದು ಗಮನಾರ್ಹವಾಗಿದೆ. 'ರಾಮಾಯಣ ದರ್ಶನಂ' ರಚನೆಗೊಳ್ಳುತ್ತಿರುವಾಗಲೇ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಬಹುಭಾಗ 'ವಿಚಾರವಾಹಿನಿ'ಯಲ್ಲಿ ಪ್ರಕಟವಾಯಿತು. ರಾಮಾಯಣವು ಕೇವಲ ಕಥೆಯಲ್ಲ, ಕಥನ ಮತ್ತು ಕವಿಯ ದರ್ಶನವೇ ಮುಖ್ಯ ಎಂಬ ಅವರ ನಿಲುವು ಈ ಮೂರೂ ಮುಖ್ಯ ಕೃತಿಗಳಲ್ಲಿ ಪ್ರಕಟಗೊಂಡಿದೆ. ಮದುಮಗಳು ಕೃತಿಯು ಮಂದ್ರಸ್ತರದ ರಾಮಾಯಣದರ್ಶನಂ ಎಂದು ಶ್ರೀ ಸುಜನಾ ಅವರು ಪ್ರತಿಪಾದಿಸಿರುವುದು (ಶ್ರೀಕುವೆಂಪು, ಪ್ರಸಾರಾಂಗ ಬೆಂಗಳೂರು ವಿವಿ) ನೆನಪಾಗುತ್ತಿದೆ. ನವ್ಯ ವಿಮರ್ಶೆಯು ಕೃತಿಯ, ಕಾದಂಬರಿಯ ಕೇಂದ್ರದ ಅನ್ವೇಷಣೆಯಲ್ಲಿ ತೊಡಗಿದ್ದರೆ 'ಕಥೆಯ ಕೇಂದ್ರ' ದ ಅಗತ್ಯವಿರದ, ಆದ್ದರಿಂದಲೇ ನಿಯಮರಹಿತ ವಾಗಿಯೂ ಬದುಕನ್ನು ಕುರಿತ ದರ್ಶನವೇ ಮುಖ್ಯವಾದ್ದರಿಂದ ನಿಯತಿಕೃತವಾಗಿಯೂ ಕಾಣುತ್ತದೆ ಮಲೆಗಳಲ್ಲಿ ಮದುಮಗಳು. ಸುಬ್ಬಣ್ಣ ಹೆಗ್ಗಡೆ ಹಂದಿಯ ಒಡ್ಡಿನ ಬಳಿ ಸೂರ್ಯೋದಯವನ್ನು ನೋಡುವ ಪ್ರಸಂಗದ ಕಥನದಲ್ಲಿ ಮಂಥರೆ, ಕೈಕೆಯರ ಪಾತ್ರವನ್ನು ಕುರಿತು ಇರುವಂಥದೇ ಸಹಾನುಭೂತಿಯೂ ಕಾಣುತ್ತದೆ. ಒಂದು ಪಾತ್ರವಲ್ಲ, ಹಲವು ಪಾತ್ರಗಳ ಮೂಲಕ ಬದುಕಿನ ದರ್ಶನವನ್ನು ವ್ಯಕ್ತಪಡಿಸುವುದು ಕುವೆಂಪು ಕಾವ್ಯ ಮೀಮಾಂಸೆಯ ಮುಖ್ಯ ಸಂಗತಿ; ಅದು ಪ್ರಖರವಾಗಿ ವ್ಯಕ್ತವಾಗುವುದು ಮದುಮಗಳು ಕಾದಂಬರಿಯಲ್ಲಿ.

೪. ಟಾಲ್ಸ್ಟಾಯ್ 'ವಾರ್ ಅಂಡ್ ಪೀಸ್' ನಲ್ಲಿ ಹೇಗೆ ಯೂರೋಪಿಯನ್ ಮಾದರಿಯ, ಅಚ್ಚುಕಟ್ಟಾದ ಕಾದಂಬರಿ ಬಂಧವನ್ನು ಮೀರಿ ಬದುಕಿನ ಲಯವನ್ನು ಚಿತ್ರಿಸುತ್ತಾನೋ ಅದೇ ರೀತಿಯಲ್ಲಿ ಕುವೆಂಪು ಕೂಡ ಮದುಮಗಳು ಕಾದಂಬರಿಯಲ್ಲಿ ಹಲವು ಪಾತ್ರಗಳ ಬದುಕಿನ ದರ್ಶನವನ್ನು ವೈವಿಧ್ಯಮಯವಾದ ಲಯದ ಮುಖಾಂತರ ಹಿಡಿದಿಟ್ಟಿದ್ದಾರೆ. ಈ ದೃಷ್ಟಿಯಿಂದ ನೋಡಿದರೆ ಕನ್ನಡದ ಮಹಾಕಾವ್ಯಗಳ ಲಕ್ಷಣವನ್ನು

ಅವರು ಕಾದಂಬರಿಯಲ್ಲೂ ಹೊಸ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಕನ್ನಡದ ಮಹಾ ಕಾವ್ಯಗಳು ಕಥೆಗಿಂತ ವರ್ಣನೆಗೆ ಪ್ರಾಧಾನ್ಯ ನೀಡುತ್ತವೆ. ಒಂದೊಂದು ಮಹಾಕಾವ್ಯವೂ ಒಂದೊಂದು ರೀತಿಯಲ್ಲಿ ಬದುಕನ್ನು ವರ್ಣಿಸುತ್ತದೆ. ಹಾಗೆಯೇ ಮದುಮಗಳು ವಿಭಿನ್ನ ಲಯಗಳ, ಪಾತ್ರೋಚಿತವಾದ ಭಾಷೆಯ ಬಳಕೆಯ ಮುಖಾಂತರ ಕಥೆಗಿಂತ ಕಥನವೇ, ಅಥವಾ ವರ್ಣನವೇ ಮುಖ್ಯ ಅನ್ನುವುದನ್ನು ಮನದಟ್ಟು ಮಾಡುತ್ತದೆ. ಹಾಗೆ ನೋಡಿದರೆ ಮದುಮಗಳು ಕಾದಂಬರಿ ಮಹಾಭಾರತದ ಸ್ವರೂಪಕ್ಕೆ, ಕಥನಕ್ಕೆ ಹತ್ತಿರ ವಾದದ್ದು. ಕನ್ನಡದ ಮಹಾಕಾವ್ಯಗಳ ಪರಂಪರೆಯನ್ನು ಮುಂದುವರೆಸುವಂಥದ್ದು, ಇಪ್ಪತ್ತನೆಯ ಶತಮಾನದ ಆರಂಭ ಕಾಲದ ಕನ್ನಡ ಕಾದಂಬರಿಗಳು ಕಥನದಲ್ಲಿ ನಡೆಸುತ್ತಿದ್ದ ವಿವಿಧ ಪ್ರಯೋಗಗಳ ಶಿಖರದಂತೆ ಇರುವಂಥದ್ದು. ನಿರೂಪಣೆಯನ್ನು ಕುರಿತ ಹಾಗೆ ಕನ್ನಡದ ಮಹಾಕಾವ್ಯಗಳಿಗೂ ಕನ್ನಡ ಕಾದಂಬರಿಯ ಆದಿ ಕಾಲದ ಕೃತಿಗಳ ಪ್ರಯೋಗಗಳಿಗೂ ಮದುಮಗಳು ಕಾದಂಬರಿಗೂ ಇರುವ ಸಂಬಂಧವನ್ನು ಕುರಿತು ಅಧ್ಯಯನ ಮಾಡುವ ಅಗತ್ಯವಿದೆ. ಅಂಥ ಅಧ್ಯಯನದ ಮೂಲಕ ಕುವೆಂಪು ಪಶ್ಚಿಮ ದಿಂದ ಪಡೆದದ್ದೆಷ್ಟು, ಕನ್ನಡ ಕೃತಿಗಳ ಯಾವ ಪರಂಪರೆಯನ್ನು ಎಷ್ಟು ಹೇಗೆ ಬಳಸಿ ಕೊಂಡಿದ್ದಾರೆ ಅನ್ನುವುದು ತಿಳಿಯುತ್ತದೆ, ಅವರ ಕಾದಂಬರಿ ಕೇವಲ ಪಶ್ಚಿಮದ ಅನು ಕರಣೆಯಲ್ಲ ಅನ್ನುವುದು ತಿಳಿಯುತ್ತದೆ.

೫. ಮುಖ್ಯವಾದ ಸಂಗತಿ ಎಂದರೆ ಪಶ್ಚಿಮದ ಕಾದಂಬರಿ ಮನುಷ್ಯನ ಸಾಮಾಜಿಕ ಬದುಕಿಗೆ ಪ್ರಾಮುಖ್ಯ ನೀಡಿದ್ದಾದರೆ ಕುವೆಂಪು ಕೃತಿ ಕೇವಲ ವರ್ತಮಾನದ ಬದುಕಿನ ಗೋಜಲುಗಳಿಗೆ ಮಾತ್ರವಲ್ಲ, ಮನುಷ್ಯನ ಆಧ್ಯಾತ್ಮಿಕ ಅನ್ವೇಷಣೆಯನ್ನೂ ಗಹನವಾಗಿ ಮಂಡಿಸುವ ಕೃತಿ. ಆಧ್ಯಾತ್ಮ ಮತ್ತು ಸಾಮಾಜಿಕ ಬದುಕನ್ನು ಹೀಗೆ ಒಂದು ಚೌಕಟ್ಟಿನಲ್ಲಿ ಹಿಡಿಯುವ ಪ್ರಯತ್ನ ಪಶ್ಚಿಮದಲ್ಲಿ ಅಷ್ಟು ಯಶಸ್ವಿಯಾದಂತೆ ಕಾಣುವುದಿಲ್ಲ.

ಆಧುನಿಕ ಯುಗದಲ್ಲಿ ಮಹಾಕಾವ್ಯವು ಕಾದಂಬರಿಯ ರೂಪದಲ್ಲಿ ಮೈದಾಳುವ ಅಚ್ಚರಿಯನ್ನು ಮದುಮಗಳು ತೋರುತ್ತದೆ. ಇಂಥ ಒಂದು ಸಾಧ್ಯತೆಯನ್ನು ಟಾಲ್ಸ್ಟಾಯ್ ಮುಖಾಂತರ ಕುವೆಂಪು ಗ್ರಹಿಸಿರಬಹುದು. ನಿರೂಪಣೆಯ ಗದ್ಯ ಎಷ್ಟು ಗಹನ ವಾಗಿ ಇರಬಹುದು ಅನ್ನುವುದನ್ನು ಹಾರ್ಡಿಯ ಕೃತಿಗಳಲ್ಲಿ ಕಂಡಿರಬಹುದು. ಆದರೆ ಕುವೆಂಪು ಅವರ ದರ್ಶನ ಪಶ್ಚಿಮದ ಯಾವ ಸಿದ್ಧಾಂತದ ನಕಲೂ ಅಲ್ಲ. ಕನ್ನಡದ ಹಳೆಯ ಕೃತಿಗಳು, ಕುವೆಂಪು ಸಮಕಾಲೀನ ಗದ್ಯ ಕಥನ ಇವುಗಳೊಂದಿಗೆ ಮದುಮಗಳನ್ನು ಗಂಭೀರವಾಗಿ, ಗಹನವಾಗಿ ಪರಿಶೀಲಿಸಿದರೆ ಕನ್ನಡ ಸಾಹಿತ್ಯದ ಗತ ಮತ್ತು ಆಧುನಿಕ ಭಾರತದ ವಾಸ್ತವ ಇವುಗಳ ಪರಿಶೀಲನೆಯನ್ನು ಕುವೆಂಪು ಎಷ್ಟು ಗಂಭೀರ ವಾಗಿ ಮಾಡಿದ್ದಾರೆ ಅನ್ನುವುದು ತಿಳಿಯುತ್ತದೆ. ಅಂಥ ಅಧ್ಯಯನ ನಡೆಯುವುದು ತೀರ ಅಗತ್ಯ.

೪. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಸಾಮಾಜಿಕ ವಿನ್ಯಾಸದ ಒಂದು ಓದು

– ಕೆ.ವೈ. ನಾರಾಯಣಸ್ವಾಮಿ

ಕುವೆಂಪು ಅವರ ಮಹಾಕೃತಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ರಚನೆಯಾಗಿ ಐವತ್ತು ವರ್ಷಗಳು ತುಂಬಿವೆ. ಈ ಕೃತಿಯೊಂದಿಗೆ ಕನ್ನಡ ವಿಮರ್ಶೆ ನಡೆಸಿದ ಅನುಸಂಧಾನದ ಆಚೆಗೆ ಈ ಕಾದಂಬರಿ ಓದುಗರನ್ನು ತಲುಪಿದೆ. ಕಳೆದ ಐವತ್ತು ವರ್ಷಗಳಲ್ಲಿ ಕನ್ನಡದ ಸಾಂಸ್ಕೃತಿಕ ಲೋಕದಲ್ಲಿ ಅನೇಕ ಪಲ್ಲಟಗಳು ನಡೆದು ಹೋಗಿವೆ. ನವ್ಯ ಚಳವಳಿಯ ಕಾರಣದಿಂದ ಅಂಚಿಗೆ ಸರಿದಿದ್ದ ಕುವೆಂಪು ಅವರ ಸಾಹಿತ್ಯದ ಓದು ದಲಿತ ಬಂಡಾಯ ಚಳುವಳಿಗಳ ಕಾರಣದಿಂದ ಮತ್ತೆ ಮುಂಚೂಣಿಗೆ ಬಂದಿದೆ. ಇಂದು ಕನ್ನಡದಲ್ಲಿ ಹೆಚ್ಚು ಓದಿಗೆ ಒಳಗಾಗುತ್ತಿರುವ ಹಾಗೂ ಚರ್ಚೆಗೊಳ್ಳುತ್ತಿರುವ ಕೃತಿಗಳು ಕುವೆಂಪು ಅವರವು ಎಂಬುದು ದಿಟ.

'ಮಲೆಗಳಲ್ಲಿ ಮದುಮಗಳು' ಪ್ರಕಟಗೊಂಡ ಕಾಲದಿಂದ ಈವರೆಗೆ ಈ ಕಾದಂಬರಿಯನ್ನು ಓದಲು ಪ್ರಯತ್ನಿಸಿದ ಹಲವು ಮಾದರಿಗಳು ನಮ್ಮ ಮುಂದಿವೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಸಾಮಾಜಿಕ ವಿನ್ಯಾಸ ಎಂಬ ವಿಷಯವನ್ನು ಚರ್ಚೆಗೆ ಎತ್ತಿಕೊಳ್ಳುವ ಮುನ್ನ ಒಂದು ವಿಷಯವನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಸಾಮಾಜಿಕ ವಿನ್ಯಾಸ ಎಂಬ ಪರಿಕಲ್ಪನೆ ಕನ್ನಡ ವಿಮರ್ಶೆಗೆ ಬಂದಿದ್ದು ಸಮಾಜ ವಿಜ್ಞಾನಗಳ ತಿಳುವಳಿಕೆಯಿಂದ. ನವೋದಯ ಕಾಲದ ರಸ ವಿಮರ್ಶೆಯ ಕಾಲಘಟ್ಟದ ನಂತರ ಸಮಾಜ ಮತ್ತು ಸಾಹಿತ್ಯ ಸಂಬಂಧಗಳನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಶಾಸ್ತ್ರಗಳ ತಾತ್ವಿಕತೆಗಳ ಹಿನ್ನೆಲೆಯಲ್ಲಿ ಅರ್ಥೈಸುವ ವಿಧಾನ ಮುನ್ನೆಲೆಗೆ ಬಂತು. ಅದರ ತಿಳಿವಿನ ಭಾಗವಾಗಿ ಸಾಹಿತ್ಯ ಕೃತಿಯೊಂದರ ಮೌಲ್ಯಮಾಪನದಲ್ಲಿ ಸಮಾಜೋಆರ್ಥಿಕ ಆಯಾಮಗಳನ್ನು ಗುರುತಿಸುವ ಹಾಗೂ ವಿಶ್ಲೇಷಿಸುವ ಪದ್ಧತಿ ರೂಢಿಗೆ ಬಂದಿತು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯು ಪ್ರಕಟವಾದ ಮೇಲೆ ಕನ್ನಡದ ಮುಖ್ಯ ವಿಮರ್ಶಕರಾದ ಎಂಜಿಕೆ. ಕುರ್ತುಕೋಟಿ, ಗಿರಡ್ಡಿ, ಅನಂತಮೂರ್ತಿ ಅವರು ಈ ಕಾದಂಬರಿಯ ಶಿಲ್ಪ ಹಾಗೂ ಆಶಯದ ವಿಚಾರದಲ್ಲಿ ಹಲವು ತಕರಾರುಗಳನ್ನು ಎತ್ತಿ ಚರ್ಚೆ ಮಾಡಿದ್ದಾರೆ. ಈ ಸಡಿಲವಾದ ಶಿಲ್ಪ ಮತ್ತು ವಿವರಗಳ ಕಿಕ್ಕಿರಿದ ನಿರೂಪಣೆಯಿಂದಾಗಿ ಕಲಾನುಭವವನ್ನು ಸೃಷ್ಟಿಸುವಲ್ಲಿ ಈ ಕಾದಂಬರಿ ಸೋಲುತ್ತದೆ ಎಂದು ಈ

ವಿದ್ವಾಂಸರು ಟೀಕಿಸಿದರು. ಇನ್ನು ದಲಿತ ಚಳುವಳಿಯ ಸಂಸ್ಥಾಪಕರಾದ ಬಿ. ಕೃಷ್ಣಪ್ಪ ಅವರು ಕುವೆಂಪು ಅವರು ಈ ಕೃತಿಯಲ್ಲಿ ಪುರೋಹಿತಶಾಹಿಯೂ ಹೇಗೆ ಶೂದ್ರರನ್ನು ಶೋಷಿಸುತ್ತಿದೆ ಎನ್ನುವುದನ್ನು ತೀವ್ರವಾಗಿ ಖಂಡಿಸಿ ಬರೆದಂತೆ ಗೌಡರು ದಲಿತರನ್ನು ಶೋಷಿಸುವ, ಹಿಂಸಿಸುವ ಆಯಾಮವನ್ನು ಗಟ್ಟಿ ದನಿಯಲ್ಲಿ ಪ್ರಶ್ನಿಸಿಲ್ಲ ಎಂಬ ಸಂಗತಿ ಯನ್ನು ಸ್ಫೋಟಕದಂತೆ ಸಿಡಿಸಿದ್ದರು. ಈ ಎಲ್ಲಾ ವಿಮರ್ಶಕರು 'ಮದುಮಗಳು' ಕೃತಿಯ ಲೋಕದೃಷ್ಟಿಯನ್ನು ಗ್ರಹಿಸದೆ ಬರೆದ ಪ್ರತಿಕ್ರಿಯೆಗಳಾಗಿವೆ.

ಸಾಮಾಜಿಕ ಸ್ತರ ಮತ್ತು ರಚನೆ ಎನ್ನುವ ಪರಿಕಲ್ಪನೆಯು ಒಂದು ಬೌದ್ಧಿಕ ಚೌಕಟ್ಟು ಆಗಿದ್ದು, ಇದು ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಮನುಷ್ಯರನ್ನು ಜಾತಿ ಧರ್ಮದ ಚಹರೆಗಳ ಮೂಲಕ ಗುರುತಿಸಲ್ಪಡುವ ಮಾಪನವಾಗಿದೆ. ಅಲ್ಲದೆ ವ್ಯಕ್ತಿ-ವ್ಯಕ್ತಿಗಳ ನಡುವಣ ಅಧಿಕಾರ ಸಂಬಂಧಗಳು, ವರ್ತನೆಗಳನ್ನು ಕೂಡ ಈ ಚೌಕಟ್ಟು ವಿವರಿಸುತ್ತದೆ. ಹೆಣ್ಣು ಗಂಡಿನ ಸ್ಥಾನ ಮಾನವನ್ನು ನಿಯಂತ್ರಿಸುವ ವಿಷಯ ಕೂಡ ಇದರಲ್ಲಿ ಸೇರಿದೆ. ಜಾತಿ ಜಾತಿಗಳ ನಡುವಣ ದಮನಕಾರಿ ನೆಲೆಗಳು, ಸಾಮಾಜಿಕ ಬಂಡವಾಳದ ನೆಲೆಗಳು ಕಣ್ಣಿಗೆ ಕಾಣುವ ರೀತಿಯಲ್ಲಿ ಪ್ರಕಟಗೊಂಡರೆ, ಹೆಣ್ಣಿನ ದಮನದ ನೆಲೆಗಳು ಕಣ್ಣಿಗೆ ಕಾಣದ ರೀತಿಯಲ್ಲಿ ನಡೆಯುತ್ತವೆ. ಧಾರ್ಮಿಕ ನಂಬಿಕೆಗಳು ಸಾಮಾಜಿಕ ಚಲನೆಯನ್ನು ತನ್ನ ಧಾರ್ಮಿಕ ಅನುಸರಣೆಯ ಮೂಲಕ ನಿಯಂತ್ರಿಸುವ ನಡೆಗಳು ಕೂಡ ಈ ವಿನ್ಯಾಸದ ಒಳಗೆ ಹುದುಗಿಸಲ್ಪಟ್ಟಿರುತ್ತವೆ. ಹೀಗೆ ಒಂದು ಕಲಾಕೃತಿಯಲ್ಲಿ ಸಾಮಾಜಿಕ ಸ್ತರಗಳನ್ನು ಗುರುತಿಸಿ ಅರಿಯುವ ಪ್ರಯತ್ನಗಳು ಕನ್ನಡದಲ್ಲಿ ಎಪ್ಪತ್ತರ ದಶಕದಿಂದ ಈಚೆಗೆ ಬಿರುಸು ಗೊಂಡಿರುವುದನ್ನು ಗಮನಿಸಬಹುದು. ಇಂತಹ ಪ್ರಕ್ರಿಯೆಯಲ್ಲಿ ಒಂದು ಸಮಸ್ಯೆ ಇದೆ. ನಮ್ಮಲ್ಲಿ ರೂಪಗೊಂಡಿರುವ ಸಾಮಾಜಿಕ ರಚನೆಗಳ ಕುರಿತ ತಿಳುವಳಿಕೆಯೂ ಕಳೆದ ಶತಮಾನದಲ್ಲಿ ಸಾಮಾಜಿಕ ವಿಜ್ಞಾನಗಳು ಕಟ್ಟಿಕೊಟ್ಟ ಅರಿವುಗಳಾಗಿವೆ. ಈ ಅರಿವು ಸಮಾಜದ ನೇರ ಪರಿವೀಕ್ಷಣೆಯಿಂದ ಬಂದಿಲ್ಲದಿರುವುದು ಇಲ್ಲಿನ ಸಮಸ್ಯೆಯಾಗಿದೆ. ಯಾವುದೇ ಕಲಾಕೃತಿಯೊಂದು ತನ್ನ ಒಡಲಲ್ಲಿ ನಿರ್ಮಿಸುವ ಸಾಮಾಜಿಕ ನೇಯ್ಗೆಯು ಆ ಸಮಾಜವನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸುವ, ಗ್ರಹಿಸುವ ಶ್ರದ್ಧೆಯಿಂದ ಬಂದಿ ರುತ್ತದೆ. ಅಂದರೆ ಅನುಭವ ಜನ್ಯವಾಗಿ ರೂಪಗೊಂಡ ಕೃತಿ ಮಾತ್ರ ಶ್ರೇಷ್ಠ ಕಲೆಯಾಗಿ ಮಾರ್ಪಡಲು ಸಾಧ್ಯ ಎನ್ನುವುದನ್ನು ಸಾಹಿತ್ಯ ಮೀಮಾಂಸಕರು ಒಪ್ಪಿದ್ದಾರೆ.

ಯಾವುದೇ ಸಮಾಜದ ಚೈತನ್ಯ ನಿಂತಿರುವುದು ಅಲ್ಲಿನ ಆರ್ಥಿಕ ಉತ್ಪನ್ನಗಳ ಮೇಲೆ. ಈ ಉತ್ಪಾದನೆಯನ್ನು ಮತ್ತು ಹಂಚಿಕೆಯನ್ನು ಸಾಮಾಜಿಕ ಸ್ತರಗಳು ಹೇಗೆ ನಿಯಂತ್ರಿ ಸುತ್ತವೆ ಎನ್ನುವುದೇ ಶೋಷಣೆಯ ಸ್ವರೂಪವನ್ನು ಪರಿಚಯಿಸುವ ಸಂಗತಿಯೂ ಆಗಿರುತ್ತದೆ. ಈ ಪ್ರಕ್ರಿಯೆಯು ಸಮಾಜದಲ್ಲಿ ಪ್ರಧಾನ ಮತ್ತು ಅಧೀನತೆಯ ನೆಲೆಗಳನ್ನು ಹೇಗೆ ಸೃಷ್ಟಿಮಾಡುತ್ತದೆ ಎಂಬುದನ್ನು ಸಹ ವಿವರಿಸುತ್ತದೆ. ಈ ವಿದ್ಯಮಾನವನ್ನು ಗುರು

ತಿಸುವ ಕೆಲಸವನ್ನು ಸಾಮಾಜಿಕ ನಕ್ಷೆ ಎಂದು ಕರೆಯಬಹುದು. ನಮ್ಮ ಆಲೋಚನೆಯಲ್ಲಿರುವ ಸಾಮಾಜಿಕ ಸ್ತರದ ಕಲ್ಪನೆಯೂ ಎರಡು ಆಯಾಮಗಳಿಂದ ನಮಗೆ ದಕ್ಕಿದೆ. ಮೊದಲನೆಯದು ಶೈಕ್ಷಣಿಕ ಪದ್ಧತಿಗಳು ಈ ಸಾಮಾಜಿಕ ನಕ್ಷೆಯನ್ನು ನಮಗೆ ರಚಿಸಿಕೊಟ್ಟಿರುವುದು. ಎರಡನೆಯದು ನಾವು ಬದುಕುತ್ತಿರುವ ಸಮಾಜವನ್ನು ಸೂಕ್ಷ್ಮವಾಗಿ ಗ್ರಹಿಸುವುದರಿಂದಲೂ ಇಂತಹ ನಕ್ಷೆಗಳು ಸೃಷ್ಟಿಯಾಗುತ್ತವೆ. ಆದರೆ ಅನೇಕ ಸಾರಿ ಶಿಕ್ಷಣ ಕಟ್ಟಿಕೊಟ್ಟ ಸಮಾಜದ ತಿಳುವಳಿಕೆಗೂ, ಸಮಾಜವನ್ನು ಅನುಭವಜನ್ಯವಾಗಿ ಗ್ರಹಿಸುವ ನೆಲೆಗೂ ನಡುವೆ ಅನೇಕ ವೈರುಧ್ಯಗಳು ಕಾಣುತ್ತವೆ. ಆದರೆ ಮೌಲ್ಯಮಾಪನ ದಲ್ಲಿ ನಾವು ಸಹಜವಾಗಿಯೇ ಶಿಕ್ಷಣದಿಂದ ಪಡೆದ ತಿಳುವಳಿಕೆಯನ್ನು ಮಾನ್ಯಮಾಡಿ ಅನುಭವ ಜನ್ಯ ತಿಳಿವನ್ನು ಹಿಂದೆ ಸರಿಸುವ ಪರಿಪಾಠಗಳು ನಮ್ಮಲ್ಲಿ ಬಳಕೆಯಲ್ಲಿವೆ. ಹೀಗೆ ಬದುಕಿಗೆ ಹೊರತಾದ ಶಿಕ್ಷಣ ಸಿದ್ಧಗೊಳಿಸಿಕೊಟ್ಟಿರುವ ಅರಿವಿನ ಮೂಲಕ ಕಲಾಕೃತಿ ಯನ್ನು ಪ್ರವೇಶ ಮಾಡಿ ಅಲ್ಲಿನ ಜೀವನ ವಿಧಾನವನ್ನು ಗ್ರಹಿಸಲು ಪ್ರಯತ್ನಸಿದಾಗ ವಿಮರ್ಶಕರು ಸಹಜವಾಗಿಯೇ ದಾರಿ ತಪ್ಪುತ್ತಾರೆ. 'ಮಲೆಗಳಲ್ಲಿ ಮದುಮಗಳು' ಕುರಿತು ಮೇಲೆ ಪ್ರಸ್ತಾಪಿಸಿದ ವಿಮರ್ಶೆಗಳು ಇಂತಹ ಬೌದ್ಧಿಕ ಪೂರ್ವಗ್ರಹಗಳಿಂದ ಪ್ರಭಾವಿತವಾಗಿರುವುದನ್ನು ಗುರುತಿಸಬಹುದು. ಕಾದಂಬರಿಯನ್ನು ಓದುವ ಈ ಕ್ರಮ ಬೌದ್ಧಿಕವಾಗಿ ತಾನು ಆರೋಪಿಸಿಕೊಂಡ ಸತ್ಯವನ್ನು ನಿಜಗೊಳಿಸುವಂತಹ ನಿದರ್ಶನಗಳನ್ನು ಕೃತಿಯಲ್ಲಿ ಹುಡುಕುವ ಪ್ರಯತ್ನವಾಗಿ ಕಂಡುಬರುತ್ತದೆ.

ಯಾವುದೇ ಕಲಾಕೃತಿಯೊಂದನ್ನು ರಚಿಸುವ ಲೇಖಕ ಆ ಕಾದಂಬರಿಯಲ್ಲಿ ಮೂರ್ತಗೊಳ್ಳುವ ವ್ಯಕ್ತಿಗಳು, ಬದುಕಿನ ಕ್ರಮ, ಪ್ರಕೃತಿಯ ಪರಿವರ್ತನೆ ಮತ್ತು ನಿರೂಪಣೆಯಲ್ಲಿ ಮೈಪಡೆಯುವ ಎಲ್ಲಾ ಲೋಕವ್ಯಾಪಾರಗಳು ಬರಹಗಾರನ ನಿಯಂತ್ರಣದಲ್ಲಿರುತ್ತದೆ. ಇದು ಒಂದು ವರ್ಗದ ವಿಮರ್ಶೆಯ ನಿಲುವು. ಇಂತಹ ನಿಲುವು ಆ ಲೇಖಕನನ್ನು ಆ ಕಾದಂಬರಿಯಲ್ಲಿ ಘಟಿಸುವ ನಾವು ಒಪ್ಪುವ-ಒಪ್ಪದಿರುವ ಸಂಗತಿಗಳಿಗೆ ಜವಾಬ್ದಾರನನ್ನಾಗಿ ಮಾಡಿ ಆತನೊಂದಿಗೆ ಜಗಳಕ್ಕೆ ನಿಲ್ಲುತ್ತವೆ. ಇಂತಹ ಓದುವ ಕ್ರಮ ಏನೆಲ್ಲಾ ಸಮಸ್ಯೆಗಳನ್ನು ಸೃಷ್ಟಿಸಬಲ್ಲದು ಎಂಬುದಕ್ಕೆ 'ಮದುಮಗಳು' ಕುರಿತು ಈವರೆಗೆ ನಡೆದಿರುವ ಚರ್ಚೆಗಳೇ ಸಾಕ್ಷಿಯಾಗಿವೆ.

'ಮಲೆಗಳಲ್ಲಿ ಮದುಮಗಳು' ಒಂದು ವಿಶಿಷ್ಟ ರಚನಾ ವಿನ್ಯಾಸದಲ್ಲಿ ಸೃಷ್ಟಿಯಾಗಿರುವ ಕಾದಂಬರಿಯಾಗಿದೆ. ಜೀವಯಾನ ಮತ್ತು ಕಾಲಯಾನ ಪ್ರಯಣಗಳ ಮಹಾ ಕಥನವಿದು. ಇದರ ರಚನೆಯಲ್ಲಿಯೇ ಆ ಕೃತಿಯಲ್ಲಿ ಬರುವ ಸಾಮಾಜಿಕ ವಿದ್ಯಮಾನಗಳನ್ನು ಕುರಿತ ವಿಮರ್ಶೆಯೂ ಜೊತೆಜೊತೆಗೆ ನಡೆದಿದೆ. ಕಾದಂಬರಿಯ ರಚನೆಯನ್ನು ಸೂಕ್ಷ್ಮವಾಗಿ ನೋಡಿದರೆ ಉದ್ದಕ್ಕೂ ಸ್ವತಃ ನಿರೂಪಕನೇ ವಿಮರ್ಶಕನ ಹಾಗೆ ಕಾದಂಬರಿಯ ಸನ್ನಿ ವೇಶಕ್ಕೆ, ವ್ಯಕ್ತಿಗಳ ವರ್ತನೆಗಳಿಗೆ, ಚಾರಿತ್ರಿಕ ಸಂದರ್ಭ ಅಥವಾ ಪ್ರಕೃತಿ ಲಯಗಳಿಗೆ

ಪ್ರತಿಕ್ರಿಯಿಸುವ-ವಿಶ್ಲೇಷಿಸುವ ಕಟು ಅಭಿಪ್ರಾಯಗಳು ಕಥನಾವಳಿಯ ಭಾಗವಾಗಿಯೇ ದಾಖಲಾಗಿವೆ. ಆದರೆ ಕಾದಂಬರಿಯನ್ನು ವಿಮರ್ಶೆಗೆ ಒಳಗು ಮಾಡಿದ ವಿಮರ್ಶಕರೂ ಈ ಅಂಶವನ್ನು ಗಣನೆಗೆ ತೆಗೆದುಕೊಂಡಿಲ್ಲ. ಉದಾರಣೆಗಾಗಿ ಒಂದು ಸನ್ನಿವೇಶವನ್ನು ಗಮನಿಸಿ.

ಕಾದಂಬರಿಯ ಆರಂಭದಲ್ಲಿಯೇ ಮಲೆನಾಡಿನ ಭೂಮಾಲಿಕರಾದ ಊಳಿಗಮಾನ್ಯದ ಗೌಡರು ಹಾಗೂ ಹಳೇಪೈಕದವರ ನಡುವೆ ನಡೆಯುತ್ತಿರುವ ವಾಜ್ಯವೊಂದರ ಪ್ರಸ್ತಾಪ ವಾಗುತ್ತದೆ. ಲಕ್ಕುಂದದ ಸೇಸನಾಯ್ಕನ ಮನೆಯಲ್ಲಿ ನಡೆಯುತ್ತಿದ್ದ ಪಂಚಾಯ್ತಿ ಗಂಡ ಸತ್ತು ಬಸುರಿಯಾದ ಕಾಡಿಯ ಬಸುರಿಗೆ ಸಂಬಂಧಿಸಿದ್ದು ಆದರೂ ಅದು ಗೌಡರ ಯಾಜ ಮಾನ್ಯದ ವಿರುದ್ಧದ ಬಂಡಾಯವೇಳುವ ಸಭೆಯಾಗಿತ್ತು. ಈ ಬಂಡಾಯಕ್ಕೆ ಕಾರಣ ಹಳೇಪೈಕದವರು ಮದುವೆಗಳಲ್ಲಿ ಗೌಡರ ಸಂಪ್ರದಾಯದಂತೆ ಮದುಮಗನ ಮೆರವಣಿ-ಗೆಗೆ ಕುದುರೆಯನ್ನು ಬಳಸುವುದನ್ನು ಗೌಡರು ಹತ್ತಿಕ್ಕಲು ಈ ಆಚರಣೆಯನ್ನು ನಿಷೇಧಿ ಸುವ ಸರ್ಕಾರಿ ಆದೇಶವನ್ನು ಹೊರಡಿಸಿರುತ್ತಾರೆ. ಈ ಘಟನೆಯಲ್ಲಿ ಗೌಡರ ಅಸಮಾ ಧಾನದ ಹಿಂದಿನ ಪಿತೂರಿಯನ್ನು ಹಾಗೂ ಸರ್ಕಾರ ಗೌಡರ ಇಚ್ಛೆಯಂತೆ ಹಳೆಪೈಕ-ದವರ ವಿರುದ್ಧ ಆಜ್ಞೆಹೊರಡಿಸಿದ ಹಿನ್ನೆಲೆಯ ಕಾರಣವನ್ನು ಕಾದಂಬರಿಯ ರಚನೆಯ ನೆಯ್ಗೆಯ ಭಾಗವಾಗಿಯೇ ಕುವೆಂಪು ಅವರು ಹೀಗೆ ನಿರೂಪಿಸಿದ್ದರು "ಸರ್ಕಾರದ ಇತ್ಯರ್ಥಕ್ಕೆ ಕಾರಣ ನ್ಯಾಯಪಕ್ಷಪಾತವಾಗಿರಲಿಲ್ಲ. ಬಲ ಪಕ್ಷಪಾತವಾಗಿತ್ತು. ಬಲಿಷ್ಠರೂ ಬಹುಸಂಖ್ಯೆಯವರೂ ಆದವರ ಕಡೆ ಸರ್ಕಾರವಿದ್ದರೆ ಅದಕ್ಕೂ ಕ್ಷೇಮ, ನ್ಯಾಯ ರಕ್ಷಣೆಯೂ ಸುಲಭಸಾಧ್ಯ. ಮೈಸೂರು ಸಂಸ್ಥಾನದ ಅಂಚಾಗಿ, ದುರ್ಗಮವಾದ ಪರ್ವ ತಾರಣ್ಯಗಳ ಬೀಡಾಗಿ ಆಗತಾನೆ ನಗರ ಕೌಲೆದುರ್ಗ ಮೊದಲಾದ ಪಾಳೆಯಪಟ್ಟುಗಳ ಕಿರುಕುಳದಿಂದ ಪಾರಾಗಿದ್ದ ಮಲೆನಾಡಿಗೆ ಅಲ್ಲಿದ್ದ ಬಹುಸಂಖ್ಯೆಯ ಬಲಿಷ್ಠರ ಇಚ್ಛೆ-ಯಂತೆ ಸರ್ಕಾರದ ಕಾನೂನು ಆದುದರಲ್ಲಿ ಆಶ್ಚರ್ಯವೇನಿಲ್ಲ"

ಇಲ್ಲಿನ ಶೋಷಣೆಯ ಸಾಂಸ್ಥಿಕ ಸ್ವರೂಪವನ್ನು ನಿರೂಪಕ ಕಥನವಾಗಿಸುವ ದೃಷ್ಟಿ ಕೋನಕ್ಕಿಂತ ವ್ಯವಸ್ಥೆಯೊಂದರ ನಡೆಯ ಹಿಂದಿನ ಹುನ್ನಾರವನ್ನು ವಿವರಿಸುವ ಸಂಗತಿಯನ್ನು ವಿಮರ್ಶೆ ಗುರುತಿಸಲಿಲ್ಲ. ನಿರೂಪಕ ಕಾಡಿಯ ಬಸಿರಿನ ತನಿಖೆಯಲ್ಲಿ ಆಕೆ ಪ್ರತಿ ಸಾರಿಯೂ ಒಬಬ್ಬ ಗಂಡಸಿನ ಹೆಸರು ಹೇಳಿದ್ದರಿಂದ ಅದರಲ್ಲಿ ತೀರ್ಪುಕೊಡಬೇಕಿದ್ದ ಸೇಸನಾಯಕನ ಹೆಸರು ಕೂಡ ಪ್ರಸ್ತಾಪವಾದ್ದರಿಂದ ಪಂಚಾಯ್ತಿಗೆ ಉಂಟಾದ ಸಮಸ್ಯೆಯನ್ನು ವ್ಯಂಗ್ಯವಾಗಿ ನಿರೂಪಿಸಿದ್ದಾರೆ. "ಅಂತೂ ಮುಖಂಡರ ಅನ್ವೇಷಣೆಯ ನೌಕೆಗೆ ಧ್ರುವತಾರೆಯೂ ಅಗೋಚರವಾಗಿ ಉತ್ತರಮುಖಿಯೂ ಕೆಟ್ಟುಹೋಗಿ ನಡುಹ ಗಲಲ್ಲಿ ದೆಸೆಗೆಟ್ಟಂತಾಯಿತು." ಈ ಹೇಳಿಕೆ ಕಥಾ ನಿರೂಪಣೆಯ ಸಂದರ್ಭದಲ್ಲಿಯೇ ತಾನು ಸೃಷ್ಟಿಸುತ್ತಿರುವ ಸಾಮಾಜಿಕ ವ್ಯವಸ್ಥೆಯನ್ನು ನಿರೂಪಕನೇ

ವಿಮರ್ಶಿಸುವ ನೆಲೆ ಈ ಕೃತಿಯಲ್ಲಿ ಅಂತಸ್ಥವಾಗಿದೆ. ಹೀಗೆ ಕಾದಂಬರಿಯ ಚಾರಿತ್ರಿಕ ಮತ್ತು ಸಾಮಾಜಿಕ ಸಂದರ್ಭಗಳ ವಿಶ್ಲೇಷಣೆಗೆ ಕೃತಿಯ ಒಳಗೆ ಸಿಗುವ ಸಾಕ್ಷಿಗಳನ್ನು ಚರ್ಚೆಗೆ ಬಳಸಿದರೆ ನಮ್ಮ ಅನುಭವ-ತೀರ್ಮಾನಗಳು ಬದಲಾಗುವ ಸಾಧ್ಯತೆ ಇದೆ.

'ಮಲೆಗಳಲ್ಲಿ ಮದುಮಗಳು' ಕಟ್ಟಿಕೊಡುವ ಸಾಮಾಜಿಕ ವಿನ್ಯಾಸವು ಮಲೆನಾಡಿನ ಬದುಕನ್ನು ಬಿಡಿ ಬಿಡಿಯಾಗಿ ನೋಡದೆ ಇಡಿಯಾಗಿ ನೋಡುವ ಕ್ರಮದಲ್ಲಿ ರಚನೆಯಾಗಿದೆ. ಪ್ರಕೃತಿ, ಮಳೆ, ಸಸ್ಯ, ಪ್ರಾಣಿ, ಮನುಷ್ಯ ಹೀಗೆ ಈ ಕಾದಂಬರಿಯನ್ನು ಒಳ-ಹೊಕ್ಕು ಅಲ್ಲಿನ ಪ್ರಯಾಣದ ಭಾಗವಾಗಿ ಗ್ರಹಿಸುವ ವಿಧಾನ ಒಂದಾದರೆ ಅಲ್ಲಿ ನಡೆಯುವ ವಿದ್ಯಮಾನಗಳಿಂದ ಮಾನಸಿಕ ದೂರವನ್ನು ಕಾಯ್ದುಕೊಂಡು ನಮ್ಮ ಅವಲೋಕನದ ಗ್ರಹಿಕೆಯನ್ನು ಮಂಡಿಸುವುದು ಮತ್ತೊಂದು ವಿಧಾನ.

ಕನ್ನಡದ ಆಧುನಿಕ ಮನಸ್ಸಿಗೆ ಈ ಕೃತಿಯೊಂದು ಮಸೆಯುವ ಕಲ್ಲು (ಕಾದಂಬರಿಯಲ್ಲಿ ಒಂದು ಮಸೆಯುವ ಕಲ್ಲಿನ ಪ್ರಕರಣ ಬರುತ್ತದೆ.) ಅದು ಕನ್ನಡ ಸಂಸ್ಕೃತಿ. ಕನ್ನಡದ ಲೋಕಜ್ಞಾನವನ್ನು ಅನುಭವಜ್ಞಾನವನ್ನು ಮತ್ತು ಈವರೆಗಿನ ನಮ್ಮ ತಿಳುವಳಿಕೆ, ನಾವು ಕಟ್ಟಿಕೊಂಡ ಎಲ್ಲ ಸಿದ್ಧಾಂತಗಳನ್ನು, ಮಸೆದೂ ಮಸೆದೂ ಅವುಗಳ ತಾಕತ್ತನ್ನು ಒರೆಗೆ ಹಚ್ಚಿ ನೋಡುತ್ತಿರುವ ಒಂದು ಅತ್ಯಂತ ನಿಷ್ಠುರವೂ ಮೃದುವೂ ಆದ ಸಾಂಸ್ಕೃತಿಕ ಒರೆಗಲ್ಲು. ಮನುಷ್ಯಲೋಕ ವಿಕಾಸವಾಗುತ್ತಿರುವ ಹಾದಿಯಲ್ಲಿ ಹೇಗೆ ಪ್ರಕೃತಿಯೊಂದಿಗಿನ ಸಂಬಂಧಗಳನ್ನು ಸಂಸ್ಕೃತಿಯಾಗಿ ಪರಿವರ್ತಿಸಿಕೊಳ್ಳುತ್ತದೆ ಹಾಗೂ ಬದುಕನ್ನು ನಿರ್ವಹಿಸಲು ಭೂತ ಭವಿಷ್ಯತ್ ಕಾಲದ ತಿಳುವಳಿಕೆಯನ್ನು ಆಚರಣೆಗಳನ್ನು ನಂಬಿಕೆಗಳನ್ನು ವಿಶ್ವಾಸಗಳನ್ನು ನಿರ್ದಿಷ್ಟವಾಗಿ ನಾಳೆಯ ಮುನ್ನೆಲೆಗೆ ಕೊಂಡು ತರುವುದೋ ಅದು ಸಂಸ್ಕೃತಿ ಎಂದು ಕಾದಂಬರಿ ನಂಬುತ್ತದೆ.

೨೦ನೇ ಶತಮಾನದ ಆರಂಭ ಮತ್ತು ೧೯ನೇ ಶತಮಾನದ ಕೊನೆಯ ೩ ದಶಕಗಳ ಸಂಕ್ರಮಣ ಘಟ್ಟದ ಸಂದರ್ಭದಲ್ಲಿನ ದಟ್ಟ ಮಲೆನಾಡು ಈ ಕೃತಿಯಲ್ಲಿ ಮೈದಳೆದಿದೆ. "ಕಾನೂರು ಹೆಗ್ಗಡಿತಿ"ಯಲ್ಲಿ ಕಂಡುಬರುವ ಮಲೆನಾಡು ಆಗಲೇ ನಾಗರಿಕ ಸಮಾಜಕ್ಕೆ ತೆರೆದುಕೊಂಡಿರುವಂತಹದು. ಆದರೆ ಈ ಕೃತಿಯದು ಹೊರಬಾಗಿಲುಗಳಿಲ್ಲದ ದಟ್ಟ ಮಲೆನಾಡು. ಇಲ್ಲಿರುವ ಮಾನವಲೋಕವಾಗಲಿ ಅಥವಾ ಜೀವಲೋಕವಾಗಲಿ ಹೊರಜಗತ್ತಿಗೆ ಇನ್ನೂ ಬಾಗಿಲುಗಳು ತೆರೆದುಕೊಂಡಿಲ್ಲದ ಕಾಲಘಟ್ಟವದು. ಈ ಕೃತಿಯಲ್ಲಿನ ಜೀವ ಪ್ರವಾಹವನ್ನು ಗಮನಿಸಿದರೆ ಇದರ ಒಳಗೆ ಬಂದವರು ಹೊರ ಹೋಗಲು ದಾರಿಗಾಣದೆ ಬಂಧಿತರಂತಿದ್ದಾರೆ. ಜೀವರತ್ನಯ್ಯನ ಸಂಕಟಗಳು ಅಥವಾ ಹೊರಹೋಗಲು ತುಡಿಯುತ್ತಿರುವ ದೇವಯ್ಯನ ಪಾತ್ರದ ತಹತಹಗಳನ್ನು ಗಮನಿಸಿದರೆ ಇದು ಮನದಟ್ಟಾಗುತ್ತದೆ. ಈ ವರ್ತಮಾನದಿಂದ ಪಾರಾಗಿ ಹೊರಜಗತ್ತಿಗೆ ಬಿದ್ದವನು ಗುತ್ತಿ ಮಾತ್ರ. ಅ ಲೋಕ

ದಿಂದ ಕಳಚಿಕೊಂಡು ಹೊರಬರಲು ಹುಳು ಚಿಟ್ಟೆಯಾಗಿ ಪರಿವರ್ತನೆ ಯಾಗುವಂತಹ ಪ್ರಾಣಾ ಪಾಯವನ್ನು ಹಾದು ಬರಬೇಕಾಗುತ್ತದೆ. ಗುತ್ತಿ ಈ ಲೋಕದಿಂದ ಪಾರಾಗಲು ತುಂಬಿ ಹರಿಯುತ್ತಿರುವ ತುಂಗೆಯ ಆ ಪ್ರವಾಹದಲ್ಲಿ ತನ್ನ ಪ್ರಾಣ ದಂತೆ ಕಾಪಿಟ್ಟುಕೊಂಡ ಹುಲಿಯನನ್ನು ಬಲಿಕೊಟ್ಟು ಪಾರಾಗಬೇಕಾಗುತ್ತದೆ. ಈ ಕಾದಂಬರಿಯಲ್ಲಿ ಸಾಮಾಜಿಕ ವಿನ್ಯಾಸ ರಚನೆಯ ಒಳಗೆ ಹೀಗೆ ನಿಸರ್ಗವೂ ಒಂದು ಪಾತ್ರವಾಗಿ ಕಥನದಲ್ಲಿ ಭಾಗಿಯಾಗಿ ರುವುದನ್ನು ಪರಿಗಣನೆಗೆ ತೆಗೆದು ಕೊಳ್ಳಬೇಕು.

ಕಾದಂಬರಿಯ ಸಾಮಾಜಿಕ ಸ್ತರಗಳಲ್ಲಿ ಎದ್ದು ಕಾಣುವ ಪುರೋಹಿತ ವರ್ಗ ಇದೆ. ಸಂಖ್ಯಾ ದೃಷ್ಟಿಯಿಂದ ಕಡಿಮೆ ಜನವರ್ಗವಾಗಿದ್ದರೂ ಮಲೆನಾಡಿನ ಬದುಕನ್ನು ನಿರ್ದೇ-ಶಿಸುತ್ತಿರುವ ಗುಂಪು ಇದು. ಕಾದಂಬರಿ ಆರಂಭದಲ್ಲಿ ಈ ಗುಂಪು ಪಾರಂಪರಿಕ ಜ್ಞಾನ ಮಾತ್ರ ಇದ್ದಿರುವ; ಆದರೆ ಆಸ್ತಿಯ ಒಡೆತನವಿಲ್ಲದಿದ್ದಂಥ ವರ್ಗವಾಗಿತ್ತು. ಕಾದಂಬರಿಯ ಘಟನೆಗಳು ಮುಂದುವರಿದಂತೆ ಆ ವರ್ಗ ತನ್ನ ಜ್ಞಾನದ ಒಡೆತನವನ್ನು ಬಳಸಿಕೊಂಡು ಸಂಪತ್ತಿನ ಒಡೆತನವನ್ನೂ ಗಳಿಸಿಕೊಳ್ಳುವ ಬದಲಾವಣೆಯ ಲಕ್ಷಣವನ್ನು ತೋರಿಸುತ್ತದೆ. ಉಳಿಗಮಾನ್ಯದ ಮೂಲಕ ಭೂಮಿಯ ಒಡೆತನ ಇದ್ದ ಒಕ್ಕಲಿಗ ಸಮುದಾಯ ಕ್ರಮೇಣ ತನ್ನ ಆಸ್ತಿಯ ಒಡೆತನದ ಹಕ್ಕನ್ನು ಪುರೋಹಿತ ವರ್ಗಕ್ಕೆ ಬಿಟ್ಟುಕೊಟ್ಟು ತನಗೆ ತಾನೇ ಶಿಥಿಲಗೊಳಿಸಿಕೊಳ್ಳುತ್ತಿದ್ದ ಸ್ಥಿತಿಯನ್ನು ಕಾದಂಬರಿ ವಿವರಿಸುತ್ತದೆ. ಹೂವಳ್ಳಿ ವೆಂಕಟಪ್ಪ ನಾಯಕ ತನ್ನ ವ್ಯಭಿಚಾರ ಲೋಲುಪ್ತತೆಗಳಿಂದಾಗಿ ತನ್ನ ಎಲ್ಲ ಆಸ್ತಿಯನ್ನು ಕಲ್ಲೂರಿನ ಮಂಜಭಟ್ಟರಿಗೆ ಅಡಮಾನವಾಗಿ ಬಿಟ್ಟುಕೊಡುವ ವಿವರವನ್ನು ಕಾದಂಬರಿ ಕಟ್ಟಿಕೊಡುತ್ತದೆ. ಆಸ್ತಿ ಜಪ್ತಿಗೆ ಬರುವ ಕಾಲಕ್ಕೆ ಸಿಂಭಾವಿಯ ಭರಮಯ್ಯ ಹೆಗ್ಗಡೆ ಎಂಬ ವಯಸ್ಕನಿಗೆ ತನ್ನ ಹರೆಯದ ಮಗಳು ಚಿನ್ನಮ್ಮನನ್ನು ಕೊಟ್ಟು ಎರಡನೆಯ ಮದುವೆ ಮಾಡಿ ಸಾಲ ತೀರಿಸಲು ಮುಂದಾಗಿರುವುದನ್ನು ಕಾದಂಬರಿ ನಿರೂಪಿಸುತ್ತದೆ. ಹೀಗೆ ಒಬ್ಬೊಬ್ಬರೆ ಗೌಡರು ಆಸ್ತಿಯನ್ನು ಕಳೆದುಕೊಳ್ಳುವ ಪ್ರಕ್ರಿಯೆಯನ್ನು ಪ್ರತಿರೋಧಿಸುವ ಕಲ್ಲಳ್ಳಿಯ ಕಲ್ಲಯ್ಯಗೌಡ ಮತ್ತು ಹಳೆಮನೆಯ ಸುಬ್ಬಣ್ಣಹೆಗಡೆಯವ ರಂತಹ ಕೆಲವರು ಇದ್ದರೂ ಕಾದಂಬರಿಯಲ್ಲಿ ಪ್ರಸ್ತಾಪಿತರಾದ ಎಲ್ಲ ಗೌಡರುಗಳೂ ಮಂಜಭಟ್ಟರ ಹತ್ತಿರ ಒಂದಲ್ಲ ಒಂದು ಕಾರಣಕ್ಕೆ ಸಾಲಪಡೆದು ಆಸ್ತಿಗಳನ್ನು ಅಡ ವಿಟ್ಟವರೇ ಆಗಿದ್ದಾರೆ. ಪುರೋಹಿತ ಶಾಹಿ ಜ್ಞಾನವನ್ನು ಬಂಡವಾಳವಾಗಿಸಿ ಆ ಮೂಲಕ ಭೂಮಿಯ ಒಡೆತನ ಪಡೆಯುವ, ಉತ್ಪಾದನೆಗಳನ್ನು ತಾನೇ ನಿಯಂತ್ರಣಕ್ಕೆ ತೆಗೆದು ಕೊಳ್ಳುವ ಹೊಸ ಬಗೆಯ ‘ಕ್ಯಾಪಿಟಲಿಸಂ’ ಹುಟ್ಟುವ ಸೂಕ್ಷ್ಮತೆಯನ್ನು ಕಾದಂಬರಿ ಸೂಚಿಸುತ್ತದೆ. ಅಲ್ಲದೆ ಹಿಂಸೆಯನ್ನು ವ್ಯವಸ್ಥಿತ ರೂಪದಲ್ಲಿ ಜಾರಿಗೆ ತಂದ ಶ್ರೇಯಸ್ಸು ಈ ಹೊಸ ಬಂಡವಾಳಿಗರಿಗೆ ಸಲ್ಲುತ್ತದೆ. ಇದು ಘಟ್ಟದ ಕೆಳಗಿಂದ ಮಂತ್ರಪ್ರೋಕ್ಷಣೆಯ ಕಮಂಡಲ ಹಿಡಿದು ಮಲೆನಾಡಿಗೆ ಬಂದ ಮಂಜಾಭಟ್ಟರಿಂದಲೇ ನಡೆಯ ಬೇಕಾಗುತ್ತದೆ. ಇಂತಹ

ವಿಚಿತ್ರ ಸೂಕ್ಷ್ಮತೆಗಳನ್ನು ಕಾದಂಬರಿ ಮಂಡಿಸುತ್ತದೆ. ಇದು ಯಾವುದೇ ಸಮುದಾಯದ ತಪ್ಪನ್ನು ಎತ್ತಿ ತೋರಿ- ಸುವ ಆಶಯದ್ದಲ್ಲ. ಬದಲು ಜ್ಞಾನ ಮತ್ತು ಆಸ್ತಿಯ ಒಡೆತನಗಳ ಪರಸ್ಪರ ಅಕ್ರಮ ಜತೆಗಾರಿಕೆ ಎಂಥ ವಿನಾಶಕಾರಿಯೂ ಅಪಾಯಕಾರಿಯೂ ಆಗಬಲ್ಲ ದೆಂಬುದಕ್ಕೆ ಈ ಕೃತಿಯು ಸಾಕಷ್ಟು ನಿದರ್ಶನಗಳನ್ನು ತನ್ನಲ್ಲಿ ಹೊಂದಿದೆ.

'ಮದುಮಗಳು' ಕಾದಂಬರಿಯಲ್ಲಿ ಚಿತ್ರಿತವಾಗಿರುವ ಮಲೆನಾಡಿನಲ್ಲಿ ಒಕ್ಕಲತನದ ಮೂಲಕ ಭೂಮಿಯ ಒಡೆತನವಿದ್ದ ಮಲೆನಾಡ ಗೌಡರ ಜಾತಿಯ ಜೀವನಕ್ರಮಗಳು, ಅವರ ತೋಟ ಗದ್ದೆಗಳಲ್ಲಿ ದುಡಿಯುತ್ತಿದ್ದ ತಳವರ್ಗದ ಅವಲಂಬಿತರ ಜೀವನ ಕ್ರಮಗಳು, ವ್ಯಾಪಾರಕ್ಕೆ ಬಂದು ಅಲ್ಲಿಯೇ ನೆಲೆನಿಂತ ಮಲೆಯಾಳಿ ಸಾಬರು, ಧರ್ಮ ಪ್ರಚಾರಕ್ಕೆ ಬಂದ ಪಾದ್ರಿಗಳು ಮುಂತಾದ ಭಿನ್ನ ಜೀವನ ಪದ್ಧತಿಗಳ ಸಮುದಾಯಗಳ ಸಾಮಾಜಿಕ ಚಲನಶೀಲತೆಯನ್ನು ಕಾದಂಬರಿಯಲ್ಲಿ ಕಟ್ಟಿಕೊಡಲಾಗಿದೆ.

ಕಾದಂಬರಿ ತನ್ನ ಶಿಲ್ಪದಲ್ಲಿ ಸಾಧಿಸಿರುವ ಕಥನ ಸ್ವರೂಪಕ್ಕೆ ಹಲವು ಸ್ತರಗಳು, ಅರ್ಥದ ಮಡಿಕೆಗಳು ಪ್ರಾಪ್ತಗೊಂಡಿವೆ. ಮನುಷ್ಯ ಸಮುದಾಯಗಳು ಕಾಲಾಂತರಗಳಲ್ಲಿ ಕಟ್ಟಿಕೊಂಡಿರುವ ಜೀವನಕ್ರಮಗಳನ್ನು ಕಟ್ಟಿಕೊಡುತ್ತಲೇ ಈ ರಚನೆಗಳು ಹೇಗೆ ಪ್ರಕೃತಿಯ ಜೈವಿಕ ನಡೆಯಿಂದ ದೂರವಾಗಿವೆ ಎಂಬುದನ್ನು ಈ ಕಾದಂಬರಿ ಮನಗಾಣಿಸುತ್ತದೆ. ಗುತ್ತಿ ಮತ್ತು ಕಾವೇರಿಯರ ಭೇಟಿಯ ಸಂದರ್ಭದಲ್ಲಿ ಇಬ್ಬರು ಹರೆಯದ ಹುಡುಗ ಮತ್ತು ಹುಡುಗಿಯರ ನಡುವೆ ಏರ್ಪಡುವ ಪ್ರಕೃತಿ ಸಹಜವಾದ ಪರಸ್ಪರ ಆಕರ್ಷಣೆ ಮತ್ತು ಮೆಚ್ಚುಗೆಯ ಲೈಂಗಿಕತೆಯು ಜಾತಿಯ ಶ್ರೇಣಿಕರಣದ ಹಿನ್ನೆಲೆಯಲ್ಲಿ ಹತ್ತಿಕ್ಕಲ್ಪಡುವ ನೆಲೆ-ಯನ್ನು ಕಟ್ಟಿಕೊಟ್ಟಿದೆ. ಹಾಗೇಯೆ ಮುಕುಂದ ಮತ್ತು ಪೀಂಚಲು ನಾಗಬನದ ಕಾಡಿನಲ್ಲಿ ಭೇಟಿಯಾಗುವ ಪ್ರಕರಣವನ್ನು ಈ ಘಟನೆಯ ಜೊತೆಗಿಟ್ಟು ಹೋಲಿಸಿದರೆ ಜಾತಿ ಮತ್ತು ಅಧಿಕಾರ ಸಂಬಂಧಗಳಲ್ಲಿ ಹಾಸುಹೊಕ್ಕಾಗಿರುವ ಲೈಂಗಿಕತೆಯ ನೆಲೆ ಅರ್ಥವಾಗುತ್ತವೆ. ಗುತ್ತಿ ತಿಮ್ಮಿ, ಮುಕುಂದ, ಚಿನ್ನಮ್ಮ, ಪೀಂಚಲು ಮತ್ತು ಐತ, ದೇವಯ್ಯ ಮತ್ತು ದೇವಮ್ಮ, ಕಾವೇರಿಯ ಲೈಂಗಿಕ ಸಂಬಂಧಗಳಲ್ಲಿ ಕಾಣಿಸುವ ವಿನ್ಯಾಸಗಳು ಈ ವಿಷಯವನ್ನು ಸ್ಪಷ್ಟಪಡಿಸುತ್ತವೆ. ಕಾವೇರಿಯ ಮೇಲೆ ನಡೆವ ಅತ್ಯಾಚಾರ ಮತ್ತು ನಾಗಕ್ಕನ ಮೇಲೆ ನಡೆವ ಲೈಂಗಿಕ ದಾಳಿಯು ಘಟನೆಗಳು ನಮಗೆ ಲೈಂಗಿಕತೆಯ ಸಾಮಾಜಿಕ ನಿರ್ವಹಣೆ ಸೃಷ್ಟಿಸುವ ಹಿಂಸೆಯ ಸೂಕ್ಷ್ಮತೆಗಳನ್ನು ಕಟ್ಟಿಕೊಡುತ್ತದೆ. ಪುರುಷ ಯಾಜ ಮಾನ್ಯದ ಸಂಸ್ಥೆಗಳಾಗ ವಿವಾಹ ಮತ್ತು ಕುಟುಂಬಗಳು ಹೆಣ್ಣನನ್ನು ಒಂದು ಉತ್ಪಾದನಾ ವಸ್ತುವಾಗಿ ಗ್ರಹಿಸಿ ಆಕೆಯ ಸಹಜ ಸೃಜನಶೀಲತೆಯನ್ನು ದಮನಗೊಳಿಸುವ ಆಯಾಮಗಳನ್ನೂ ಹಾಗೂ ಈ ಸಂಸ್ಥೆಗಳು ಒಳಗೊಳಗಿಂದ ಶಿಥಿಲಗೊಳ್ಳುತ್ತಿರುವ ಪುರುಷಾಹಂಕಾರವು ಆತಂಕ- ಗೊಂಡು ಹೆಣ್ಣಿನ ವಿರುದ್ಧದ ದಮನವಾಗಿ ಸಾಮಾಜಿಕ ಮಾನ್ಯತೆಯನ್ನು ಗಳಿಸಿರುವ ಅಸಹಜತೆಯನ್ನು ಈ ನಿರೂಪಣೆಗಳು ದಾಖಲಿಸಿದೆ.

ಕಾದಂಬರಿಯು ಎಲ್ಲಾ ಸಾಮಾಜಿಕ ಸ್ತರದಲ್ಲೂ ಬರುವ ಹೆಣ್ಣು ಸಮುದಾಯವು ಬದುಕನ್ನು ತೀವ್ರ ಅನುರಕ್ತಿಯಿಂದ ಕಟ್ಟುತ್ತಿರುವಾಗಲೇ, ಮನೆಯ ಗಂಡಸರು ಕೆಡುವು ತ್ತಿರುವುದನ್ನು ಕಾದಂಬರಿ ಮನೋದೂರದಿಂದ ನಿರೂಪಿಸುತ್ತದೆ. ತಿಮ್ಮಿಗೆ ಹುಲಿಕಲ್ಲಿನಲ್ಲಿ ಆಗುವ ಸೂರ್ಯೋದಯದ ಅನುಭೂತಿ ಹೆಣ್ಣು ಪಡೆದುಕೊಳ್ಳುತ್ತಿರುವ ಅನುಭವ ವಿಸ್ತಾರವನ್ನು ಮತ್ತು ಈವರೆಗೆ ಗಂಡಿಗೆ ಮಾತ್ರ ಸೀಮಿತವಾಗಿದ್ದ ಆಧ್ಯಾತ್ಮಿಕ ಅನುಭವದಲ್ಲಿ ಹೆಣ್ಣು ಪಾಲ್ಗೊಳ್ಳಲು ಸನ್ನದ್ಧವಾಗಿರುವುದರ ರೂಪಕದಂತೆ ಕಾಣುತ್ತದೆ. ಮತ್ತೊಂದು ಮುಖ್ಯವಾದ ಸಂಗತಿಯನ್ನು ಕಾದಂಬರಿ ಕಟ್ಟಿಕೊಡಲು ಪ್ರಯತ್ನಿಸಿರುವುದು ಕಾದಂಬರಿಯಲ್ಲಿ ಹಿರಿಯ ಜೀವ ಸುಬ್ಬಣ್ಣ ಹೆಗ್ಗಡೆಗೆ ತನ್ನ ಇಳಿಬದುಕಿನಲ್ಲಿ ಪುತ್ರ ವಿಯೋಗಕ್ಕೆ ಕಾರಣ ತಮ್ಮ ಕುಟುಂಬ ನಿರಂತರವಾಗಿ ನಡೆಸಿಕೊಂಡು ಬಂದ ಮಾತೃ ಹತ್ಯೆಗಳು ಎಂಬ ಅರಿವು. ಮಾನವ ಸಮಾಜ ಪ್ರಕೃತಿಯ ಸಹಜ ಲಯವನ್ನು ಕೆಡಿಸುತ್ತಾ ಬಂದ ಕೇಡನ್ನು ಸಂಕೇತಿಸುವಂತೆ ಈ ನೆನಪು ವಿಸ್ತರಿಸಿಕೊಳ್ಳುತ್ತದೆ. ಹೆಣ್ಣಿನ ಹಲವು ಸಾಂಕೇತಿಕ ರೂಪಗಳು ಹಾಗೂ ಅವುಗಳನ್ನು ಪುರುಷ ಪ್ರಪಂಚ ವಿಕಾರಗೊಳ್ಳಿಸುತ್ತಾ ಬಂದ ಅವನತಿಯ ನಡೆಯನ್ನು ಕಾದಂಬರಿ ಕಟ್ಟಿಕೊಡುವುದೇ ಈ ಬರಹದ ಗುರುತ್ವವೆನ್ನ ಬಹುದು. ಕಾದಂಬರಿಯಲ್ಲಿ ಗುತ್ತಿಯ ಎದುರಿಸಿದ ಸವಾಲುಗಳು ಅನುಭವಿಸುತ್ತಿರುವ ಸಂಕಟಗಳ ಸರಮಾಲೆಗೆ ತಾನು ಅಸ್ಪೃಶ್ಯ ಜಾತಿಗೆ ಸೇರಿದವನೆಂಬ ಕಾರಣವನ್ನು ಗುರುತಿಸಿ ಕೊಳ್ಳುವ ಜಾಗ್ರತಿ ಉಂಟಾಗುವ ಮನೋನೆಲೆಯನ್ನು ಕೃತಿ ದಾಖಲಿಸಿದೆ. ಇದು ತಳ ಸಮುದಾಯಗಳಲ್ಲಿ ಮುಂದಿನ ದಿನಗಳಲ್ಲಿ ಕಾಣಿಸಿಕೊಳ್ಳುವ ಜಾತಿಗಳು ಎಚ್ಚರಗೊಳ್ಳುವ ಸಾಮಾಜಿಕ ನಡೆಯ ಮುನ್ಸೂಚನೆಯಾಗಿಯೂ ನೋಡಬಹುದು.

'ಮದುಮಗಳಲ್ಲಿ' ಕಾಣಿಸುವ ಪಾರಂಪರಿಕ ಜಾತಿವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದ ಆರ್ಥಿಕ ಚಟುವಟಿಕೆಗಳು ಹೊಸ ಚಲನೆಗೆ ಒಳಗಾಗುತ್ತಿರುವ ಸಂಗತಿಯನ್ನು ಕಟ್ಟಿ ಕೊಟ್ಟಿವೆ. ಘಟ್ಟದ ಕೆಳಗಿಂದ ಬರಿಗೈಲಿ ಬಂದ ಮಂಜಾಭಟ್ಟರು, ಮಲೆಬಾರಿನಿಂದ ಬಂದ ವ್ಯಾಪಾರಿ ಕರಿಮೀನು ಸಾಬಿ ಹಾಗೂ ಸ್ಥಳೀಯ ಗೇಣಿದಾರರಾಗಿದ್ದ ಹಳೆಪೈಕದವರು ಮಲೆನಾಡಿನ ಸಮಾಜದಲ್ಲಿ ಆರ್ಥಿಕ ಚಟುವಟಿಕೆಗಳನ್ನು ತಮ್ಮ ಕೈಗೆ ತೆಗೆದುಕೊಳ್ಳಲು ಹವಣಿಸುತ್ತಿದ್ದಾರೆ. ಅದಕ್ಕೆ ಮಲೆನಾಡನ್ನು ಪ್ರವೇಶ ಮಾಡಿರುವ ಕ್ರಿಶ್ಚಿಯನ್ ಮತ ಪ್ರಚಾರದ ಪರೋಕ್ಷ ಬೆಂಬಲವಿರುವುದನ್ನು ಕಾದಂಬರಿಯ ಲಯ ಮನಗಾಣಿಸುತ್ತದೆ. ಮಲೆನಾಡಿಗೆ ಪ್ರವೇಶ ಪಡೆದಿರುವ ಹೊಸ ರಾಜಕೀಯ ಶನ್ನಿವೇಷಗಳಿಂದ, ಹೊಸ ಪದಾರ್ಥಗಳಾದ ಸೈಕಲ್ಲು, ಹೋಟಲ್, ಕಾಫಿ ಮುಂತಾದವುಗಳ ಬಳಕೆಯಿಂದ ಮಲೆ ನಾಡಿನ ಸಮುದಾಯಗಳು ತಬ್ಬಿಬ್ಬು ಆಗಿರುವುದನ್ನು ಕಾದಂಬರಿ ದಾಖಲಿಸಿದೆ. ಈ ಕಾದಂಬರಿಯ ಹರವು ಎಷ್ಟು ವಿಶಾಲವಾಗಿದೆ ಎಂದರೆ ಸಾಮಾಜಿಕ ವಿನ್ಯಾಸ ಎಂಬ ಆಯಾಮದಲ್ಲಿ ಜಾತಿಗಳ ನಡುವಣ ಸಂಬಂಧಗಳನ್ನೂ ಹೆಣ್ಣು ಗಂಡುಗಳ ಅಧಿಕಾರ

ಸಂಬಂಧಗಳನ್ನು ಆಧ್ಯಾತ್ಮಿಕ ಹಾಗೂ ಧಾರ್ಮಿಕ ವ್ಯವಸ್ಥೆಗಳನ್ನು, ಶೋಷಣೆ ಮತ್ತು ಹಿಂಸೆಗಳ ಹಾಜರಿಯನ್ನು ಅಲ್ಲದೆ ಇವುಗಳಾಚೆ ಬದುಕಿಗಿರುವ ಸೌಂದರ್ಯದ ಸಾಧ್ಯತೆಗಳನ್ನು ನಿರೂಪಿಸಿದ ಬರವಣಿಗೆ ಇದು.

ಒಂದು ಜೀವಂತ ಕೃತಿಯ ಲಕ್ಷಣವೆಂದರೆ ಅದು ಸೃಷ್ಟಿಯಾದ ಕಾಲದಿಂದಲೂ ನಿರಂತರವಾಗಿ ವಿಕಾಸವಾಗುತ್ತಿರಬೇಕು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಗೆ ಇಂತಹ ಗುಣವಿದೆ. ಚಾರಿತ್ರಿಕವಾದ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಮಲೆನಾಡಿನ ಎಲ್ಲ ಸ್ತರಗಳ ಬದುಕು ಹಾದು ಬಂದ ಪಲ್ಲಟಗಳ ಹಾಗೂ ಅನುಭವಿಸಿದ ತಲ್ಲಣಗಳನ್ನು ಮತ್ತು ಅದರ ಧಾರಣಶಕ್ತಿಯನ್ನು ಮನಗಾಣಿಸುವ ಬರವಣಿಗೆ ಇದು. ಮನುಷ್ಯ ಬದುಕಿನ ಆದಿಮ ಪ್ರಶ್ನೆಗಳನ್ನು ವ್ಯಷ್ಟಿ ಮತ್ತು ಸಮಷ್ಟಿ ನೆಲೆಯಲ್ಲಿ ಚರ್ಚೆಗೆ ಒಳಗು ಮಾಡುವ ದೃಷ್ಟಿಕೋನದಿಂದಾಗಿ ಇದು ಕಾಲದೇಶಗಳ ಹಂಗನ್ನು ಮೀರುವ ಪವಾಡ ಸಂಭವಿಸುತ್ತದೆ. ಈ ಎಲ್ಲಾ ಕಾರಣಗಳಿಂದ ಮದುಮಗಳು ಕಾದಂಬರಿಗೆ ನಿಚ್ಚಂಪೊಸತೆನ್ನುವ ಸಾರ್ವ ಕಾಲಿಕವಾದ ಅಮರತ್ವದ ಗುಣ ಪ್ರಾಪ್ತವಾಗಿದೆ.

೫. ಆಗುವಿಕೆಯ ಬಹುಸ್ತರಗಳು: 'ಮಲೆಗಳಲ್ಲಿ ಮದುಮಗಳು'ವಿನಲ್ಲಿ ಗಂಡು - ಹೆಣ್ಣಿನ ಸಂಬಂಧ

– ಸಬಿತಾ ಬನ್ನಾಡಿ

ಗಂಡು ಹೆಣ್ಣಿನ ನಡುವಿನ ಸಂಬಂಧದ ಎಲ್ಲ ಸೂಕ್ಷ್ಮ ಎಳೆಗಳನ್ನೂ ಹದವಾಗಿ ಹೆಣೆದ ಕಾದಂಬರಿ 'ಮಲೆಗಳಲ್ಲಿ ಮದುಮಗಳು'. ಓದಿದಷ್ಟೂ ಸಲ ಹೊಸ ಹೊಳಹುಗಳನ್ನು, ಹೊಸ ಹುಮ್ಮಸ್ಸನ್ನೂ, ಹೊಸ ಕಾಣ್ಕೆಯನ್ನೂ ತೆರೆಯುತ್ತಲೇ ಇರುತ್ತದೆ. ಕತೆ ಅಂತಿಮ ವಾಗಿ ಏನಾಗುತ್ತದೆ ಎಂದು ತಿಳಿದಿದ್ದರೂ ಪ್ರತಿ ಓದಿನಲ್ಲೂ ನಮಗೆ ಕುತೂಹಲ ಹುಟ್ಟುವು ದಾದರೂ ಹೇಗೆ ಎಂಬುದೊಂದು ಅಚ್ಚರಿ. ಚಿನ್ನಮ್ಮನ ಮದುವೆ ಭರಮೈ ಹೆಗ್ಗಡೆ ಯೊಂದಿಗೆ ಇನ್ನೇನು ಆಗೇ ಬಿಡುತ್ತದೇನೋ ಎಂಬ ಆತಂಕ, ಹೇಗಾದರೂ ಅದು ತಪ್ಪಿ ಹೋಗಲಿ ಎಂಬ ಹಂಬಲ ನನ್ನೊಳಗನ್ನು ಪ್ರತಿ ಬಾರಿ ಆವರಿಸಿಕೊಳ್ಳುತ್ತದೆ. ಬಹುಶಃ ಇದು ಗಂಡು ಹೆಣ್ಣಿನ ಸಂಬಂಧದಲ್ಲಿರುವ ಬಿಕ್ಕಟ್ಟಿನ ಚಿರನೂತನ ಸಂಗತಿಯೆಡೆಗೆ ಇರುವ ಆತಂಕವೂ ಆಗಿರಬಹುದೇನೋ. ಆ ಬಿಕ್ಕಟ್ಟನ್ನು ನಿವಾರಿಸಿಕೊಳ್ಳುವ ಬಗೆಯೆಂತು? ಎಂಬೆಡೆಗಿನ ನಿಲ್ಲದ ಹುಡುಕಾಟವೂ ಆಗಿರಬಹುದೇನೋ.

ಗಂಡು ಹೆಣ್ಣಿನ ಸಂಬಂಧ ಅಂದ ತಕ್ಷಣವೇ 'ಕಲಿತ' ನಮ್ಮೆಲ್ಲರ ತಲೆಯೊಳಗೂ ಒಂದು 'ಆದರ್ಶ' ಚಿತ್ರಣ ಬೇಕಿದ್ದೋ ಬೇಡದೆಯೋ ಕುಳಿತು ಬಿಡುತ್ತದೆ. ಒಂದೋ ರೂಕ್ಷವಾದ, ಇಲ್ಲವೇ ಕುಸುರಿ ಕೆಲಸ ಮಾಡಿದ ಎರಡು ಚಿತ್ರಗಳು ನಮ್ಮೊಳಗನ್ನು ಆವರಿಸಿಕೊಳ್ಳುತ್ತವೆ. ಕುಸುರಿಗೆಲಸ ಮಾಡಲು ಬೇಕಾದ ಸಲಕರಣೆಗಳು ಬೇರೆ ಬೇರೆ ಓದಿನ, ಅನುಭವದ ಹಿನ್ನೆಲೆಯಲ್ಲಿ ರೂಪುಗೊಂಡಿರುತ್ತವೆ. ಕುವೆಂಪು ಬದುಕಿನುದ್ದಕ್ಕೂ ಧ್ಯಾನಿಸಿದ ಹಲವು ಸಂಗತಿಗಳಲ್ಲಿ ಈ ಗಂಡು – ಹೆಣ್ಣಿನ ಸಂಬಂಧಗಳ ಇಕ್ಕಟ್ಟು, ಬಿಕ್ಕಟ್ಟು ಮತ್ತು ಒಕ್ಕಟ್ಟುಗಳು ಬಹಳ ಪ್ರಧಾನವಾದುದು. ಮುಖ್ಯವಾಗಿ ಗಂಡು ಹೆಣ್ಣಿನ ಪ್ರೀತಿ, ಪ್ರೇಮದ ಸಂಬಂಧಗಳ ಹಿನ್ನೆಲೆಯಲ್ಲಿ ಇದನ್ನು ಗಮನಿಸಬಹುದು.

ಅಕ್ಕಮಹಾದೇವಿ "ಕಾಯದ ನುಂಪನೊಬ್ಬ ಬಯಸಿದರೆ ಅವನಿಗೆ ಮಾಂಸವ ಬೆಲೆ ಮಾಡಿ ಕೊಡುವೆನು" ಅನ್ನುತ್ತಾಳೆ. ಆದರೆ "ಎನ್ನ ಪ್ರಾಣದೊಡೆಯಂಗೆ ಎನ್ನ ಹೃದಯವ ಸೂರೆಗೊಡುವೆನು" ಎಂದೂ ಹೇಳುತ್ತಾಳೆ. ಪುರುಷನನ್ನು ಪುರುಷ ರತ್ನಾ ಎಂದವಳೂ ಇವಳೆ, ಸಾವ ಕೆಡುವ ಗಂಡರನ್ನೊಯ್ದು ಒಲೆಯೊಳಗಿಕ್ಕು ಎಂದವಳೂ ಇವಳೇ. ಇವೆಲ್ಲವೂ ಒಂದು ಖಚಿತದಲ್ಲೇ ರೂಪುಗೊಂಡ ಮಾತುಗಳೇ. ಆ ನಿಲುವುಗಳು ಗಂಡು

ಹೆಣ್ಣಿನ ಸಂಬಂಧವನ್ನು ತಿಳಿಯುವ ಪ್ರಕ್ರಿಯೆಯ ಬೆಳಕಿಂಡಿಗಳಂತೆ ಒದಗಿ ಬರುತ್ತವೆ. ಕುವೆಂಪು ಕಥನಗಳನ್ನು ನೋಡಲು ನೋಟವೊಂದನ್ನು ಒದಗಿಸುತ್ತವೆ. ಒಂದು ರೀತಿ ಯಲ್ಲಿ 'ಮಲೆಗಳಲ್ಲಿ ಮದುಮಗಳು' ಕುವೆಂಪು ಚಿಂತನೆಯ ಅಂತಿಮ ಥೀಸಿಸ್ ಕೂಡ ಹೌದು. ಅದುವರೆಗಿನ ಕುವೆಂಪು ಸಾಹಿತ್ಯದಲ್ಲಿ ರೂಪುಗೊಂಡ ಗಂಡು ಹೆಣ್ಣಿನ ಸಂಬಂಧದ ಸ್ವರೂಪಕ್ಕೂ, ಈ ಕಾದಂಬರಿಗೂ ಬಹಳ ದೊಡ್ಡ ಅಂತರವೊಂದಿದೆ. 'ಸ್ವರ್ಗ ದ್ವಾರದಿ ಯಕ್ಷಪ್ರಶ್ನೆ' ಕವಿತೆಯಲ್ಲಿ ಗಂಡು ಅಹಂಕಾರ ಮೀರಿ 'ಹೇಮಿಗಂಡ' ಎಂದ ಕುವೆಂಪು, ಮತ್ತೆ ಅದೇ ಸ್ವರೂಪದಲ್ಲಿ ಕಾಣಿಸುವುದು ಈ ಕಾದಂಬರಿಯಲ್ಲೇ. ಅದು ವರೆಗಿನ ಅವರ ಚಿತ್ರಣಗಳಲ್ಲೆಲ್ಲಾ ಅವಳು ಹೊಸ್ತಿಲ ಒಳಗಿನವಳೇ ಹೊರತು ಅವಳ ಸ್ವತಂತ್ರ ಅಸ್ತಿತ್ವದ ಕುರಿತು ಕುವೆಂಪು ಹೆಚ್ಚು ಚಿಂತಿಸದೇ, ಪೂರಕಸತಿಯನ್ನು ನೋಯಿಸದೇ ಪೊರೆವ ಗಂಡಿನ ಆದರ್ಶವೊಂದನ್ನು ಆರಾಧಿಸುತ್ತಾರೆ. ಆದರೆ ಈ ಕಾದಂಬರಿ- ಯಲ್ಲಿ ಅದರಾಚೆಗೂ ಅವಳತನವನ್ನು ಪುರಸ್ಕರಿಸುವ ಮಹತ್ವದ ನಡೆಯೊಂದು ಕಾಣುತ್ತದೆ. ಮೌನದ, ಪೂರಕನಡೆಯ ಸತಿಗಿಂತಲೂ, ಸ್ವಂತಿಕೆಯ ಚಹರೆಯ ಹೆಣ್ಣು ಮತ್ತು ಗಂಡುಗಳು ಪರಸ್ಪರತೆಯಲ್ಲಿ ಕಂಡುಕೊಳ್ಳುವ ಕಾಣ್ಕೆ ಹೆಚ್ಚಿನದು. ಹಾಗೆ ಕೊಡುವ, ಪಡೆವ ಸಂಬಂಧದ ಸಾರ್ಥಕತೆ, ಸಂಘರ್ಷರಹಿತವಾಗಿದ್ದಾಗಲೂ ಏಕಮುಖವಾದ, ಶೀತಲವಾದ, ಸಂಬಂಧದಲ್ಲಿ ಇಲ್ಲ ಎಂಬುದನ್ನು ಈ ಕಾದಂಬರಿ ಬಿಚ್ಚಿ ತೋರುತ್ತದೆ. ಈ ನಡೆಗಳು ಕಾದಂಬರಿಯ ಪ್ರಮುಖ ಪಾತ್ರಗಳಾದ ಚಿನ್ನಮ್ಮ, ಪೀಂಚಲು ಮತ್ತು ತಿಮ್ಮಿ ಈ ಮೂವರಲ್ಲೂ ಕಾಣಬಹುದು. ಈ ಮಾತನ್ನು ಕಾನೂರು ಹೆಗ್ಗಡತಿಯ ಹೂವಯ್ಯ-ಸೀತೆಯರಿಗೆ ಹೇಳಲಾಗದು.

ಸಂಸ್ಕೃತ ಕಾವ್ಯಮೀಮಾಂಸೆಯ 'ಅವಿಚಾರಿತ ರಮಣೀಯ' ಮತ್ತು 'ವಿಚಾರಿತ ಸುಂದರ'ವನ್ನು ಕೆ.ವಿ. ನಾರಾಯಣ ಅವರು 'ಕುವೆಂಪು ವೈಚಾರಿಕತೆ'ಯ ಕುರಿತ ಲೇಖನದಲ್ಲಿ ನೆನಪಿಸುತ್ತಾರೆ. ಅವಿಚಾರಿತ ರಮಣೀಯ ಲೋಕದೊಳಗಿಂದ ಹೊಮ್ಮಿದ ಕುವೆಂಪು, ಆ ಅವಿಚಾರಗಳನ್ನು ಎದುರುಗೊಳ್ಳುವುದು ಹೇಗೆ ಎಂಬುದನ್ನು ಗಂಭೀರವಾಗಿ ಚಿಂತಿಸುತ್ತಾ ಹೋದುದರ ಫಲವಾಗಿ 'ವಿಚಾರಿತ ಸುಂದರ' ಹೂವಯ್ಯ ಉದಿಸುತ್ತಾನೆ. ಹೆಣ್ಣು ಗಂಡಿನ ಸಾಂಗತ್ಯದ ಬಿರುಕುಗಳನ್ನೆಲ್ಲಾ ಸೀತೆ - ಹೂವಯ್ಯರು ಮನಸ್ಸು, ದೇಹಗಳನ್ನು ಬೇರೆ ಮಾಡಿ ರೂಪಿಸಿಕೊಂಡ ಆದರ್ಶೀಕೃತ ಪಾತಳಿಯಲ್ಲಿ ಸಮಾಧಿ ಮಾಡಿ ಗೆದ್ದುಕೊಳ್ಳಬಲ್ಲರು ಎಂದು ನಂಬಿದ ಕುವೆಂಪು 'ಮಲೆಗಳಲ್ಲಿ ಮದುಮಗಳು' ಬರೆವ ಹೊತ್ತಿಗೆ, ಅದನ್ನು ಪುನರ್ ಪರಿಶೀಲಿಸಲು ತೊಡಗುತ್ತಾರೆ. ಆಗ ಅವರಿಗೆ ಆ ಅವಿಚಾರಿತ ರಮಣೀಯ ಲೋಕದೊಳಗೂ ಹರಿಯುತ್ತಿರುವ ತಿಳಿಜಲದ ಧಾರೆ ಗೋಚ- ಸುತ್ತದೆ. ಅಂದರೆ, ಅದೇ ಲೋಕದೊಳಗೆ ಅದೇ ಲೋಕದ ಬಿರುಕುಗಳನ್ನೂ ಮೀರಿದ, ಆದರೆ ನಮ್ಮ ಕಣ್ಣು 'ಕಾಣದಿದ್ದ' ಸಂಗತಿಗಳು 'ಕಾಣ'

ತೊಡಗುತ್ತವೆ. ಈ ಕಾರಣಕ್ಕೇ ಇಲ್ಲಿ ಯಾವುದೂ ಮುಖ್ಯವಲ್ಲ, ಯಾವುದೂ ಅಮುಖ್ಯವಲ್ಲ, ನೀರೆಲ್ಲವೂ ತೀರ್ಥ ಎಂಬ ಹೊಳಹು 'ತಿಳಿವು' ಆಗಿ ಎದುರು ನಿಲ್ಲುತ್ತದೆ. ಇದರ ಪರಿಣಾಮವೇ 'ನಾನು ನಿನಗೆ ಏನನ್ನೋ ಹೇಳುತ್ತೇನೆ' ಎಂಬುದು ಬದಿಗೆ ಸರಿದು, 'ನಾವೆಲ್ಲರೂ ನಮಗಾಗಿ ಏನನ್ನೋ ಹೇಳಿಕೊಳ್ಳೋಣ' ಎಂಬ ನಡೆ ಶುರುವಾಗುತ್ತದೆ.

'ಮಲೆಗಳಲ್ಲಿ ಮದುಮಗಳು'ವಿನುದ್ದಕ್ಕೂ ಹೆಣ್ಣು ಗಂಡುಗಳ ನಡುವಿನ ದೈಹಿಕ ವ್ಯಾಪಾರಗಳ ವಿವರಗಳು ಯಾವ ಕೊಂಕು ಕೊಸರು ಇಲ್ಲದೆ ತೆರೆಯುತ್ತಾ ಹೋಗುತ್ತದೆ.

ಹೀಗೆ ತೆರೆಯುವುದರ ಹಿಂದೆ ಹೆಣ್ಣು-ಗಂಡು ಸಂಬಂಧಗಳನ್ನು ನಿರ್ಧರಿಸುತ್ತಿರುವ ಸಂಗತಿಗಳು ಯಾವುವು ಎಂಬುದನ್ನು ಅರಿಯುವ ಕುತೂಹಲದ ಕಣ್ಣುಗಳಿವೆ. ಅದು ಮನೋ ವ್ಯಾಪಾರವೇ? ದೇಹ ವ್ಯಾಪಾರವೇ? ಅಥವಾ ಇವೆರಡೂ ಬೇರೆ ಬೇರೆಯದೇ? ದೇಹವು ಮನಸ್ಸನ್ನು ಆವರಿಸಿಕೊಳ್ಳುವ ಪರಿಯಿಂದ ಬಿಡುಗಡೆ ಹೊಂದುವುದು ಶ್ರೇಷ್ಠ ಸಂಗತಿಯೇ? ಇದನ್ನು ಯಾರ‍್ಯಾರು ಹೇಗ್ಹೇಗೆ ಎದುರುಗೊಳ್ಳುತ್ತಾರೆ? ಈ ಚೌಕಟ್ಟು ಗಳನ್ನೆಲ್ಲಾ ಯಾರು ಯಾಕೆ ಹಾಕುತ್ತಾರೆ? ಚೌಕಟ್ಟುಗಳನ್ನು ಶಿರಸಾ ಪಾಲಿಸಕೊಂಡೇ ಜನ ಸದಾ ವ್ಯವಹರಿಸುತ್ತಾರೆಯೇ? ಎಂಬೆಲ್ಲಾ ಪ್ರಶ್ನೆಗಳು ಇಲ್ಲಿವೆ. ಆದರೆ, ಒಂದಂತೂ ನಿಜ. ಈ ಕಾದಂಬರಿಯಲ್ಲಿ ಸ್ಪಷ್ಟವಾಗುವ ಒಂದು ನಿಲುವು ಏನೆಂದರೆ ದೇಹ ಮನಸ್ಸುಗಳ ಬೆಸುಗೆಯೂ ಒಂದು ಘನತರ ಸಾಧನೆಯೇ. ಘನತರ ಸಾಧನೆಗಾಗಿ ದೈಹಿಕ ಒಡನಾಟದ ಅನುಭವಗಳನ್ನು ನಿರಾಕರಿಸಬೇಕಿಲ್ಲ ಎಂಬುದು. ಅದಕ್ಕಾಗಿ ಎಲ್ಲ ಚೌಕಟ್ಟುಗಳನ್ನು ದಾಟಿ ನೋಡುವ ಮಹತ್ತು ಇಲ್ಲಿದೆ.

ಕುವೆಂಪುಗೆ ಹೆಣ್ಣು ಗಂಡಿನ ಸಂಬಂಧ ಎಂಬುದು ಸಹಜೀವನ, ಸಹಭಾಗಿತ್ವ, ಸಮನ್ವಯ, ಸಮ್ಮಿಲನ ಮತ್ತು ಆ ಮೂಲಕ ಒಂದು ಪೂರ್ಣದೃಷ್ಟಿ. ಹೆಣ್ಣು ಗಂಡನ್ನು ಅನುಸರಿಸುವ ಸಹವರ್ತಿ ಎಂಬ ನೆಲೆಯನ್ನು ದಾಟುವ ಕುವೆಂಪು ಇದನ್ನೆಲ್ಲಾ ಕಂಡು ಕೊಳ್ಳುತ್ತಾ ಹೋಗುತ್ತಾರೆ. ಇದಕ್ಕಾಗಿ ಮಾನವರ ಮನೋನೆಲೆಯಲ್ಲಿ ಗ್ರಹಿಕೆಯ ಪಾತಳಿ ವಿಕಸಿತವಾಗುತ್ತಾ ಹೋಗಬೇಕು. ಇಲ್ಲದಿದ್ದಲ್ಲಿ ಗಂಡು ಹೆಣ್ಣಿನ ಸಂಬಂಧದಲ್ಲಿ ನಿರೀಕ್ಷಿತ ಯಶಸ್ಸು ಸಾಧ್ಯವಿಲ್ಲ ಎಂಬುದನ್ನು ಕುವೆಂಪು ತೆರೆದಿಡುತ್ತಾ ಹೋಗುತ್ತಾರೆ. ಇಡೀ ಕಾದಂಬರಿ ಹೆಣ್ಣು ಗಂಡುಗಳ ಮನೋನೆಲೆ ವಿಸ್ತರಿಸಿದಂತೆಲ್ಲಾ ಅವರ ಅನುಭವದ ಅನುಭೂತಿಯಲ್ಲಿ ವ್ಯತ್ಯಾಸವಾಗುತ್ತಾ ಹೋಗುವುದನ್ನು ಹೇಳುತ್ತದೆ. ಸಾಧಾರಣ ಮನಸ್ಥಿತಿ ಯಲ್ಲಿರುವವರಿಗೆ ಅದೊಂದು ಶುದ್ಧ ದೈಹಿಕ ವ್ಯಾಪಾರವಲ್ಲದೇ ಇನ್ನೇನು ಅಲ್ಲ. ಅನಿ ವಾರ್ಯ ನಿಸರ್ಗ ಸಹಜ ಘಟನೆಯಾಗಿ ಅದು ಸಂಭವಿಸುತ್ತದೆ. ಈ ಅಂಶವನ್ನು ಲೇಖಕರು ಇತರ ಘಟನೆಗಳೊಂದಿಗೆ ಜೊತೆಗೂಡಿಸುವ ಕ್ರಮ ಅಸದೃಶ. ಓದುಗರಿಗೆ ತಿಮ್ಮಪ್ಪ ಹೆಗ್ಗಡೆ ಇನ್ನೂ ಪೂರ್ತಿ ಪರಿಚಯವಾಗುವ ಪೂರ್ವದಲ್ಲೇ ತರುವ ಹಂದಿ

ದೊಡ್ಡಿಯ ವರ್ಣನೆಯನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು. ಅಲ್ಲೊಂದು ಪ್ರಾಯದ ಸಲಗ ಇದೆ. ಅದು ಕಂಡ ಕಂಡ ಹೆಣ್ಣು ಹಂದಿಯ ಮೇಲೆ ಎರಗುತ್ತಿರುತ್ತದೆ. ಲಂಗು ಲಗಾಮಿಲ್ಲದ ಅದರ ವರ್ತನೆಗೂ, ತಿಮ್ಮಪ್ಪ ಹೆಗ್ಗಡೆಯ ವ್ಯಕ್ತಿತ್ವಕ್ಕೂ ಬಹಳ ವ್ಯತ್ಯಾಸ ಇಲ್ಲ. ಪಶುತನ ಮನುಷ್ಯರಲ್ಲಿಲ್ಲವೆಂದಲ್ಲ ಎಂಬುದಕ್ಕೆ ಹೆಂಗೆಳೆಯರೊಂದಿಗಿನ ಅವನ ವರ್ತನೆಗಳು ನಿದರ್ಶನಗಳಾಗುತ್ತವೆ. ಇದರಲ್ಲೊಂದು ಒರಟು ಮುಗ್ಧತನವೂ ಇರುವಂತಿದೆ. ಪಾಪ! ಹಂದಿಯಂತೆ ತಿಮ್ಮಪ್ಪನ ಬದುಕು ಸಲೀಸಲ್ಲ. ಅವನ ಸಮಸ್ಯೆಯೇನೆಂದರೆ, ಹಂದಿಗಳಿಗೆ ಸಾಮಾಜಿಕತೆ ಎಂಬುದೊಂದಿಲ್ಲ. ತಿಮ್ಮಪ್ಪನಿಗೆ ಅದಿದೆ. ಹೀಗಾಗಿ ಅವನೊಂದು ಮದುವೆಯಾಗಬೇಕಿದೆ. ಆದರೆ, ಅವನನ್ನು ಮದುವೆಯಾಗುವವಳು ಸಿಗುವುದಕ್ಕೆ ತೊಡಕಿದೆ. ಹೀಗಿದ್ದೂ ಕೊನೆಯಲ್ಲಿ ಅವನನ್ನು ಮೆಚ್ಚುವ ಹಂತ ತಲುಪುವ ಲಕ್ಕಮ್ಮನನ್ನು ಗಮನಿಸಿದರೆ, ಆಕೆಯ ಬಗ್ಗೆ ಮರುಕ ಎನಿಸಿದರೂ ದೈಹಿಕ-ಹೊಟ್ಟೆ ಮತ್ತು ಕಾಮಗಳೆಂಬ ಹಸಿವುಗಳಾಚೆಗೆ ಯೋಚಿಸುವ ಹಂತವನ್ನು ಅವರು ತಲುಪಿಲ್ಲ. ಮನೋ ನೆಲೆಯ ಜಿಗಿತ ಅವರಿಗಿಲ್ಲವಾದ್ದರಿಂದ ಅವರಿಗೆ ಅದೊಂದು ಮಹತ್ ಸಮಸ್ಯೆ ಯಾಗಲಿಕ್ಕಿಲ್ಲ ಎಂಬ ಸೂಚನೆಯೂ ಅಲ್ಲಿದೆ.

ಸಿಂಬಾವಿ ಹೆಗ್ಗಡೆಯನ್ನು ಮದುವೆಯಾಗಲು ಚಿನ್ನಮ್ಮ ತಯಾರಿಲ್ಲದೇ ಇರುವುದೂ ಇದೇ ಕಾರಣಕ್ಕೆ. ಅವಳ ಮನೋನೆಲೆಯ ಸ್ತರ ಬರೀ ಜೀವನವನ್ನಲ್ಲ, ಸಹ ಜೀವನವನ್ನು ಬಯಸುತ್ತಿದೆ. ಕೊನೆಗೂ ಆತನನ್ನೇ ಮದುವೆಯಾಗಬೇಕಾದ ಪರಸ್ಥಿತಿ ಬಂದರೆ ಸಾಯುತ್ತಾಳೆಯೇ ಹೊರತು ಮದುವೆಯಾಗಲಾರಳು. ಚಿನ್ನಮ್ಮ ಸಾವಿಗೂ ತಯಾರು. ಆದರೆ ಅದೇ ಸಿಂಬಾವಿ ಹೆಗ್ಗಡೆಯನ್ನು ಮದುವೆಯಾಗಲು ತಯಾರಿರುವ ಮಂಜಮ್ಮನಿಗೆ ಅದೊಂದು ಸಮಸ್ಯೆಯಲ್ಲ. ಯಾಕೆಂದರೆ, ಅವಳಿಗೆ ಮದುವೆಯೆಂಬುದೊಂದು ಜೀವನೋಪಾಯ. ಅಲ್ಲಿ ಅವಳು ಸುಖವಾಗಿರುತ್ತಾಳಾ / ಬಿಡುತ್ತಾಳಾ ಎಂಬುದು ಬೇರೆ ವಿಚಾರ. ಆಸ್ತಿವಂತ ಸಿಕ್ಕಿದರೆ ಜೀವನ ಸುಧಾರಿಸುತ್ತದೆ ಎಂಬ ಚೌಕಟ್ಟಿಗೆ ಆಕೆ (ಹಲವರಂತೆ) ಬಂಧಿತಳು. ಅವಳಿಗೆ ಪ್ರೀತಿ ಪ್ರೇಮದ ಕಲ್ಪನೆಯೇ ಇಲ್ಲ. ಅವಳ ಮನೋನೆಲೆ ಚಿನ್ನಮ್ಮನಂತೆ ವಿಸ್ತರಿಸಿಲ್ಲ. ಸಾಂಗತ್ಯವನ್ನು ಬಯಸುವುದೇನೆಂದೇ ಅವಳಿಗೆ ತಿಳಿದಿಲ್ಲ. ಸಿಂಭಾವಿ ಹೆಗ್ಗಡೆಗೆ ಕಾಮ ಗೊತ್ತು. ಪ್ರೇಮ ಗೊತ್ತಿಲ್ಲ. ಮಂಜಮ್ಮನಿಗೆ ಆ ನಿರೀಕ್ಷೆಗಳೇನೂ ಇಲ್ಲ.

ಹಾಗೆಯೇ ಇನ್ನೊಂದು ಮನೋನೆಲೆಯಿದೆ. ಅದು ರಂಗಮ್ಮನದು. ಅವಳು ಸತಿ ಪತಿ ಸಂಬಂಧ ದೈವಿಕವಾದುದು ಎಂದು ಭಾವಿಸುತ್ತಾಳೆ. (ಅವಳು ನಮಗೆ ಪರಿಚಿತಳಾಗುವ ಮೊದಲು ದೈವಬೀರು ಶಂಕರ ಹೆಗ್ಗಡೆ ಪರಿಚಯವಾಗುವುದು ಕೂಡ ಆಕಸ್ಮಿಕ ಇರಲಿಕ್ಕಿಲ್ಲ!) ಹೀಗಾಗಿ ಅವಳಿಗದೊಂದು ಜನ್ಮ ಜನ್ಮಾಂತರ ಸಂಬಂಧವಾಗಿ ವಿಚಿತ್ರ

ಅನುಭವಗಳಾಗಿ ಅಪರೂಪದ ಸಾವು ಸಂಭವಿಸಿ, ಉಳಿದವರಿಗೆ ಅದೊಂದು ಪುಣ್ಯ ಸಂಭವವಾಗಿ ಕಾಣುತ್ತಿರುತ್ತದೆ. ರಂಗಮ್ಮನಿಗೆ ಪತಿಯಿಂದಾಚೆಗೆ ತನ್ನದೇ ಒಂದು ಅಸ್ತಿತ್ವವೇ ಇಲ್ಲ. ಅಂತಹ ಅಸ್ತಿತ್ವವೊಂದು ಇರುವುದಕ್ಕೆ ಸಾಧ್ಯವೇ ಇಲ್ಲ ಎಂದು ನಂಬಿಸಿದ್ದನ್ನು ಪೂರ್ಣವಾಗಿ ನಂಬಿದವಳು ಆಕೆ. ಈ ಸಂಬಂಧ ದೇವರು-ಭಕ್ತೆಯ ರೀತಿಯದು. ಇಲ್ಲಿ ಗಂಡು ಹೆಣ್ಣಿನ ಸಂಬಂಧದಲ್ಲಿರಬಹುದಾದ ಪ್ರೇಮಭಾವಕ್ಕಿಂತ ವಿನೀತಭಾವ ಮೇಲುಗೈ ಸಾಧಿಸುತ್ತದೆ.

ಇದೆಲ್ಲಾ ಯಾಕೆ ಹೀಗಾಗುತ್ತದೆ? ಇದೆಲ್ಲದರಾಚೆಗೆ ಕುವೆಂಪು ಮಂಡಿಸುತ್ತಿರುವುದೇನು? ಕುವೆಂಪುಗೆ ಹೆಣ್ಣು ಗಂಡು ಸಂಬಂಧ ಎಂಬುದು ಮನೋದೈಹಿಕ ಸಮ್ಮಿಲನದ ಅನುಭೂತಿ. ಅದೊಂದು ಆಗುವಿಕೆಯೇ ಹೊರತು ಕೇವಲ ಇರುವಿಕೆಯಲ್ಲ. ಈ ಕಾರಣದಿಂದಲೇ ಇದನ್ನು ತಮಗೆ ತಿಳಿಯದೇ ಸಾಧಿಸಿದ ಐತ-ಪೀಂಚಲು ಮುಕುಂದಯ್ಯನ ಕಣ್ಣಿಗೆ ಶಿವ-ಶಿವಾಣಿಯರಾಗಿ ಕಾಣುತ್ತಾರೆ. ಹಮ್ಮಿಳಿದು, ಪರಸ್ಪರತೆಯಲ್ಲಿ ಬೆಸೆದುಕೊಂಡಿರುವ ಇವರ ಇರುವಿಕೆಯಲ್ಲೂ ಒಂದು ಮಹತ್ ಇದೆ. ಆದ್ದರಿಂದ ಅದು ಆಗುವಿಕೆಯಾಗಿ ಪರಿವರ್ತನೆಯಾಗುತ್ತದೆ. ಇದಕ್ಕೆ ಯಾವ ಚೌಕಟ್ಟುಗಳೂ ಇಲ್ಲ. ಇದನ್ನು ಕುವೆಂಪು ದಾಟಿಸುವ ಪರಿ ಅಸದೃಶವಾದುದು. ತನ್ನ ಜೀವದ ಒಂದು ಭಾಗವೇ ಆದ ಐತನನ್ನು ಪೀಂಚಲು ಎಂದೂ ವಂಚಿಸುವುದಿಲ್ಲ. ಒಂದು ವೇಳೆ ಅವಳನ್ನು ಮುಕುಂದಯ್ಯ ಬಯಸಿ, ಅದನ್ನು ಒಪ್ಪಿಕೊಂಡರೂ ಎಂಬ ಅಪರೂಪದ ಚಿತ್ರಣವೊಂದನ್ನು ಕುವೆಂಪು ನೀಡುತ್ತಾರೆ. ಈ ಸಂದರ್ಭವನ್ನು ಓದುಗರಿಗೆ ಮನಗಾಣಿಸುವುದು ಖಂಡಿತಾ ಅಷ್ಟು ಸುಲಭವಲ್ಲ. ಐತನೆಡೆಗೆ ಅಷ್ಟು ನಂಬಿಕೆ ಇರುವ ಅವಳಿಗೆ, ಮುಕುಂದಯ್ಯನೆಡೆಗೂ ಸೆಳೆತ ಹೇಗಿದ್ದೀತು ಎಂಬ ಪ್ರಶ್ನೆ ಸಹಜ. ಆದರೆ ಅವಳಿಗೆ ತನ್ನ ಮತ್ತು ಐತನ ಸಂಬಂಧ ದೇಹ ಮತ್ತು ದೇಹದಾಚೆಯ ಬಂಧ ಎಂಬ ಖಾತ್ರಿ ಇದೆ. ಹಾಗಾಗಿ ಅವಳು ಅದನ್ನು ಬೆರೆಸುವುದಿಲ್ಲ. ಅಂದರೆ, ಇದೊಂದು ದೇಹ ವ್ಯಾಪಾರ ಮೀರಿದ ಸಂಗತಿ ಎಂಬಂತೆ.

ಅತ್ಯಂತ ಸಾಮಾನ್ಯಳಾಗಿ ಬದುಕುವ, ಪ್ರಕೃತಿಯ ಒಂದಂಗವೋ ಎಂಬಂತೆ ಇರುವ ತಿಮ್ಮಿಗೂ ಕೂಡ ಸೂರ್ಯೋದಯದ ದೃಶ್ಯದ ಸೌಂದರ್ಯಾನುಭವವಾಗಬಲ್ಲುದು ಎಂದು ಚಿತ್ರಿಸುವ ಕುವೆಂಪು, ಗುತ್ತಿ ತಿಮ್ಮಿಯರಲ್ಲೂ ಅವರ ವ್ಯಕ್ತಿತ್ವದ ಸಾಮಾನ್ಯತೆಯಾಚೆಗಿನ ಸಂಗತಿಯನ್ನು ಗುರುತಿಸುತ್ತಾರೆ. ಇದು ಗುತ್ತಿ ತಿಮ್ಮಿಯರ ಸಂಬಂಧವನ್ನು ಬೆಸೆಯುತ್ತದೆ. ವಿವಾಹಪೂರ್ವದ ಕಾಡಿನ ಏಕಾಂತದಲ್ಲಿ ಐತನೊಂದಿಗಿದ್ದಾಗ ಅವಳು ಪೂರ್ವ ಸ್ಮರಣೆಯೊಂದಕ್ಕೆ ಹೋಗುತ್ತಾಳೆ. ಈ ಹಿಂದೆ ಬಚ್ಚ ತನಗೆ ಮಾಡಿದ್ದನ್ನೇ ಈಗ ಇವನೂ ಮಾಡಿಯಾನು ಎಂದು ನಿರೀಕ್ಷಿಸುವ ತಿಮ್ಮಿ ಬಚ್ಚನನ್ನು ಮದುವೆಯಾಗಲೊಲ್ಲದವಳು! ಬಚ್ಚನ ಬಗೆಗೆ ಅವಳಿಗೆ ಒಲವು ಇಲ್ಲದೇ ಇರುವುದಕ್ಕೆ ಆ ಘಟನೆಗಳು ಕಾರಣವಲ್ಲ.

ಬದಲಿಗೆ ಅವಳಿಗೆ ಗುತ್ತಿಯ ವ್ಯಕ್ತಿತ್ವದೆಡೆಗೊಂದು ಸೆಳೆತವಿದೆ. ಗುತ್ತಿಯೂ ಅಷ್ಟೆ. ತಿಮ್ಮಿಗಾಗಿ ಎಲ್ಲ ಅಪಾಯಗಳನ್ನು ಎದುರು ಹಾಕಿಕೊಳ್ಳಲು ತಯಾರಿರುವವನು. ಅಪಾಯವೊಂದಕ್ಕೆ ಸಿಲುಕಿದವನೂ ಹೌದು. ತಿಮ್ಮಿಗಾಗಿ ಜಪಿಸುತ್ತಾ, ಜೈಲುವಾಸದಿಂದ ತಪ್ಪಿಸಿಕೊಂಡು ಅವಳೊಂದಿಗೆ ಸಂಸಾರ ಹೂಡುವುದು ಹೇಗೆ ಎಂದು ಕನಸುತ್ತಿರುತ್ತಾನೆ. ಸ್ವಲ್ಪ ಹೆಚ್ಚು ಕಡಿಮೆ ಆದರೂ ಜೈಲುಪಾಲಾಗುವ ವಿಷಮಸ್ಥಿತಿಯಲ್ಲಿ ಅವನಿದ್ದಾನೆ. ಹೀಗಿದ್ದೂ, ತಲೆ ಮರೆಸಿ ಅವಿತುಕೊಂಡಿದ್ದ ಗುಡಿಸಲಿನ ಏಕಾಂತದಲ್ಲಿ ಕೇಳಿಸುವ ಹೆಜ್ಜೆ ಸಪ್ಪಳ ಪುಟ್ಟಿಯದಿರಬಹುದು ಎಂದು ಊಹಿಸುತ್ತಾ ಹಳೆಯ ನೆನಪಿಗೆ ಸಂದು ಅವಳನ್ನು ಬಯಸು ತ್ತಾನೆ! ಈ ವಿವರಣೆಗಳೆಲ್ಲವೂ ಅತ್ಯಂತ ಸಹಜವೆಂಬಂತೆ ಬರುತ್ತವೆ. (ಇಲ್ಲಿ ಸರಿ ತಪ್ಪುಗಳ ವಿವೇಚನೆಗೆ ಕುವೆಂಪು ಹೋಗುವುದಿಲ್ಲ) ಗುತ್ತಿತಿಮ್ಮಿಯರಿಬ್ಬರೂ, ಒಬ್ಬರಿಂದ ಇನ್ನೊಬ್ಬರು ಪಡೆಯುವ ದೈಹಿಕ ಸಾಂಗತ್ಯಗಳಾಚೆಯ ಸಹಜೀವನವೊಂದನ್ನು ದಂಪತಿಗಳಾಗಿ ಪಡೆಯ ಬೇಕೆಂಬ ಉತ್ಕಟೇಚ್ಛೆಯಿಂದ ಬಂಧಿತರು ಎಂಬುದನ್ನು ರುದ್ರ ಭೀಕರ ಸನ್ನಿವೇಶ ದಲ್ಲೂ ತಿಮ್ಮಿ ಒಂಟಿಯಾಗಿ ಮನೆಬಿಟ್ಟು ಬರುವ ಸಂದರ್ಭದ ತೀವ್ರತೆಯಲ್ಲಿ ಕಾಣಬಹು ದಾಗಿದೆ. ಮುಕುಂದಯ್ಯ ಚಿನ್ನಮ್ಮರೂ ಕೂಡ ಚೌಕಟ್ಟುಗಳನ್ನು ಮೀರಿ ವರ್ತಿಸುವ, ಎದುರಿಸುವ ಸಾಹಸಕ್ಕೆಳೆಸುವಲ್ಲಿಯೂ ಇದನ್ನು ಗಮನಿಸಬಹುದಾಗಿದೆ. ಯಾಕೆಂದರೆ ಒಂದು ವೇಳೆ ಇಂತಹ ಸಾಂಗತ್ಯದ ಹಂಬಲ ಇಲ್ಲದೇ ಹೋಗಿದ್ದರೆ, ಗಂಡು ಹೆಣ್ಣುಗಳು ಜೊತೆಯಾಗುವುದಲ್ಲ, ಜೊತೆ ಮಾಡುವುದು ಎಂಬ ಸಾಂಪ್ರದಾಯಿಕ ಪ್ರಬಲ ಕೋಟೆ ಯನ್ನು ದಾಟುವ ಸಾಹಸವನ್ನು ಅವರಾರೂ ಮಾಡುತ್ತಿರಲಿಲ್ಲ. ಸಾಂಗತ್ಯದ ಹಂಬಲವೂ ಕೂಡ ವಿಸ್ತರಿತ ಮನೋನೆಲೆಯ ಹಂತವೇ ಅಗಿದೆ. ಹಾಗಿದ್ದೂ ಇವೆಲ್ಲವನ್ನು ಸಾಧಿಸಲು ವಿಶೇಷವಾದ ಜ್ಞಾನ ಬೇಕಿಲ್ಲ. ತಮ್ಮ ಸಹಜೀವಿಗಳೊಂದಿಗೆ ಮಾನವೀಯ ತುಡಿತ ಇದ್ದರೆ ಸಾಕು, ಸುಖ ಅರಸುವುದಕ್ಕಿಂತ, ಅನುಭವಿಸುವ ಅರಳಿದ ಮನಸ್ಸು ಸಾಕು ಎಂಬ ಸೂಚನೆಯನ್ನು ಕುವೆಂಪು ನೀಡಿದಂತೆ ಭಾಸವಾಗುತ್ತದೆ. ಯಾಕೆಂದರೆ, ಇವರಾರೂ ಬಾಹ್ಯಜ್ಞಾನದಿಂದ ವಿಶೇಷವಾಗಿ ಪ್ರಭಾವಿತರಲ್ಲ. ಆದರೆ ಇಲ್ಲೊಂದು 'ಆಗುವಿಕೆ' ಸಂಭವಿಸಿದೆ. ಇದನ್ನು ಸ್ಪಷ್ಟ ಪಡಿಸಿಕೊಳ್ಳಬೇಕೆಂದರೆ, ಈ ಕಾದಂಬರಿಯಲ್ಲಿ ಹೆಣ್ಣುಗಂಡಿನ ಸಂಬಂಧವು ಕೇವಲ ಇರುವಿಕೆಯಷ್ಟೇ ಆದಾಗ ಏನಾಗುತ್ತದೆ ಎಂಬುದನ್ನು ಗಮನಿಸ ಬೇಕು. ಕೆಲವರಿಗೆ ಅದು ಬದುಕಿಗೆ ಒಂದು ಸಾಧನವಾಗಿರುತ್ತದೆ. ಅಂತಕ್ಕ, ನಾಗತ್ತೆ, ಕಾವೇರಿ ಮೊದಲಾದವರಲ್ಲಿ ಇದನ್ನು ಕಾಣಬಹುದು. ಜೀವನೋಪಾಯಕ್ಕಾಗಿ ಒಬ್ಬರನ್ನು ಒಬ್ಬರು ಬಲೆಗೆ ಹಾಕಿಕೊಳ್ಳುವ, ಭಾವಕ್ಕಿಂತ ಭೋಗದ ದಾರಿಯಾಗುವ-ಅದಕ್ಕಾಗಿ ಮರ್ಯಾದೆಯ ಯಾವ ಮೆಟ್ಟಲಿನ ಅಂತ್ಯಕ್ಕೂ ಇಳಿಯುವ ವಸ್ತುಸ್ಥಿತಿ ಅಲ್ಲಿರುತ್ತದೆ. ಇವರೆಲ್ಲರೂ ನಂಬಿಕೆ ದ್ರೋಹದ ಮಹಾಪರ್ವವೊಂದನ್ನು ಸೂಚಿಸುತ್ತಾರೆ.

ಹಾಗೆಯೇ ಕೇವಲ ಇರುವಿಕೆಯಾದಾಗ ಅದೊಂದು ವ್ಯಸನವೂ ಆಗಿರುತ್ತದೆ. ಚೀಂಕ್ರ,

ತಿಮ್ಮಪ್ಪ, ಭರಮೈ ಹೆಗ್ಗಡೆ ಮೊದಲಾದವರಲ್ಲಿ ಇದನ್ನು ಕಾಣಬಹುದು. ಇವರಿಗೆ ಇದು ಜೀವನೋಪಾಯವೂ ಅಲ್ಲ. ಆದರೆ ಕೊನೆಯಿಲ್ಲದ ಅತೃಪ್ತಿ. ಬದುಕು ಹಂಚಿಕೊಂಡವಳು ಒಬ್ಬ ಜೀವಿಯಾಗಿಯೂ ಅವರಿಗೆ ಕಾಣುವುದಿಲ್ಲ. ಕ್ರೌರ್ಯದ ಯಾವ ಮೆಟ್ಟಿಲನ್ನೂ ಇವರು ಹತ್ತ ಬಲ್ಲರು. ಮಧುರ ಭಾವವನ್ನು ಹೊಸಕಿ ಹಾಕುವುದೇ ಹೆಣ್ಣಿನೊಂದಿಗಿನ ಸಂಬಂಧ ವಾಗಿ ಕಾಣುವ ದುರಂತ ಇಲ್ಲಿದೆ. ಇನ್ನು ಕೆಲವರಿಗೆ ಅದೊಂದು ಜೀವನ ಅಷ್ಟೇ. ಶಂಕರ ಹೆಗ್ಗಡೆಯನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಇಲ್ಲಿ ಕ್ರೌರ್ಯ ಇಲ್ಲ, ಹಂಚಿಕೊಳ್ಳುವಿಕೆ ಇಲ್ಲ, ಭಾವಗಳಿಲ್ಲ, ಬದುಕಿನಲ್ಲಿ ಯಾವುದೇ ಏರು ಪೇರೂ ಇಲ್ಲ, ಸ್ವಾದವೂ ಇಲ್ಲ.

ಗಂಡು ಹೆಣ್ಣಿನ ಸಂಬಂಧ 'ಆಗುವಿಕೆ' ಆದಾಗ ಅದೊಂದು ಕೊನೆಯಿಲ್ಲದ ರೋಮಾಂಚನವೆನಿಸಿಕೊಳ್ಳುತ್ತದೆ. ಪೀಂಚಲು ಮತ್ತು ಐತರಲ್ಲಿ ಇದನ್ನು ಕಾಣಬಹುದು. "ಅವರ ಸಂಬಂಧ ಇನ್ನೂ ಬಹುವಚನಕ್ಕೇರುವಷ್ಟು ಕೃತಕವೂ ದೂರವೂ ಆಗಿರಲಿಲ್ಲ." ಎನ್ನುತ್ತಾರೆ ಕುವೆಂಪು. ಗುತ್ತಿ ತಿಮ್ಮಿಯರದ್ದೂ ಇಂತದೇ ಆಗುವಿಕೆ. ಅದು ನಿಷ್ಕಳಂಕ ವಾಗಿರುವುದು. ಹುಲಿಕಲ್ಲು ನೆತ್ತಿಯಲ್ಲಿ ಕುರ್ಕನೊಂದಿಗೆ ಕಾದಾಡಿ ಹುಲಿಯ ಗಾಯ ಗೊಂಡಾಗ ಕನಲಿದ ಗುತ್ತಿ, 'ಎಲ್ಲಾ ನಿನ್ನಿಂದಲೇ ಆಗಿದ್ದು, ಸನಿಮುಂಡೆ' ಎಂದು ಅಕಾರಣ ವಾಗಿ ತಿಮ್ಮಿಯನ್ನು ಬೈಯುತ್ತಾನೆ. ಮೊದಲಿಗೆ ಆಘಾತಗೊಂಡರೂ ಚೇತರಿಸಿಕೊಂಡ ತಿಮ್ಮಿ ಥಟ್ಟನೆ, 'ನಾನಲ್ಲ ಸನಿಮುಂಡೆ, ನೀನೇ ಸನಿಮುಂಡೆಗಂಡ' ಎಂದು ತಿರುಗೇಟು ಕೊಡುತ್ತಾಳೆ. ಅವಾಕ್ಕಾದ ಗುತ್ತಿ, "ನಾನು ಇವಳಿಗೆ ಅಧೀನವಾಗದಿದ್ದರೆ ಇವಳು ನನಗೆ ಅಧೀನವಾಗುವ ಚೇತನವಲ್ಲ." ಎಂಬುದನ್ನು ಕಂಡುಕೊಳ್ಳುತ್ತಾನೆ. ಇಲ್ಲಿ ಬಳಸಿರುವ ಚೇತನ ಎಂಬ ಪದವೇ ಅದರ ಘನತೆಯನ್ನು ಹೇಳುತ್ತದೆ. ಇಷ್ಟಾಗಿಯೂ ಇದು ಚೌಕಟ್ಟುಗಳೊಳಗಿನ ಲೋಕಕ್ಕೆ ಪುರಸ್ಕೃತ ಎಂದು ಹೇಳುವಂತಿಲ್ಲ. ಕಂಡುಕೊಳ್ಳುವಿಕೆ ಎಲ್ಲರಿಗೂ ಸಾಧ್ಯವಿಲ್ಲ ಅನ್ನುವುದು ಇಲ್ಲಿ ತಿಳಿಯುತ್ತದೆ. ಐತ, ಪೀಂಚಲುವಿನ ಜೊತೆ ಸದಾ ಇರುವುದು ದೊಡ್ಡವರಿಗೆ ಮಾತ್ರವಲ್ಲ, ಕಾಡು, ತಿಮ್ಮುವಿನಂತ ಚಿಕ್ಕ ಹುಡುಗರಿಗೂ ತಮಾಷೆಯ ಸಂಗತಿಯಾಗುವುದನ್ನು ನೆನಪಿಸಿಕೊಳ್ಳ ಬಹುದು. ಮತ್ತು ದೊಡ್ಡವರಿಂದ ಈ ಚಿಕ್ಕವರು ಗಂಡು ಹೆಣ್ಣಿನ ಸಂಬಂಧದ ಕುರಿತು ಪಡೆಯುವ ತರಬೇತಿಯಾದರೂ ಎಂತದು ಎಂಬುದೂ ಇಲ್ಲಿ ತಿಳಿಯುತ್ತದೆ. ಹೌದು, ಯಾಕೆಂದರೆ ಆಗುವಿಕೆ ಸಂಭವಿ ಸುವುದು ಸುಲಭವಲ್ಲ. ಸಮಾನ ಪಾತಳಿಯ ಮನೋನೆಲೆಗಳು ಜೊತೆಗೆ ಸೇರಬೇಕಾಗು ತ್ತದೆ. ಆಗ ಮಾತ್ರ ಅದು ಒಕ್ಕಟ್ಟು. ಇಲ್ಲವೆಂದರೆ ಬಿಕ್ಕಟ್ಟು ಎಂಬ ವಾಸ್ತವವನ್ನು ಈ

೬. 'ಮಲೆಗಳಲ್ಲಿ ಮದುಮಗಳು'ವಿನ ಕೆಲ ಅಪೂರ್ವ ಗುಣಗಳು

– ರಾಜೇಂದ್ರ ಚೆನ್ನಿ

ಈ ಕಾದಂಬರಿಯನ್ನು ನಾನು ಪ್ರತಿಸಾರಿ ಓದಿದಾಗಲೂ ನನ್ನ ಗ್ರಹಿಕೆ ಭಿನ್ನವೇ ಆಗಿರುತ್ತದೆ. ನಾವು ಚಿಕ್ಕಂದಿನಲ್ಲಿ ನೋಡುತ್ತಿದ್ದ Kaliedo Scope ನ ಹಾಗೆ, ಒಂದು ಸಣ್ಣ ಕೋನದಷ್ಟು ಬದಲಾವಣೆಯಾದರೂ ಇಡೀ ಆಕೃತಿಯೇ ಹೊಸದಾಗಿ, ಭಿನ್ನವಾಗಿ ಕಾಣುತ್ತದೆ. ಕುವೆಂಪು ಅವರ ಈ ಕಾದಂಬರಿ ಜಗತ್ತಿನ ಶ್ರೇಷ್ಠ ಕಾದಂಬರಿಯೆಂದೇ ನನಗೆ ಅನ್ನಿಸಿದೆ. ನನ್ನ ಗುರುಗಳಾಗಿದ್ದ ಶಂಕರ ಮೊಕಾಶಿ ಪುಣೇಕರ್ ಅವರು ಶ್ರೇಷ್ಠತೆಯ ಮಾನದಂಡದ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. "ಒಂದು ಕೃತಿ ಜಗತ್ತಿನ ಶ್ರೇಷ್ಠ ಕೃತಿಯಲ್ಲಿ ಒಂದು ಎಂದು ಹೇಳಿದರೆ ನಾವು ಜಗತ್ತಿನ ಎಲ್ಲಾ ಕೃತಿಗಳನ್ನು ಓದಿದ್ದೇವೆ ಎಂದಲ್ಲ. ಏಕೆಂದರೆ ಶ್ರೇಷ್ಠತೆಯ ಪ್ರಶ್ನೆಯು Comparative Question ಅಲ್ಲ; ಅದು Cognitive ಪ್ರಶ್ನೆ. ಅಂದರೆ ಒಂದು ಕೃತಿಯ ಶ್ರೇಷ್ಠತೆಯು ಅಂತಿಮವಾಗಿ ನಮ್ಮ ಗ್ರಹಿಕೆಯಿಂದ ಸಾಬೀತಾಗಬೇಕೆ ಹೊರತು ಕೇವಲ ತುಲನೆಯಿಂದಲ್ಲ." ಇದು ಸರಿ ಯಾದದ್ದು, ಅಷ್ಟಕ್ಕೂ ಈ ಶ್ರೇಷ್ಠತೆಯ ಬಗೆಗಿನ ಹೇಳಿಕೆ ಜಗತ್ತಿನ ಕೃತಿಗಳ ಮಧ್ಯದ ಪಂದ್ಯಾಟದ ವರದಿಯಲ್ಲವಲ್ಲ? 'ಮಲೆಗಳಲ್ಲಿ ಮದುಮಗಳು' ತನ್ನ ಸಂದರ್ಭದ ಕನ್ನಡ ಕಾದಂಬರಿಯ ಸಾಧ್ಯತೆಗಳನ್ನು ಸಮಗ್ರವಾಗಿ ಬಳಸಿಕೊಂಡಿದೆ ಮಾತ್ರವಲ್ಲ, ಆ ಸಾಧ್ಯ ತೆಗಳ ಅಂಚುಗಳನ್ನು ಹಿಗ್ಗಲಿಸಿ, ಅವುಗಳನ್ನು ದಾಟಿಹೋಗಿದೆ. ಹೀಗೆ ಮಾಡುವಾಗ ಅದು ಭಾರತೀಯ ಕಾದಂಬರಿಯ ಸಾಧ್ಯತೆಗಳನ್ನು ಕೂಡ ವಿಸ್ತರಿಸಿದೆ. ಕಾದಂಬರಿ ಪ್ರಕಾರವು ನನ್ನನ್ನು ಆವರಿಸಿಕೊಂಡಂತೆ ಇನ್ನಾವ ಪ್ರಕಾರವೂ ಆವರಿಸಿಲ್ಲ. ಹೀಗಾಗಿ ಅರ್ಧಶತ ಮಾನದ ಕಾಲ ಓದುತ್ತ ಬಂದಿರುವ ಕಾದಂಬರಿಗಳಲ್ಲಿ 'ಮಲೆಗಳಲ್ಲಿ ಮದು ಮಗಳು' ನನಗೆ ಕಾದಂಬರಿ ಪ್ರಕಾರದ ವೈವಿಧ್ಯಮಯ ಸಾಧ್ಯತೆಗಳನ್ನು ಬಳಸಿಕೊಂಡ ಅತ್ಯಂತ ಸಮಗ್ರ ಕೃತಿಯಾಗಿ ಕಂಡಿದೆ.

ಭಾರತೀಯ ಭಾಷೆಗಳಲ್ಲಿ ಕಾದಂಬರಿ ಪ್ರಕಾರದ ಪ್ರವೇಶದ ಬಗ್ಗೆ ಅನೇಕ ಚರ್ಚೆಗಳು ನಡೆದಿವೆ. ಅವುಗಳ ಪ್ರಕಾರ ಕಾದಂಬರಿ ಪ್ರಕಾರವು ವಸಾಹತುಶಾಹಿ ಆಧುನಿಕತೆ, ಶಿಕ್ಷಿತ ಮಧ್ಯಮವರ್ಗದವರು ಸದಸ್ಯರಾಗಿದ್ದ ಓದುವ ವರ್ಗವು ಅಸ್ತಿತ್ವಕ್ಕೆ ಬಂದಿದ್ದು ಹಾಗೂ ಮುದ್ರಣ ಸಂಸ್ಕೃತಿಯು ನೆಲೆಗೊಂಡಿದ್ದು ಇವೆಲ್ಲವುಗಳ ಫಲವೆಂದು ವಿವರಿಸಲಾಗಿದೆ.

ಇವುಗಳಲ್ಲಿ ಅನೇಕ ಸಂಗತಿಗಳನ್ನು ಇಂಗ್ಲಿಷ್‌ನಲ್ಲಿ ೧೮ನೇ ಶತಮಾನದಲ್ಲಿ ನಡೆದ ಕಾದಂಬರಿಯ ಹುಟ್ಟು ಹಾಗೂ ಬೆಳವಣಿಗೆಗಳನ್ನು ವಿವರಿಸುವಾಗಲೂ ಬಳಸಲಾಗಿದೆ. ಇಂಗ್ಲೀಷ್ ಹಾಗೂ ಕನ್ನಡದ ಸಾಮಾಜಿಕ-ಸಾಂಸ್ಕೃತಿಕ ಸಂದರ್ಭಗಳು ವಿಶಿಷ್ಟವೂ, ವಿಭಿನ್ನವೂ ಆಗಿದ್ದರಿಂದ ಈ ಸಂಪ್ರದಾಯಗಳಲ್ಲಿ ಕಾದಂಬರಿ ಪ್ರಕಾರದ ಹುಟ್ಟು ಹಾಗೂ ಬೆಳವಣಿಗೆಗಳು, ವಿಶಿಷ್ಟ ಸ್ವರೂಪದ್ದೇ ಆಗಿದ್ದವು. ಬಂಗಾಳಿ ಭಾಷೆಯಲ್ಲಿ ಕಾದಂಬರಿಯ ಉಗಮದ ಬಗ್ಗೆ ಪ್ರಸಿದ್ಧ ಕಾದಂಬರಿಕಾರರಾದ ಅಮಿತಾವ್ ಘೋಷ್ ಕೊಡುವ ವಿವರಣೆಯು ಕುತೂಹಲಕಾರಿಯಾಗಿದೆ. ಬಂಕಿಮಚಂದ್ರ ಚಟರ್ಜಿಯವರು ಆಧುನಿಕ ಬಂಗಾಳಿ ಗದ್ಯದ ಸೃಷ್ಟಿಕರ್ತರೆಂದೂ, ಆಧುನಿಕತೆಯ ವಕ್ತಾರರೆಂದು ಪ್ರಸಿದ್ಧರಾಗಿದ್ದಾರೆ. ತಮ್ಮ ಮೊದಲ ಕಾದಂಬರಿಯಾದ Raj Mohan's Wife ಕಾದಂಬರಿಯನ್ನು ಇಂಗ್ಲಿಷ್ ನಲ್ಲಿ ಬರೆದ ಬಂಕಿಮಚಂದ್ರರು ಆನಂತರ ಬಂಗಾಳಿ ಭಾಷೆಯಲ್ಲಿ ಕಾದಂಬರಿಗಳನ್ನು ರಚಿಸತೊಡಗಿದರು. ಅಲ್ಲದೆ ತಮ್ಮ ವಿಮರ್ಶಾತ್ಮಕ ಪ್ರಬಂಧಗಳಲ್ಲಿ ಕಾದಂಬರಿ ಪ್ರಕಾರವನ್ನು ಚರ್ಚಿಸಿದರು. ಅವರ ಪ್ರಕಾರ ಸಾಂಪ್ರದಾಯಿಕ ಸಂಸ್ಕೃತ ಕಥನಶೈಲಿಯ ದೌರ್ಬ ಲ್ಯವೆಂದರೆ ಅದರ ಕೃತ್ರಿಮತೆ ಮತ್ತು ವಾಸ್ತವವಾದದ ಕೊರತೆ. ದಿನನಿತ್ಯದ ಜೀವನದ ವಾಸ್ತವ ವಿವರಗಳ ಬದಲು ಕಲ್ಪನೆಗೆ (Fantasy) ಒಗ್ಗುವ ಪಾತ್ರಗಳನ್ನು ಹಾಗೂ ಸನ್ನಿವೇಶಗಳನ್ನು ಅದು ಬಳಸಿಕೊಳ್ಳುತ್ತದೆ. ಹೀಗಾಗಿ ಇಂಗ್ಲಿಷ್ ಕಾದಂಬರಿಯ ವಾಸ್ತವ- ವಾದಿ ಕ್ರಮ ಅಥವಾ ಮಾದರಿಯೇ ನಮ್ಮದಾಗಿರಬೇಕು. ಘೋಷ್ ಅವರ ಪ್ರಕಾರ ಮಧ್ಯಮವರ್ಗದ ಓದುವ ವರ್ಗಕ್ಕೆ ಒಪ್ಪಿಗೆಯಾಗುವ ವಾಸ್ತವವಾದಿ ಕಥನವಾಗಿ ಕಾದಂ- ಬರಿಯು ಅಸ್ತಿತ್ವಕ್ಕೆ ಬಂದಿತು.

ಇಂಥ ಮೀಮಾಂಸೆಯ ಹಿಂದೆ ಕಾದಂಬರಿಯೆಂದರೆ ದಿನನಿತ್ಯದ ವಸ್ತುಸಂಗತಿಗಳ, ವಾಸ್ತವಗಳ ಪ್ರತಿಕೃತಿಯೆನ್ನುವ ನಂಬಿಕೆ ಇದೆ. ಸ್ವತಃ ಬಂಕಿಮಚಂದ್ರರ 'ಆನಂದಮಠ' ಕಾದಂಬರಿಯು ವಾಸ್ತವವಾದಿ ಅಲ್ಲದೆ ತಂತ್ರಗಳನ್ನು ಬಳಸಿಕೊಳ್ಳುತ್ತದೆ. ಅಲ್ಲದೇ ಅನೇಕ ಭಾರತೀಯ ಭಾಷೆಗಳಲ್ಲಿ ವಾಸ್ತವತಾವಾದಿ ಕಾದಂಬರಿ ಪ್ರಕಾರದ ಜೊತೆಗೆ ಚಾರಿತ್ರಿಕ romance, ಸಾಹಸಕತೆ, ಫ್ಯಾಂಟಸಿ ಮುಂತಾದ ಪ್ರಕಾರಗಳು ಜನಪ್ರಿಯವಾಗಿದ್ದವು. ಮೂಲತಃ ಯುರೋಪಿಯನ್ ಮತ್ತು ಇಂಗ್ಲಿಷ್ ಕೇಂದ್ರಿತ ಕಾದಂಬರಿ ಪ್ರಕಾರವು ನಮ್ಮ ಕಾದಂಬರಿಕಾರರ ಕೈಯಲ್ಲಿ ಪುನರ್ ರಚಿತವಾಯಿತು. ಅವರು ಈ ಸಾಹಿತ್ಯಪ್ರಕಾರವನ್ನು ಚರಿತ್ರೆ, ಪುರಾಣ, ಕಾವ್ಯ ಇವೆಲ್ಲವುಗಳನ್ನು ಬೆರೆಸಿ, ವಿಶಿಷ್ಟವಾದ ಒಂದು ಸಂಕರ ಪ್ರಕಾರವನ್ನಾಗಿ ಪರಿವರ್ತಿಸಿದರು. ಹೀಗಾಗಲು ಇನ್ನೊಂದು ಪ್ರಧಾನ ಕಾರಣವೆಂದರೆ ಮುದ್ರಣ ಸಂಸ್ಕೃತಿಯು ಸ್ಥಿರಗೊಂಡಿದ್ದರೂ ಮೌಖಿಕ ಕಥನ ಪರಂಪರೆಗಳು ಪ್ರಬಲ ವಾಗಿಯೇ ಇದ್ದವು. ಇವು ಭಾರತೀಯ ಕಾದಂಬರಿಯನ್ನು ಪ್ರವೇಶ ಮಾಡುತ್ತಲೇ ಇದ್ದವು. ಹೀಗಾಗಿ ಭಾರತೀಯ ಕಾದಂಬರಿಯು ಪಶ್ಚಿಮದ ಕಾದಂಬರಿಯ ಅದರಲ್ಲೂ ವಾಸ್ತವವಾದಿ ಕಾದಂಬರಿಯ ಸ್ವರೂಪವನ್ನು ಅನೂಚಾನವಾಗಿ ಪಾಲಿಸಲಿಲ್ಲ.

ಈ ಹಿನ್ನಲೆಯಲ್ಲಿ ಕುವೆಂಪು ಅವರು ಬರೆದ ಎರಡು ಕಾದಂಬರಿಗಳು ಮುಖ್ಯವಾಗಿವೆ. 'ಕಾನೂರು ಹೆಗ್ಗಡತಿ' ಆ ಕಾಲದಲ್ಲಿ ಜನಪ್ರಿಯವಾಗಿದ್ದ ಪ್ರಾದೇಶಿಕ, ವಾಸ್ತವವಾದಿ ಕಾದಂಬರಿಯ ಮಾದರಿಯನ್ನು ಬಳಸಿಕೊಳ್ಳುತ್ತದೆ. ಆದರೆ ಈ ಮಾದರಿಯನ್ನು ಅಲ್ಲಲ್ಲಿ ಒಡೆಯುತ್ತಲೇ ಮುನ್ನಡೆಯುತ್ತದೆ. ಮೂರು ದಶಕಗಳ ಹಿಂದೆ ಬರೆದ ಲೇಖನದಲ್ಲಿ ನಾನು ಚರ್ಚಿಸಿದ ಹಾಗೆ ಆ ಕಾದಂಬರಿಯು ವಾಸ್ತವತಾವಾದವನ್ನು ಅದೆಷ್ಟು ಸಾಂದ್ರವಾಗಿ, ದಟ್ಟ ವಿವರಗಳನ್ನು ಕಟ್ಟಿಕೊಡಲು ಬಳಸಿಕೊಳ್ಳುತ್ತದೆಯೆಂದರೆ ಸಂರಚನೆಯನ್ನು ಮುರಿಯುತ್ತದೆ. ಕಾದಂಬರಿಯ ಕೊನೆಯ ಅಧ್ಯಾಯವಂತೂ ಉದ್ದೇಶಪೂರ್ವಕವಾಗಿಯೇ ಒಂದು ಆದರ್ಶಮಯ ಶೈಲಿಯನ್ನು ಬಳಸಿಕೊಳ್ಳುತ್ತದೆ.

'ಮಲೆಗಳಲ್ಲಿ ಮದುಮಗಳು' ವಾಸ್ತವವಾದಿ ಪರಂಪರೆಯ ಹಂಗನ್ನೇ ತೊರೆದು ಕಾವ್ಯ ಪುರಾಣದ ಮಾದರಿಯನ್ನು ಬಳಸಿಕೊಳ್ಳುತ್ತದೆ. ಈ ಕಾದಂಬರಿಯನ್ನು "ಕೇಂದ್ರವೇ ಇಲ್ಲದ, ವಿವರಗಳಿಂದ ಸೊಕ್ಕಿದ" ಎಂದು ಕನ್ನಡದ ಇಬ್ಬರು ಪ್ರಮುಖ ವಿಮರ್ಶಕರು ವ್ಯಾಖ್ಯಾನಿಸಿದ್ದು ನೆನಪಾಗುತ್ತದೆ. ಪಾಶ್ಚಾತ್ಯ ನವ್ಯ ವಿಮರ್ಶೆಯ ಸಿದ್ಧಸೂತ್ರಗಳನ್ನು ಸಾರ್ವತ್ರಿಕ ಸತ್ಯಗಳೆಂದು ನಮ್ಮ ವಿಮರ್ಶೆಯು ಒಪ್ಪಿಕೊಂಡಿದ್ದರ ಫಲ ಇದಾಗಿತ್ತು. ಹಾಗೆಯೆ ಕುಸುಮಬಾಲೆಯೂ ಕೂಡ ಅಸೂಕ್ಷ್ಮವಾದ ಓದುಗಳಿಗೆ ಒಳಗಾಗಿತ್ತು. ಇವೆರಡೂ ಕೃತಿಗಳು ನಮ್ಮ ಓದಿನ ಮಿತಿಗಳನ್ನು ಮೀರಿ ಬೆಳೆಯುತ್ತಲೇ ಇವೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕಥನದ ಶ್ರೇಷ್ಠ ಗುಣವೆಂದರೆ ಅದು ಒಂದು ಸ್ತರದಿಂದ ಇನ್ನೊಂದು ಸ್ತರಕ್ಕೆ ಸಹಜವಾಗಿ ಚಲಿಸುವ ರೀತಿ. ಹುಲಿಕಲ್ಲು ನೆತ್ತಿಯಲ್ಲಿ ಗುತ್ತಿ-ತಿಮ್ಮಿಯರು ರಾತ್ರಿಯನ್ನು ಕಳೆದ ಪ್ರಸಂಗವನ್ನೇ ಉದಾಹರಣೆಯಾಗಿ ನೋಡಬಹುದಾಗಿದೆ. ಅದು ವಾಸ್ತವವೇ, ಕನಸೇ, ಭ್ರಮೆಯೇ ಅಥವಾ ಸಮಷ್ಟಿಯ ಸುಪ್ತಸ್ಮೃತಿಯಿಂದ ತೇಲಿಬಂದ ಪ್ರತಿಮೆಯೇ ಎಂದು ಖಚಿತವಾಗಿ ಹೇಳಗಾಗದಂಥ ಪ್ರಸಂಗವಾಗಿದೆ. ಗುತ್ತಿ-ತಿಮ್ಮಿ, ಮುಕುಂದಯ್ಯ, ಚಿನ್ನಮ್ಮರ ನಡೆಯುತ್ತಿರುವ ಹಾಗೂ ನಡೆಯಲಿರುವ ಕತೆಗಳು ಯಾವುದೋ ಕಾಲದಲ್ಲಿ ಹೀಗೆಯೇ ಮಲೆಯ ಮದುಮಗಳನ್ನು ತನ್ನ ಕುದುರೆಯ ಮೇಲೆ ಕೂರಿಸಿಕೊಂಡು ಓಡಿಹೋದ ಸವಾರನೊಬ್ಬನ ಕತೆಯ ಮರುಕಳಿಕೆಗಳಾಗಿವೆ. ತಿಮ್ಮಿ ಕಂಡಿದ್ದು ಅವಾಸ್ತವೂ ಅಲ್ಲ; ಏಕೆಂದರೆ ಹುಲಿಯ ನಾಯಿಯೂ ಅದನ್ನು "ಅನುಭವಿಸಿದೆ". ಕಾದಂಬರಿಯ ನಿರೂಪಕರು ಅನೇಕ ಕಡೆಗಳಲ್ಲಿ ಹೇಳುವ ಹಾಗೆ ಸಮಷ್ಟಿಯ ಅಪ್ರಜ್ಞೆ ಅಥವಾ ಸುಪ್ತಪ್ರಜ್ಞೆಯಲ್ಲಿ ಮರೆವು ಎನ್ನುವುದು ಇಲ್ಲವೇ ಇಲ್ಲ. ತೀವ್ರ ಭಾವನೆಯ, ಆಳವಾದ ಅನುಭವದ ನೆನಪುಗಳು ಹುಲಿಕಲ್ಲು ನೆತ್ತಿಯಂಥ 'ಜಾಗೃತ' ಸ್ಥಳಗಳಲ್ಲಿ ಜೀವಂತವಾಗಿವೆ.

ಸೂಕ್ಷ್ಮವಾಗಿ ಓದಿದರೆ ಈ ಕಾದಂಬರಿಯು 'ಸ್ಥಳ' ಮತ್ತು 'ಕಾಲ' ಗಳ ಬಗ್ಗೆ ಮೂಲಭೂತವಾಗಿಯೇ ಬೇರೆ ಯಾಗಿರುವ ತಿಳುವಳಿಕೆಯನ್ನು ಅವಲಂಬಿಸಿದೆ. ವಾಸ್ತವವಾದಿ ಕಾದಂಬರಿ ಪ್ರಕಾರದಲ್ಲಿ 'ಸ್ಥಳ' ಹಾಗೂ 'ಕಾಲ' ಗಳು ಸ್ಥಿರವಾಗಿರುತ್ತವೆ. ಕಾಲವು ಏಕಮುಖಿಯಾಗಿ ಹಿಂದಿನಿಂದ ಮುಂದಿಗೆ ಚಲಿಸುತ್ತದೆ. ಹೆಚ್ಚೆಂದರೆ Flash Back ಮೂಲಕ ಅಥವಾ ಉಪಕತೆಯೊಂದರ ಮೂಲಕ ವಾಸ್ತವಾದಿ ಕಾದಂಬರಿಕಾರ ಕಾಲದ ಏಕಮುಖ ಚಲನೆಯನ್ನು ಮುರಿಯಬಹುದು. ಆದರೆ ಈ ಕಾದಂಬರಿಯಲ್ಲಿ ಇದು ತಂತ್ರದ ಪ್ರಶ್ನೆಯಲ್ಲ; ಅದು ತಾತ್ವಿಕ ನಂಬಿಕೆ ಹಾಗೂ ಕಾಣ್ಕೆಯ ಪ್ರಶ್ನೆಯಾಗಿದೆ. ಈ ಕಾಣ್ಕೆ ತುಂಬಾ ಅಪರೂಪದ ಸ್ವರೂಪದ್ದಾಗಿದೆ. ಇದು ಮನುಷ್ಯರ ದೈನಂದಿನ ಬದುಕಿನ ವಾಸ್ತವಗಳನ್ನು ಅತ್ಯಂತ ವಿವರವಾಗಿ, ಖಚಿತವಾದ ಕಾಲ-ದೇಶಗಳ ಸಂದರ್ಭದಲ್ಲಿಟ್ಟು ನೋಡಬಲ್ಲದು. ಇದರಿಂದಾಗಿ 'ಮಲೆಗಳಲ್ಲಿ ಮದುಮಗಳು' ಕರ್ನಾಟಕದ ಮಲೆನಾಡಿನ ಚರಿತ್ರೆಯ ಒಂದು ಅತ್ಯಂತ ಮಹತ್ವಪೂರ್ಣ ಯುಗದ ದಾಖಲೆಯೂ ಆಗಿದೆ. ಇನ್ನೊಂದು ಕಡೆಗೆ ಈ ಕಾಣ್ಕೆಯು ಮನುಷ್ಯರ ಜೀವನವನ್ನು ಗತ, ವರ್ತಮಾನ ಹಾಗೂ ಭವಿಷ್ಯಗಳ ನಮ್ಮ ಸಾಮಾನ್ಯ ಕಲ್ಪನೆಗಳನ್ನು ಮೀರಿ ವರ್ತಮಾನದಲ್ಲಿ ಭೂತವನ್ನು, ಭೂತದಲ್ಲಿ ಭವಿಷ್ಯವನ್ನೂ ಕಾಣುತ್ತದೆ. ಉದಾಹರಣೆಗೆ ಮುಕುಂದಯ್ಯನಿಗೆ-ಹೆಗ್ಗಡೆ ಯವರ ಜೀವನದ ಸತ್ಯಗಳನ್ನು ವಿವರಿಸುವ ಗಡ್ಡದಯ್ಯನಿಗೆ ಕಾಲದೇಶಗಳನ್ನು ಮೀರಿದ ತಿಳುವಳಿಕೆಯಿದೆ. ಹೀಗಾಗಿ ಅವನಿಗೆ ಮುಕುಂದಯ್ಯ, ಚಿನ್ನಮ್ಮರ ಪ್ರೇಮಸಾಹಸವು ಮುಂದೆ ಆಗಲಿರುವ ಮಹತ್ತರ ಘಟನೆಯ ಕಾರಣವಾಗಿ ಕಾಣುತ್ತದೆ. ಇದು ಕೇವಲ ಕಾದಂಬರಿಯಲ್ಲಿ ವರ್ಣಿತವಾಗಿರುವ ಪುಟ್ಟ ಪ್ರಾದೇಶಿಕ ಜಗತ್ತಿಗೆ ಸೇರಿದ್ದಲ್ಲ. ವಸಾಹತು ಶಾಹಿಯ ಜೊತೆಗೆ ಪ್ರವೇಶಿಸಿದ ಆಧುನಿಕತೆಯ ಪರೋಕ್ಷ ಪರಿಣಾಮದಿಂದಾಗಿ ಆರಂಭ ಗೊಂಡ ಧಾರ್ಮಿಕ ಸುಧಾರಣೆಗಳ ಭಾಗವಾಗಿ ಆ ಯುಗದ ನೇತರರಾಗಿ ಹೊಮ್ಮಿದ ವಿವೇಕಾನಂದರೂ ಈ ಪ್ರಾದೇಶಿಕಕತೆಯ ಹಿಂದೆ ಇದ್ದಾರೆ. ಮನೆಬಿಟ್ಟು ಓಡಿ ಬಂದ ಮದುವಣಗಿತ್ತಿ ಚಿನ್ನಮ್ಮ ಕಾಡಿನಲ್ಲಿಯ ಗುಡಿಯ ದೇವತೆಗೆ ಉದ್ದಂಡ ನಮಸ್ಕಾರ ಹಾಕಿದಾಗ ಅದು ಕಲಕತ್ತೆಯ ಭವತಾರಿಣಿಗೆ ತಲುಪುತ್ತದೆ. ದೇವಯ್ಯನ ಮತಾಂತರ ವನ್ನು ತನ್ನ ಕೋವಿಯ ಬೆದರಿಕೆಯಿಂದ ಮುಕುಂದಯ್ಯನು ನಿಲ್ಲಿಸುವ ಅಸಂಗತ ಪ್ರಸಂಗವು ಸಾವಿರಾರು ಮೈಲಿ ದೂರದಲ್ಲಿರುವ ಸ್ವಾಮಿಗಳ ಮನಸ್ಸಿಗೆ ಗೋಚರವಾಗು ತ್ತದೆ. ಹೀಗಾಗಿ 'ಮಲೆಗಳಲ್ಲಿ ಮದುಮಗಳು' ಖಚಿತವಾದ ಕಾಲಾನುಕ್ರಮಣಿಕೆಯನ್ನು ಅನುಸರಿಸುವ ಚಾರಿತ್ರಿಕ ಕಥನವೂ ಆಗಿದೆ.

ಮಲೆನಾಡಿನ ಕುಗ್ರಾಮಗಳಲ್ಲಿ ಸ್ಥಿರ ಗೊಂಡಿರುವ ಜಮೀನ್ದಾರಿ ವ್ಯವಸ್ಥೆಯು ಜಾತಿ ವ್ಯವಸ್ಥೆ ಹಾಗೂ ಪುರೋಹಿತಶಾಹಿಯ ಹಿಡಿತದಿಂದಾಗಿ ಶೋಷಣೆ, ಲೈಂಗಿಕ ಶೋಷಣೆ ಮೂಢನಂಬಿಕೆಗಳ ಬಲೆಯಲ್ಲಿ ಸಿಕ್ಕಿಕೊಂಡಿದೆ. ಈ ಸಮಾಜದ ಪ್ರತಿಯೊಂದು ಜಾತಿಯ

ವಿವರಗಳೊಂದಿಗೆ ಇಡೀ ಸಂದರ್ಭವನ್ನು ಕುವೆಂಪು ವಿವರಿಸುತ್ತಾರೆ. ಕೆಲವು ಕಡೆಗೆ ನೇರವಾಗಿ ನಿರೂಪಿಸಿ ಓದುಗರಿಗೆ ಸಂದರ್ಭವನ್ನು ವ್ಯಾಖ್ಯಾನಿಸುತ್ತಾರೆ. ಬ್ರಾಹ್ಮಣ ಪುರೋಹಿತಶಾಹಿಯು ಶೂದ್ರ ವರ್ಗಗಳ ಮೇಲೆ ತನ್ನ ಹಿಡಿತವನ್ನು ಇಟ್ಟುಕೊಂಡಿದೆ. ಮುಕುಂದಯ್ಯ, ದೇವಯ್ಯರಂಥ ಕೆಲವು ಯುವಕರು ಮಾತ್ರ ಪುರೋಹಿತಶಾಹಿಯನ್ನು ಪ್ರಶ್ನಿಸುವ ಸಾಮರ್ಥ್ಯ ಹೊಂದಿದ್ದಾರೆ. ನಿರೂಪಕರು ಹೇಳುವಂತೆ ಹಿಂದೂ ಧರ್ಮವು ತನ್ನ ಅಸಮಾನತೆ ಹಾಗೂ ಅನ್ಯಾಯಗಳನ್ನು ಸರಿಪಡಿಸಿಕೊಳ್ಳದೇ ಇರುವುದರಿಂದ ಅದನ್ನೇ ನೆಪವಾಗಿರಿಸಿ ಕೊಂಡು ಕ್ರಿಶ್ಚಿಯನ್ ಮಿಶಿನರಿಗಳು ತಮ್ಮ ಗಾಳವನ್ನು ಹಾಕುತ್ತಿದ್ದಾರೆ. ನಿರೂಪಕರ ಭಾಷೆಯು 'ಬಲೆ, ಗಾಳ' ಇವೇ ಮುಂತಾದ ರೂಪಕಗಳನ್ನು ಬಳಸುತ್ತದೆ. ಮತಾಂತರದ ಪ್ರಹಸನವು ಮುಗಿದಾಗ ರೆವರೆಂಡ್ ಲೇಕ್ ಹಿಲ್ ದೊರೆಯ ಮಾತುಗಳು ಇಂತದೇ ಧಾಟಿಯಲ್ಲಿವೆ. ಕ್ರಿಶ್ಚಿಯನ್ ಧರ್ಮವು ನಿಮಗೆ ಬೇಡವಾದರೆ ಸರಿ ಆದರೆ ಎಷ್ಟು ದಿನಗಳವರೆಗೆ ಬ್ರಾಹ್ಮಣರ ಕಾಲು ತೊಳೆದು ಅದನ್ನು ತೀರ್ಥವನ್ನಾಗಿ ಕುಡಿಯುತ್ತೀರಿ? ಎನ್ನುವುದು ಅವರ ಪ್ರಶ್ನೆ. ಅದನ್ನೇ ಯೋಚಿಸುತ್ತಾ ಹೊರಬರುವ ಮುಕುಂದಯ್ಯ, ದೇವಯ್ಯನವರು ಮಕ್ಕಳನ್ನು ಸ್ಕೂಲಿಗೆ ಕಳಿಸುವುದಾಗಿ ನಿರ್ಧರಿಸುತ್ತಾರೆ. ತೀರ್ಥಹಳ್ಳಿಯ ಆಸುಪಾಸಿನಲ್ಲಿರುವ ಹಿರೀಕರ ಪ್ರಕಾರ ಈ ಕಾದಂಬರಿ ಚಿತ್ರಿಸುವುದು ಆ ಒಂದು ಕಾಲದ ವಾಸ್ತವಿಕ ಚಿತ್ರವನ್ನೇ. ತೀರ್ಥಹಳ್ಳಿಯಲ್ಲಿ ಮೊದಲ ಹೆರಿಗೆ ಆಸ್ಪತ್ರೆ, ಮೊದಲ ಸ್ಕೂಲು, ನಂತರ ಮೈಸೂರಿನ ಸಂಪರ್ಕ ಇವೆಲ್ಲವು ಚರಿತ್ರೆಯ ಭಾಗಗಳೇ ಆಗಿವೆ. ನಿರೂಪಕನ ಮಾತುಗಳಲ್ಲಿ ಮೂರು ಧ್ವನಿಗಳು ಸ್ಪಷ್ಟವಾಗಿ ಕೇಳಿಸುತ್ತವೆ.

೧) ಮತಾಂತರವು ಲೋಭ, ಒತ್ತಾಯ ಇವುಗಳಿಂದಾಗಿ ನಡೆಯುವ ದುಷ್ಟ ಕೆಲಸ.

೨) ಆದರೆ ಪಾದ್ರಿಗಳು ಮತಾಂತರಕ್ಕೆ ಪ್ರಯತ್ನಿಸಲು ಅವಕಾಶ ಮಾಡಿಕೊಟ್ಟಿದ್ದು ಹಿಂದು ಧರ್ಮದ ಜಾತಿ ವ್ಯವಸ್ಥೆ ಹಾಗೂ ಅದರಿಂದಾಗಿ ಶೂದ್ರರಿಗೆ ಆಗುತ್ತಿರುವ ಅವಮಾನ.

೩) ಬ್ರಾಹ್ಮಣ ಪುರೋಹಿತಶಾಹಿಯು ಸ್ವಾರ್ಥ ಹಾಗೂ ದೌರ್ಜನ್ಯದ ಸಂಕೇತವಾಗಿದೆ.

೪) ಆದರೆ ವಿವೇಕಾನಂದರ ಆದರ್ಶದ ಹಿಂದೂ ಧರ್ಮವು ಸಮಾಜದ ಅವಶ್ಯಕತೆ ಯಾಗಿದೆ.

೫) ಆಧುನಿಕತೆಯ ಒಂದು ಮುಖವು-ಅಂದರೆ ಆಸ್ಪತ್ರೆ, ಎಲ್ಲರಿಗೂ ತೆರೆದಿರುವ ಸ್ಕೂಲು ಇತ್ಯಾದಿ ಸ್ವಾಗತಾರ್ಹವಾಗಿದೆ. ಅದಕ್ಕೆ ತದ್ವಿರುದ್ಧವಾದ ಸಂಪ್ರದಾಯದ ಪ್ರತಿನಿದಿಯೆಂದರೆ ಶೂದ್ರರನ್ನೂ, ದಲಿತರನ್ನೂ ಹೊರಗಿಟ್ಟಿರುವ ಮಠ ವ್ಯವಸ್ಥೆ.

ಕಾದಂಬರಿಯು ಸಂಕ್ರಮಣ ಕಾಲವೊಂದರ ಸಂಕೀರ್ಣ ಸ್ಥಿತಿಗಳನ್ನು ವಸ್ತುನಿಷ್ಟವಾಗಿ ಚಿತ್ರಿಸುತ್ತದೆ. ಮಲೆನಾಡಿನ ಬಗ್ಗೆ ಬಂದಿರುವ ನೆನಪಿನ ಕೃತಿಗಳು ಹಾಗೂ ಇತ್ತೀಚೆಗೆ ಹೊರ ಬಂದ ಜಸ್ಟಿಸ್ ಎನ್.ಡಿ. ವೆಂಕಟೇಶ್ ಅವರ ಬಗೆಗಿನ ಲೇಖನಗಳು ಈ ಕಾದಂಬರಿಯ

ಕಥನದ ವಾಸ್ತವಿಕತೆಯನ್ನು ಸಮರ್ಥಿಸುತ್ತದೆ. ಈ ಪ್ರಾದೇಶಿಕ ಚರಿತ್ರೆಯು 'ಕಾನೂರು ಹೆಗ್ಗಡತಿ' ಯಲ್ಲಿ ಮುಂದುವರೆಯುತ್ತದೆ.

ಇನ್ನು ವಾಸ್ತವತೆಯನ್ನು ಮೀರುವ ಆ ಇನ್ನೊಂದು ಕಥಾನಕವು ಅಂದರೆ ವಿವೇಕಾನಂದರನ್ನು ಹಾಗೂ ಗಡ್ಡದಯ್ಯನನ್ನು ಒಳಗೊಂಡಿರುವ ಕಥಾನಕವು ಕೂಡ ಚರಿತ್ರೆಯೇ ಆಗಿದೆ. ಶೂದ್ರ ಶಕ್ತಿಯ ಸಂಕೇತವಾಗಿದ್ದ ವಿವೇಕಾನಂದರು ವೇದ ಉಪನಿಷತ್ತುಗಳನ್ನು ಆಧರಿಸಿರುವ ಹಿಂದೂ ಧರ್ಮದ ಪುನರುತ್ಥಾನವನ್ನು ಮಾಡುವುದರ ಜೊತೆಗೆ ಜಾತಿ ವ್ಯವಸ್ಥೆ ಹಾಗೂ ಪುರೋಹಿತಶಾಹಿಯ ವಿರುದ್ಧ ದೊಡ್ಡ ಪ್ರತಿಭಟನೆಯನ್ನೂ ಹೂಡಿದರು. ಅದು ವಸಾಹತುಶಾಹಿ ಆಧುನಿಕತೆಗೆ ಒಂದು ಪರ್ಯಾಯವೂ ಆಗಿತ್ತು. ಈ ರೀತಿಯಲ್ಲಿ ಈ ಎರಡು ಕಥನಗಳು ಏಕಕಾಲಕ್ಕೆ ಸ್ಥಳೀಯ, ಪ್ರಾದೇಶಿಕ ಸತ್ಯಗಳನ್ನು, ವಿಶಾಲವಾದ ಭಿತ್ತಿಯಲ್ಲಿ ಕಾಣುವ ವಾಸ್ತವಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತವೆ. ಇವೆರಡೂ ಕಥನಗಳು ಇರುವ ಭಿತ್ತಿಯಲ್ಲಿ ಅನೇಕಾನೇಕ ಪಾತ್ರಗಳ ದೈನಂದಿನ ಬದುಕಿನ ಸಂಕೀರ್ಣವೂ ಸರಳವೂ ಆದ ಘಟನೆಗಳು ತಮ್ಮದೇ ಆದ ತರ್ಕದಲ್ಲಿ ನಡೆಯುತ್ತಲೇ ಇರುತ್ತವೆ. ಅಷ್ಟು ಮಾತ್ರವಲ್ಲ ಪ್ರಕೃತಿಯು ಕೂಡ ತನ್ನ ವಿಶಾಲವಾದ ಲಯಗಳನ್ನು ಅನು ಸರಿಸುತ್ತ, ಮನುಷ್ಯ ಜಗತ್ತಿನ ಬಗ್ಗೆ ದಿವ್ಯ ನಿರ್ಲಕ್ಷ್ಯವನ್ನು ತೋರಿಸುತ್ತಾ ಇದೆ. ಆದರೆ ಮನುಷ್ಯ ಲೋಕವು ಮಾತ್ರ ಪ್ರಕೃತಿಯ ಸೌಮ್ಯ, ಕ್ರೂರ ಮುಖಗಳಿಗೆ ಸ್ಪಂದಿಸುತ್ತ ತನ್ನನ್ನು ರೂಪಿಸಿ-ಕೊಳ್ಳುತ್ತಿದೆ. ಕಾದಂಬರಿಕಾರ ಡಿ.ಎಚ್. ಲಾರೆನ್ಸ್ ಟಾಲ್‌ಸ್ಟಾಯ್ ಬಗ್ಗೆ ಬರೆಯುತ್ತಾ ಒಂದು ಶ್ರೇಷ್ಠ ಕೃತಿಯು ಮನುಷ್ಯ ತನ್ನ ಜೊತೆಗೆ, ಸಮಾಜದ ಇತರ ಮನುಷ್ಯರ ಜೊತೆಗೆ ಹಾಗೂ ನಿಸರ್ಗದ ಜೊತೆಗೆ ಇಟ್ಟುಕೊಳ್ಳುವ ಸಂಬಂಧಗಳನ್ನು ಸಮಗ್ರವಾಗಿ ಶೋಧಿಸಬೇಕು ಎನ್ನುತ್ತಾನೆ. ಇದನ್ನು "ಮಲೆಗಳಲ್ಲಿ ಮದುಮಗಳು" ಕಾದಂಬರಿಯು ಸಾಧಿಸುತ್ತದೆ.

ಈ ಕಾದಂಬರಿಯ ವ್ಯಕ್ತಿಗಳು ತಾವು ಸ್ವತಂತ್ರರೆಂದು ಮತ್ತು ತಮ್ಮ ಕ್ರಿಯೆಗಳಿಂದಾಗಿ ಕೆಲವು ಪರಿಣಾಮಗಳು ಆಗುತ್ತಿದೆಯೆಂದು ನಂಬಿಕೊಂಡಿರುತ್ತಾರೆ. ಇದು ಅವರ ಸೀಮಿತ ತಿಳುವಳಿಕೆಯಲ್ಲಿ ನಿಜವೂ ಹೌದು. ಆದರೆ ಅವರುಗಳು ಚರಿತ್ರೆಯ ಆಗುವಿಕೆಯಲ್ಲಿ "ಪಾತ್ರ"ಗಳೇ ಹೌದು. ಮುಕುಂದಯ್ಯ-ಚಿನ್ನಮ್ಮನ ಪ್ರೇಮ ಸಾಹಸವು ಅನೇಕ ಬಗೆಯ ಪರಿಣಾಮಗಳನ್ನು ಉಂಟುಮಾಡುತ್ತದೆ. ಮೊದಲನೆಯದಾಗಿ ಸಂಪ್ರದಾಯಿಸ್ಥ ಜಮೀನ್ದಾರಿ ಸಮಾಜದೊಳಗೆ ಅದೊಂದು ಬಹುದೊಡ್ಡ Scandal. ಮದುವಣಗಿತ್ತಿ ಯೊಬ್ಬಳು ನಿಶ್ಚಯವಾಗಿದ್ದ ಮದುವೆಯನ್ನು ಬಿಟ್ಟು ರಾತ್ರೋರಾತ್ರಿ ಮನೆಬಿಟ್ಟು ಓಡಿ ಹೋಗಿ ತನ್ನ ಪ್ರಿಯಕರನನ್ನು ಕೂಡಿಕೊಂಡಿದ್ದು ಆ ಸಮಾಜದ ಬೇರುಗಳನ್ನೇ ಅಲ್ಲಾಡಿಸುತ್ತದೆ. ಅವರಿಬ್ಬರ ಪರಿಸ್ಪರ ಪ್ರೀತಿಯ ಹೊರತು ಅವರ ಬೆಂಬಲಕ್ಕೆ ಹೆಚ್ಚಿನ ದೇನೂ ಇಲ್ಲ. ಹೀಗಾಗಿ ಕಾದಂಬರಿಯು ಸಾಂಪ್ರದಾಯಕವಾದ "ಶುಭಂ" ವಾತಾವರಣದಲ್ಲಿ ಮುಗಿ

ಯುವುದಿಲ್ಲ. ಆದರೆ ಗಡ್ಡದಯ್ಯ ಹೇಳಿದಂತೆ ಇವರ ಮದುವೆಯಿಂದಾಗಿ ಮುಂದೆ ಹುಟ್ಟುವ ಇನ್ನೊಂದು ತಲೆಮಾರಿನ ಸಂತತಿಯು ಮಹತ್ತಾದ ಏನನ್ನೋ ಸಾಧಿಸಬೇಕಾಗಿದೆ. ಅದೇ ರೀತಿ ಕುಗ್ರಾಮಗಳ ಈ ಸಮಾಜವು ಕ್ರಮೇಣವಾಗಿ ಆಧುನಿಕ ಗೊಳ್ಳುವುದೂ ಅಷ್ಟೇ ಖಚಿತವಾಗಿದೆ.

ಕುವೆಂಪು ಬರಹವು ಅನೇಕ ಅರ್ಥಪೂರ್ಣ ಅವಸ್ಥಾಂತರಗಳನ್ನು ಕಂಡಿತು. ಇದರಲ್ಲಿ ಮುಖ್ಯವಾದುದೆಂದರೆ ಜಾತಿ ಸಮಾಜದಲ್ಲಿ ಸೃಜನಶೀಲ ಬರಹಗಾರನಿಗೆ ಎದುರಾಗುವ ಸವಾಲನ್ನು ಅವರು ಎದುರಿಸಿದ ಬಗೆ. ಈ ಸವಾಲೆಂದರೆ ದ್ವೀಪಗಳಂತಿರುವ ಜಾತಿಗಳಿಂದಾಗಿ ತನ್ನದಲ್ಲದ ಜಾತಿಗಳಿಗೆ ಸೇರಿರುವ ಪಾತ್ರಗಳ ಅಂತರಂಗವನ್ನು ಪ್ರವೇಶಿಸುವುದು. ಅತ್ಯಂತ ಉದಾರ ಪ್ರಜ್ಞೆಯ ಬರಹಗಾರನೂ ಕೂಡ ಹೊರಗಿನಿಂದ ಅವರುಗಳನ್ನು ನೋಡಿ ಬರೆಯಬೇಕಾಗುತ್ತದೆ. ಹೀಗಾದಾಗ ಅವನು ಒಬ್ಬ ಮಾನವಶಾಸ್ತ್ರಜ್ಞನಂತೆ ಅವರುಗಳ ಬದುಕಿನ ಬಗ್ಗೆ ಅನೇಕ ಅರ್ಥಪೂರ್ಣ ವಿವರಗಳನ್ನು ಕೊಡಬಹುದು. ಆದರೆ ಅವರ ಅಂತರಂಗ (ಅಂದರೆ ಅವರ Subjectivity ಅಥವಾ Interiority ಎನ್ನುವ ಅರ್ಥದಲ್ಲಿ) ಅವನಿಗೆ ದಕ್ಕದೇ ಹೋಗಬಹುದು. ನನಗೆ ತೋರುವಂತೆ ಕುವೆಂಪು ಈ ಕಾದಂಬರಿಯಲ್ಲಿ ಈ ಸವಾಲನ್ನು ಸಮರ್ಥವಾಗಿ ಎದುರಿಸಿದ್ದಾರೆ. ಗುತ್ತಿ-ತಿಮ್ಮಿ, ಐತ-ಪೀಂಚಲು, ಅಕ್ಕಣಿ, ದೇಯಿ ಇವರೆಲ್ಲರ ಅಂತರಂಗವನ್ನು ಅವರು ಪರಕಾಯ ಪ್ರವೇಶದ ಮೂಲಕ ಸಾಧಿಸುತ್ತಾರೆ. ಇದರ ದ್ಯೋತಕವೆಂದರೆ ಈ ಪಾತ್ರಗಳ ಸಂಕೀರ್ಣವಾದ ನೈತಿಕತೆ. ಅದರಲ್ಲೂ ಬಹು ಮುಖ್ಯವೆಂದರೆ ಸ್ತ್ರೀ ಪಾತ್ರಗಳಲ್ಲಿ ಕಾಣುವ ಅದರ ಸ್ವರೂಪ. ಉದಾಹರಣೆಗೆ ಗಂಡನ ಅನಾರೋಗ್ಯ, ಕುಡಿತ ಇವುಗಳಿಂದ ಹೈರಾಣಾದ ಅಕ್ಕಣಿ ಚೀಂಕ್ರನ ಲಂಪಟತೆಗೆ ಗುರಿಯಾಗುತ್ತಾಳೆ. ಆದರೆ ಚೀಂಕ್ರನ ದುಷ್ಟತನದಿಂದಾಗಿ ಗಂಡನನ್ನು ಕಳೆದುಕೊಂಡ ಮೇಲೆ ಚೀಂಕ್ರನು ಅವಳ ಮೇಲೆ ಅಧಿಕಾರ ಚಲಾಯಿಸಲು ಬಂದಾಗ ಅವನ ಬೆರಳನ್ನೇ ಕತ್ತರಿಸುತ್ತಾಳೆ. ವಿಶೇಷವೆಂದರೆ ಗಂಡು-ಹೆಣ್ಣುಗಳ ನಡುವಣ ಗಾಢವಾದ ಪ್ರೀತಿಯಿಂದಾಗಿ ಈ ಕಾದಂಬರಿಯಲ್ಲಿ ಗಂಡುಗಳು ಬದಲಾಗುತ್ತಾರೆ. ಇದಕ್ಕೆ ಐತ, ಗುತ್ತಿ, ಮುಕುಂದಯ್ಯ, ದೇವಯ್ಯ ಎಲ್ಲರೂ ಉದಾಹರಣೆಗಳೇ. ಅವರಿಂದಾಗಿ ಈ ಗಂಡಸರು ಹೆಚ್ಚು ಮಾನವೀಯವಾಗುತ್ತಾರೆ, ಮೃದುವಾಗುತ್ತಾರೆ, ಸೂಕ್ಷ್ಮವೂ ಆಗುತ್ತಾರೆ.

ಇಷ್ಟೇ ಮಹತ್ವಪೂರ್ಣ ಅಂಶವೆಂದರೆ ಕಾದಂಬರಿಯಲ್ಲಿ ಅತ್ಯಂತ ಗಂಭೀರವೂ, ಮುಖ್ಯವೂ ಆಗಿರುವ ನೈತಿಕ ತೀರ್ಮಾನಗಳನ್ನು ಹೆಂಗಸರೇ ಮಾಡುತ್ತಾರೆ. ಉದಾಹರಣಗೆ ಚಿನ್ನಮ್ಮ, ಆಗಲೇ ಹೇಳಿದ ಹಾಗೆ ಒಬ್ಬ ಅಭಿಸಾರಿಕೆಯಂತೆ ಜಗತ್ತನ್ನೇ ಎದುರು ಹಾಕಿಕೊಂಡು ಮುಕುಂದಯ್ಯನ ಕಡೆಗೆ ಹೊರಡುತ್ತಾಳೆ. ಅವಳ ಅಜ್ಜಿಗೆ ತನ್ನ ಮೊಮ್ಮಗಳು

ಬದುಕಿ ಮನೆಗೆ ಮರಳಿದ್ದಾಳೆ ಎನ್ನುವುದರ ಎದುರಿಗೆ ಸಮಾಜ ಬಾಂಧವರು, ಜಾತಿಯ ಕಟ್ಟಳೆಗಳು ಯಾವುದೂ ಕಾಣುವುದಿಲ್ಲ. ತಿಮ್ಮಿಗೆ ಗುತ್ತಿಯ ಜೊತೆಗೆ ಹೊರಡುವುದೆಂದರೆ ತನ್ನ ಪರಿಚಿತ ಜಗತ್ತನ್ನು ತ್ಯಜಿಸಿ ಗೊತ್ತಿಲ್ಲದ ಜಗತ್ತಿಗೆ ಪಯಣಿಸುವುದೇ ಆಗಿದೆ. ಅಲ್ಲಿ ಅವಳ ಸುಪುಷ್ಟವಾದ ದೇಹವನ್ನೇ ಗಂಡುನೋಟದಿಂದ (Male Gaze) ನೋಡುವ ಚಂದ್ರೇಗೌಡರಿದ್ದಾರೆ. ಪುರುಷ ಪ್ರಧಾನವಾದ ಜಮೀನ್ದಾರಿ ಸಮಾಜದಲ್ಲಿ ಇಂಥ ಶೋಷಣೆಯ ಹೊರತು ಹೆಣ್ಣಿಗೆ ಇನ್ನೇನೂ ಇಲ್ಲ. ಆದರೆ ಇಂಥ ಇಕ್ಕಟ್ಟುಗಳ ನಡುವೆ ಅಚ್ಚರಿಯಾಗುವಂತೆ ಅವರು ತಮ್ಮ ಸ್ವಾಯತ್ತವಾದ ನೈತಿಕ ತೀರ್ಮಾನಗಳನ್ನು ಕೈಕೊಳ್ಳುತ್ತಾರೆ. ಆದ್ದರಿಂದಲೇ ಈ ಕಾದಂಬರಿ ಹೆಣ್ಣು ಜಗತ್ತಿನ ಕಾದಂಬರಿಯೇ ಆಗಿದೆ.

ಕೊನೆಯದಾಗಿ ಕವಿ ಜಾನ್ ಕೀಟ್ಸ್‌ನ ಒಂದು ಮಾತು ನೆನಪು ಮಾಡಿಕೊಳ್ಳುತ್ತೇನೆ. "We Dislike Poetry Which Has a Design Upon". ಈ ಕಾದಂಬರಿಯಲ್ಲಿ ಯಾರೂ ಮುಖ್ಯರಲ್ಲ; ಅಮುಖ್ಯರಲ್ಲ. ಹೀಗಾಗಿ ಕುವೆಂಪು ತಮ್ಮ ಉದ್ದೇಶ ಅಥವಾ ವ್ಯಾಖ್ಯಾನವನ್ನು ನಮ್ಮ ಮೇಲೆ ಹೇರುತ್ತಾರೆ ಅನ್ನಿಸುವುದಿಲ್ಲ. ಅವರಿಗೆ ಉದ್ದೇಶಗಳಿವೆ. ಅದರೆ ಈ ಕಾದಂಬರಿಯ ನಿಬಿಡವಾದ ಜಗತ್ತಿನಲ್ಲಿ ಅವು "ಇವೆ"-ಇನ್ನೆಲ್ಲ ಸತ್ಯಗಳ ಜೊತೆಗೆ.

೭. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕಾಡು : ಓದಲು ತೊಡಗಿದವನ ಪಾಡು

– ನಿತ್ಯಾನಂದ ಬಿ. ಶೆಟ್ಟಿ

ಪಶ್ಚಿಮದ ಸಮಾಜಗಳಲ್ಲಿ ಬಹಳ ಮುಖ್ಯರಾದ ಸಾಹಿತಿ-ಕಲಾವಿದರನ್ನು, ರಾಜಕೀಯ ನಾಯಕರನ್ನು, ಆಟಗಾರರನ್ನು, ವಿಜ್ಞಾನಿಗಳನ್ನು, ಸಾಮಾಜಿಕ ಹೋರಾಟ ಗಾರರನ್ನು ಹಾಗೆಯೇ ಇನ್ನು ಕೆಲವು ಸಾಂಸ್ಕೃತಿಕ ವಿದ್ಯಮಾನಗಳನ್ನು ಸತತವಾಗಿ ಫಾಲೋ ಮಾಡುತ್ತ, ಆಳವಾಗಿ ಅಧ್ಯಯನ ಮಾಡಿದ, ಮಾಡುತ್ತಿರುವ ಅನೇಕ ಜನ ವಿದ್ವಾಂಸರು ಇದ್ದಾರೆ. ಆದರೆ ಅಂತಹ ಆಶಾದಾಯಕವಾದ ಪರಿಸ್ಥಿತಿ ಕನ್ನಡದಲ್ಲಿ ಇಲ್ಲ. ಕುಮಾರವ್ಯಾಸನ ಬಗ್ಗೆ ಕೀರ್ತಿನಾಥ ಕುರ್ತಕೋಟಿ, ಬೇಂದ್ರೆ ಬಗ್ಗೆ ಜಿ. ಎಸ್. ಆಮೂರ, ರಾಮಾಯಣ-ಮಹಾಭಾರತಗಳ ಬಗ್ಗೆ ಲಕ್ಷ್ಮೀಶ ತೋಳ್ಪಾಡಿ, ಇಂತಹ ಕೆಲವು ಕೈ ಬೆರಳೆಣಿಕೆಯ ಹೆಸರುಗಳನ್ನು ಹೊರತುಪಡಿಸಿದರೆ ಕನ್ನಡದ ಸಂದರ್ಭದಲ್ಲಿ ಇಲ್ಲಿಯ ಧೀಮಂತ ಚಿಂತಕರನ್ನು / ವಿದ್ಯಮಾನಗಳನ್ನು ಆಳವಾಗಿ ಅಧ್ಯಯನ ಮಾಡಿದವರ ಕೊರತೆ ಎದ್ದು ಕಾಣುತ್ತದೆ. ನಮ್ಮಲ್ಲಿ ಇವತ್ತಿಗೂ 'ಇವರು ಮಾಸ್ತಿ ಸ್ಕಾಲರ್, ಇವರು ದೇವನೂರು ಮಹಾದೇವ ಸ್ಕಾಲರ್', 'ಇವರು ಪುತಿನ ಸ್ಕಾಲರ್' ಎಂದು ಯಾರನ್ನೂ ಹೆಸರಿಸುವಂತಹ ಪರಿಸ್ಥಿತಿ ಇಲ್ಲ. ಹಾಗೆ ನೋಡಿದರೆ ಕನ್ನಡದಲ್ಲಿ ಇಂದಿಗೂ ಕುವೆಂಪು ಕುರಿತು ಒಂದೇ ಒಂದು ಒಳ್ಳೆಯ ಸಂಶೋಧನಾ ಕೃತಿ ಮೂಡಿ ಬಂದಿಲ್ಲ. ಆದರೆ ಜಿಎಸ್‌ಎಸ್ ಮತ್ತು ಸುಜನಾರ ನಂತರ ಕುವೆಂಪು ಅವರ ಬಗ್ಗೆ ಬಹಳ ಮುಖ್ಯವಾದ ಕೆಲಸಗಳನ್ನು ಮಾಡಿದವರು ಡಿ. ಎಸ್. ನಾಗಭೂಷಣ್ ಒಬ್ಬರೇ ಎಂಬುದು ನನ್ನ ಅಭಿಮತ. ಇದು ಯಾಕೆ ನನಗೆ ಬಹಳ ಮುಖ್ಯ ಅಂದರೆ, ನಾಗಭೂಷಣ್‌ರವರು ಉನ್ನತ ಶಿಕ್ಷಣ ಸಂಸ್ಥೆಯೆಂದು ನಾವು ಕರೆಯುವ ವಿಶ್ವವಿದ್ಯಾನಿಲಯಗಳ ಹೊರಗಿರುವವರು. ಅವರು ಮಾಡಿದ/ ಮಾಡುತ್ತಿರುವ ಕೆಲಸವನ್ನು ನಿಜಕ್ಕೂ ಮಾಡಬೇಕಾದವರು ವಿಶ್ವವಿದ್ಯಾ ನಿಲಯದಲ್ಲಿರುವವರು. ಆದರೆ ವಿಶ್ವವಿದ್ಯಾನಿಲಯದ ಅಧ್ಯಾಪಕರು 'ಉನ್ನತ' ಮತ್ತು 'ಜ್ಞಾನ' ಎಂಬ ಪರಿಕಲ್ಪನೆಗಳಿಗೂ ತಮಗೂ ಸಂಬಂಧವೇ ಇಲ್ಲವೆಂಬಂತೆ ಬದುಕಿದ್ದಾರೆ.

ಇದೇ ಸಂದರ್ಭದಲ್ಲಿ ಇನ್ನೊಂದು ಇಂತಹುದೇ ಪ್ರಸಂಗ ನೆನಪಾಗುತ್ತದೆ. 'ಕವಿರಾಜ ಮಾರ್ಗ'ದ ಮತ್ತು ಆ ಕಾಲದ ಕನ್ನಡ ಸಾಹಿತ್ಯದ ಕುರಿತು ಆಳವಾದ ಸಂಶೋಧನೆ ನಡೆಸಿದವರು ಪ್ರೊ॥ ಎಂ ಎಂ ಕಲ್ಬುರ್ಗಿಯವರು. ಅವರು ವಿಶ್ವವಿದ್ಯಾನಿಲಯ ಎಂಬ

ಉನ್ನತ ಶಿಕ್ಷಣ ಸಂಸ್ಥೆಯ ಒಳಗಿದ್ದವರು. ಆದರೆ ಕೆ. ವಿ. ಸುಬ್ಬಣ್ಣ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡಿದವರಲ್ಲ. ಅಡಿಕೆ ಕೃಷಿ, ನಾಟಕ-ರಂಗಭೂಮಿ ಎಂದು ಹಳ್ಳಿಯೊಂದರಲ್ಲಿ ತಮ್ಮ ಬದುಕು ಕಟ್ಟಿಕೊಂಡವರು. ಆದರೆ ಇವತ್ತಿಗೂ ಕವಿರಾಜಮಾರ್ಗದ ಕುರಿತ ಒಳ್ಳೆಯ ಪುಸ್ತಕ ಯಾವುದೆಂದು ನನ್ನನ್ನು ಯಾರಾದರೂ ಕೇಳಿದರೆ ನನಗೆ ಕಲ್ಬುರ್ಗಿಯವರ ಥೀಸಿಸ್ ನೆನಪಾಗುವುದಿಲ್ಲ. ಸುಬ್ಬಣ್ಣ ಅವರ 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು' ಎಂಬ ಪುಸ್ತಕ ನೆನಪಾಗುತ್ತದೆ. ಅದು ಅಷ್ಟು ಒಳ್ಳೆಯ ಪುಸ್ತಕವಾದುದರಿಂದಲೇ ಅದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಬಂತು. ಹಾಗಾದರೆ ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು ಎಂಬ ಪುಸ್ತಕದಲ್ಲಿ ಅಂಥದ್ದೇನಿತ್ತು.? ನನ್ನ ಪ್ರಕಾರ ಅದರಲ್ಲಿ ಹೊಸ ಆಲೋಚನೆಗಳು ಇದ್ದವು. ಹೊಸಪ್ರಶ್ನೆಗಳು ಇದ್ದವು. ನಮ್ಮ ಗತಕಾಲದ ಪಠ್ಯಗಳನ್ನು ಹೇಗೆ ನೋಡಬಹುದು ಎಂಬ ಮಾದರಿಯೊಂದನ್ನು ಸುಬ್ಬಣ್ಣ ಆ ಕೃತಿಯ ಮೂಲಕ ತೋರಿಸಿಕೊಟ್ಟಿದ್ದರು. ಇಂತಹುದೇ ಕೆಲಸವನ್ನು ಕುವೆಂಪು ಅವರ ಬಗ್ಗೆ ಡಿ.ಎಸ್.ಎನ್. ಕೂಡ ಮಾಡಿದ್ದಾರೆ. ಅದನ್ನು ಇತ್ತೀಚಿಗಿನ ತಮ್ಮ ಲೇಖನದಲ್ಲಿ ದೇವನೂರು ಮಹಾದೇವ ಅವರೂ ಗುರುತಿಸಿದ್ದಾರೆ. ಕುವೆಂಪು ಓದಿನ ಸಂದರ್ಭದಲ್ಲಿ ಬಹಳ ಮುಖ್ಯವಾಗಿರುವ ಈ ಸಂಗತಿಯನ್ನು ನೆನಪಿಸಿಕೊಳ್ಳುತ್ತ ಓದುವುದೆಂದರೆ ಏನು . . . . ? ಎಂಬ ಮೂಲಭೂತ ಪ್ರಶ್ನೆಯೊಂದನ್ನು ಎತ್ತಿಕೊಂಡು, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕಾಡು, ಎಂಬ ವಿಷಯವನ್ನು ವಿವರಿಸಬಯಸುತ್ತೇನೆ.

ಭತ್ತದ ಪೈರು ನಾಟಿ ಮಾಡೋದು ಹೇಗೆ..? ಕುಪ್ಪಸ ಹೊಲಿಯುವುದು ಹೇಗೆ..? ಎಂಬ ಪ್ರಶ್ನೆಗಳಂತೆ ಓದು ಅಂದರೆ ಏನು..? ಓದು ನಡೆಸುವುದು ಹೇಗೆ . . . .? ಎಂದು ಕೇಳುವುದು ಕಷ್ಟ. ಕೇಳಿದರೂ ಅದರ ಉತ್ತರ ಇನ್ನೂ ಕಡುಕಷ್ಟ. ಪೈರು ನಾಟಿ ಮಾಡುವ, ಕುಪ್ಪಸ ಹೊಲಿಯುವ, ಸೌದೆ ಸೀಳುವ ಕೆಲಸ ಮಾಡುವುದಕ್ಕೆ ನಮಗೆ ಇರಬೇಕಾದುದು ಕೌಶಲ್ಯ / ಸ್ಕಿಲ್. ಆ ಕೌಶಲ್ಯಕ್ಕೆ ಅನುಕೂಲವಾಗಿ ಒದಗಿ ಬರೋದು ನಮ್ಮ ಕರಣಗಳು. ಅಂದರೆ ನಮ್ಮ ಕೈ, ಬೆರಳು, ಕಾಲು ಕಣ್ಣು ಇತ್ಯಾದಿ ಅಂಗಗಳು. ಈ ಅಂಗಗಳಿಗೆ ಸಹಾಯ ಮಾಡುವುದಕ್ಕಾಗಿ ನಾವು ಇನ್ನೊಂದು ಸಾಧನವನ್ನು ಬಳಸಿದರೆ ಆಗ ನಾವು ಅದನ್ನು ಉಪ-ಕರಣ ಅಂತ ಕರೀತೀವಿ. ಆದರೆ ಓದುವ ಕ್ರಿಯೆಯಲ್ಲಿ ಕಣ್ಣು ಎಂಬ ಒಂದು ಅಂಗವಷ್ಟೇ ತೊಡಗಿಕೊಂಡಿದ್ದರೆ ಆಗ ಓದುವ ಕೆಲಸ ನಡೆಯುತ್ತಿದೆ ಎಂದು ಹೇಳಲಾಗದು. ಕಣ್ಣು ಎಂಬ ಕರಣದ ಜೊತೆಗೆ ಪ್ರಜ್ಞೆ ಎಂಬ ಇನ್ನೊಂದು ವಿಶೇಷವಾದ ಅಂಗ ಕೂಡ ಕೆಲಸ ಮಾಡುತ್ತಿರುತ್ತದೆ. ಅದು ದೇಹದ ಒಳಗಿನ ಕರಣವಾದುದರಿಂದ ಅದನ್ನು ಸದ್ಯಕ್ಕೆ ಅಂತಃಕರಣ ಎಂದು ಕರೆಯೋಣ. ಆದರೆ ಕನ್ನಡದಲ್ಲಿ ಅಂತಃಕರಣ ಎಂಬ ಪದಕ್ಕೆ ಈಗಾಗಲೇ ಜನಪ್ರಿಯ ಅರ್ಥ ಇರೋದರಿಂದ ಆ ಅರ್ಥವನ್ನು ಇಲ್ಲಿ ಅನ್ವಯಿಸಬಾರದು.

ನಾಟಿ ಮಾಡೋದಕ್ಕೆ, ಹೊಲಿಯೋದಕ್ಕೆ ಬೇಕಾದ ತರಬೇತಿಯನ್ನು (ಟ್ರೈನಿಂಗ್) ನಾವು ನಮ್ಮ ಅಂಗಗಳಿಗೆ ಕೊಟ್ಟಿರುತ್ತೇವೆ. ಆದರೆ ನಮ್ಮ ಬಾಹ್ಯ ಕರಣಗಳಿಗೆ ಕೊಟ್ಟಂತಹ ಟ್ರೈನಿಂಗ್ ಅನ್ನು ನಾವು ನಮ್ಮ ಅಂತಃಕರಣಗಳಿಗೂ ಕೊಟ್ಟಿದ್ದೇವೆಯೇ? ಅಥವಾ ಕೊಡುವುದಕ್ಕೆ ಆಗ್ತದೆಯೋ..? ನಾಟಿ ಮಾಡೋದು ನಮ್ಮ ಬಾಹ್ಯ ಕರಣದ ಕೆಲಸ, ಓಂದೊದು, ಓದೋದನ್ನು ಅರ್ಥ (ಅಂಡರ್‌ಸ್ಟ್ಯಾಂಡಿಂಗ್) ಮಾಡಿಕೊಳ್ಳೋದು ಅಂತಃ ಕರಣದ ಕೆಲಸ. ಇದನ್ನು ದಯವಿಟ್ಟು ಯಾರೂ ಅಪಾರ್ಥ ಮಾಡಿಕೊಳ್ಳಬಾರದು. ನಾನು ದೈಹಿಕ ಶ್ರಮದ ಕೆಲಸವನ್ನು ಮತ್ತು ಬೌದ್ಧಿಕ ಶ್ರಮದ ಕೆಲಸವನ್ನು ಪರಸ್ಪರ ತುಲನೆ ಮಾಡಿ ಮೌಲ್ಯಮಾಪನದ ಮಾತುಗಳನ್ನು ಆಡುತ್ತಿಲ್ಲ. ಇವೆರಡೂ ಮೂಲತಃ ಬೇರೆ ಬೇರೆ ಕ್ಷೇತ್ರದವುಗಳು. ಇವುಗಳನ್ನು ಪರಸ್ಪರ ಹೋಲಿಸಬಾರದು. ಆದರೆ ಈ ಬಲು ಬಗೆಯ ಕೆಲಸಗಳಲ್ಲಿ ಓದುವ, ಅರ್ಥ ಮಾಡಿಕೊಳ್ಳುವ ಕೆಲಸಗಳು ಹೆಚ್ಚು ಸಂಕೀರ್ಣವಾದ ವಿಷಯಗಳು ಎಂಬುದನ್ನಷ್ಟೇ ಇಲ್ಲಿ ಹೇಳಬಯಸುತ್ತೇನೆ. ಹೊಲಿಯಬಲ್ಲ ಎಲ್ಲರೂ ಟೈಲರ್‌ಗಳಾಗಲಾರರು. ಅಂತೆಯೇ ಓದುವವರೆಲ್ಲರೂ ಓದುಗರೂ ಆಗಲಾರರು. ಈ ಸಣ್ಣ ವಾಗ್ವಾದದ ಹಿನ್ನೆಲೆಯಲ್ಲಿ ಕುವೆಂಪು ಅವರನ್ನು ಓದುವುದು ಹೇಗೆ? ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಎಂಬ ಪ್ರಶ್ನೆಗಳನ್ನು ಎತ್ತಿಕೊಳ್ಳುವುದು ಸೂಕ್ತ.

ಕಾದಂಬರಿ ಎನ್ನುವ ಆಧುನಿಕ ಸಾಹಿತ್ಯ ಪ್ರಕಾರವೊಂದರ ಕುರಿತು ನಾವು ಕಟ್ಟಿಕೊಂಡಿರುವ ಮೀಮಾಂಸಾ ಕ್ರಮವನ್ನು ಮದುಮಗಳು ಕಾದಂಬರಿ ತಬ್ಬಿಬ್ಬುಗೊಳಿಸುತ್ತದೆ. ಮದುಮಗಳು ಕಾದಂಬರಿಯನ್ನು ನೀವು ಕಾದಂಬರಿ ಅಂತಿರೋ, ಕಾವ್ಯ ಅಂತಿರೋ, ಜೀವನದರ್ಶನ ಅಂತೀರೋ, ಅಧ್ಮಾತ್ಮಿಕ ಸಂಗತಿಯೊಂದರ ಸಾಹಿತ್ಯಿಕ ನಿರೂಪಣೆ ಅಂತೀರೋ ನೀವು ಅದನ್ನು ಯಾವ ಹೆಸರಿನಿಂದಲಾದರೂ ಕರೀರಿ. ಅದು ಆ ಸೀಮೆ- ಯೊಳಗೆ ಬಹಳ ಹೊತ್ತು ಇರದೆ ನಿರಂತರ ಚಡಪಡಿಸುವ ಒಂದು ಜೀವ ವಿಶೇಷವಾಗಿದೆ. ಇಂತಹ ಸಜೀವ ಸಾವಯವ ಮಹಾಕಾಯವೊಂದನ್ನು ನಾವು ನಮ್ಮ ನಮ್ಮ ಅನುಕೂ- ಲತೆಗೆ ತಕ್ಕಂತೆ, ನಮ್ಮ ನಮ್ಮ ಅಳತೆಗೆ ತಕ್ಕಂತೆ ಓದುವುದಕ್ಕೆ ತೊಡಗಿದರೆ ಅದು ಕುರುಡರು ಆನೆ ಮುಟ್ಟಿದ ಕತೆಯಂತೆಯೇ ಆಗ್ತದೆ. ಅಂದರೆ ಕುವೆಂಪು ಕಂಡರಿಸಿದ ದಾರ್ಶನಿಕತೆಯ ಅರಿವಿಲ್ಲದಿದ್ದರೆ, ಅಧ್ಯಾತ್ಮಕ್ಕೆ ಮಿಡಿಯುವ ಮನಸ್ಸಿಲ್ಲದಿದ್ದರೆ, ಈ ಲೋಕದ ಚಲನೆಯ ಬಗ್ಗೆ ನಮಗೆ ವಿಸ್ಮಯಾನುಭೂತಿಯ ಆನುಭಾವಿಕ ಪ್ರಜ್ಞೆ ಇಲ್ಲದಿದ್ದರೆ 'ಮಲೆಗಳಲ್ಲಿ ಮದು-ಮಗಳು' ಕಾದಂಬರಿಯನ್ನು ನಾವು ಓದಲಾರೆವು.

ಮದುಮಗಳು ಕಾದಂಬರಿಯನ್ನು ನಿಧಾನವಾಗಿ ಓದುತ್ತಾ ಒಳಗೆ ಹೊಗುವುದೂ ಒಂದೇ. ದಟ್ಟಕಾಡಿನೊಳಗೆ ಹೊಗುವುದೂ ಒಂದೇ. (ದಟ್ಟಕಾಡನ್ನೂ ಪ್ರವೇಶಿಸು

ವವರಿಗೂ ನಿಧಾನಗತಿಯೇ ಅತ್ಯಂತ ಸಮುಚಿತವಾದ ಗತಿ.) ಮದುಮಗಳು ಕಾದಂಬರಿಗೆ ಇರುವ ಬಹಳ ದೊಡ್ಡ ಹಿನ್ನೆಲೆಯೆಂದರೆ ಅದು ಅರಣ್ಯವೇ. ಕಾದಂಬರಿಯಲ್ಲಿ ಅರಣ್ಯದ ವಿವರಣೆಯೇ ಸಮೃದ್ಧವೂ, ಸಮಗ್ರವೂ ಆಗಿದೆ ಮತ್ತು ಅದು ಅಲ್ಲಿಯ ಜನಜೀವನವನ್ನು ಅದ್ವಯವಾದೀ ನೆಲೆಯಲ್ಲಿ ಬೆಸೆದುಕೊಂಡಿದೆ. ಅರಣ್ಯವಿಲ್ಲದಿದ್ದರೆ ಮದುಮಗಳು ಕಾದಂಬರಿಯೇ ಇಲ್ಲವೇನೋ ಎನ್ನುವಷ್ಟು ತೀವ್ರವಾಗಿ ಈ ಕಾದಂಬರಿಯಲ್ಲಿ ಅರಣ್ಯದ ಉಪಸ್ಥಿತಿ ಇದೆ. ಈ ಹಿನ್ನೆಲೆಯಲ್ಲಿ ಕಾದಂಬರಿಯನ್ನು ಸಮೃದ್ಧ, ಸಮಗ್ರ ಮತ್ತು ಅದ್ವಯ ಎಂಬ ಮೂರು ಪರಿಕಲ್ಪನೆಗಳ ಮೂಲಕ ನೋಡ ಬಹುದು. ಕಾಡು ಎಷ್ಟು ದಟ್ಟವಾಗಿದೆ ಎನ್ನುವುದನ್ನು ಕುವೆಂಪು ಅವರ ಮಾತುಗಳ ಮೂಲಕವೇ ಕೇಳಬೇಕು.

> "ಮುಕುಂದಯ್ಯನ ಶೈಶವಪ್ರಜ್ಞೆ ಬರ್ಹಿವಸ್ತುಗಳನ್ನು ಗ್ರಹಿಸಲೂ ಗುರುತಿಸಲೂ ಕಲಿತಂದಿನಿಂದಲೂ ಅವನ ಚಿತ್ತವನ್ನೆಲ್ಲ ಆಕ್ರಮಿಸಿ ತುಂಬಿಬಿಟ್ಟಿದ್ದ ಮಹದ್ ವಸ್ತುವೆಂದರೆ ಮಲೆ, ಕಾಡು. ಅರಣ್ಯಾಚ್ಛಾದಿತವಾಗಿ ಮೇಘಚುಂಬಿಗಳಾಗಿ ನಿಂತಿರುವ ಗಿರಿಶಿಖರ ಶ್ರೇಣಿಗಳ ಮಲೆನಾಡಿನಲ್ಲಿ ಎಲ್ಲಿಯೋ ಕೆಳಗೆ ಒಂದು ಕಣಿವೆಯ ಮೂಲೆಯಲ್ಲಿ ಹೆದರಿ ಹದುಗಿದಂತೆ ಮರಗಳ ನಡುವೆ ಹುದುಗಿರುವ ಮನೆಗಳಲ್ಲಿ ಹುಟ್ಟಿ ಕಣ್ಣುಬಿಡುವ ಮಕ್ಕಳ ಪಾಲಿಗೆ ಆಕಾಶ ಕೂಡ ಕಾಡಿನಷ್ಟು ವಿಸ್ತಾರಭೂಮವಾಗಿ ಕಾಣಿಸುವುದಿಲ್ಲ. ಆಕಾಶಕ್ಕಿಂತಲೂ ಕಾಡೇ ಸರ್ವವ್ಯಾಪಿಯಾಗಿ ತನ್ನ ಅಧಿಕಾರ ವನ್ನು ಸ್ಥಾಪಿಸಿ ಭೂಮಂಡಲ ವನ್ನೆಲ್ಲ ವಶಪಡಿಸಿಕೊಂಡಿರುತ್ತದೆ, ಪೃಥ್ವಿಯನ್ನೆಲ್ಲ ಹಬ್ಬಿ ತಬ್ಬಿ ಆಳುವ ಕಾಡಿನ ದುರ್ದಮ್ಯ ವಿಸ್ತೀರ್ಣ ದಲ್ಲಿ ಎಲ್ಲಿಯೋ ಒಂದಿನಿತಿನಿತೆ ಅಂಗೈಯಗಲದ ಪ್ರದೇಶವನ್ನು ಮನುಷ್ಯ ಗೆದ್ದುಕೊಂಡು ತನ್ನ ಗದ್ದೆ ತೋಟ ಮನೆಗಳನ್ನು ರಚಿಸಿ ಕೊಂಡಿದ್ದಾನೆ, ಅಷ್ಟೇ. ಅದೂ ಕೂಡ ಅವನು ನಿಚ್ಚವೂ ಜಾಗರೂ ಕನಾಗಿ ತಾನು ಗೆದ್ದುಕೊಂಡಿದ್ದನ್ನು ನಿರಂತರವೂ ರಕ್ಷಿಸಿಕೊಳ್ಳುತ್ತಾ ಹೋಗುವುದನ್ನು ಮರೆತನೆಂದರೆ, ಬಹುಬೇಗನೆ ಹಳು ಬೆಳೆದು ಮತ್ತೆ ಅದು ಕಾಡಿನ ವಶವಾಗಿ ಬಿಡುತ್ತದೆ. ಮುಕುಂದಯ್ಯನಿಗಂತೂ ಕಾಡು ಎಂದರೆ ದೇವರಿಗೆ ಸರಿಸಮಾನ ವಾಗಿತ್ತು. ಅಷ್ಟೊಂದು ಭಯಮಿಶ್ರಿತ ಭಕ್ತಿ ಅದರಲ್ಲಿ. ಅವನಿಗೆ ಅದರ ಮುಳ್ಳು, ಕಲ್ಲು ಕೊರಕಲು, ಏರು ಇಳಿತ, ಹುಲಿ-ಹಂದಿ, ಹಾವು ಚೇಳು ನುಸಿ ಇಂಬಳ ಇವೆಲ್ಲದರಿಂದ ಆಗುವ ತೊಂದರೆಯ ಅನುಭವವಿತ್ತು. ಹಾಗೇಯೆ ಹಕ್ಕಿ-ಹೂವು, ಹಣ್ಣು ಚಿಟ್ಟೆ ಜೇನು

ಬೇಟೆ ಇತ್ಯಾದಿಗಳಿಂದ ಒದಗುವ ಆನಂದದ ಅರಿವೂ ಇತ್ತು. ಮಲೆಕಾಡಿನ ಭವ್ಯತೆಯ ಅವನ ಅನುಭವವನ್ನು ಹೆದರಿಕೆ ಎಂದು ವರ್ಣಿಸಲಾಗುತ್ತಿರಲಿಲ್ಲ."

(ಮಲೆಗಳಲ್ಲಿ ಮದುಮಗಳು, ಪುಟ: ೧೨೫)

ಆಕಾಶವೇ ಚಿಕ್ಕದಾಗಿ, ಕಾಡೇ ದೊಡ್ಡದಾಗಿ; ಕಾಡಿನ ಚೂರುಪಾರು ಜಾಗವನ್ನು ಸವರಿ ತನ್ನ ಬದುಕು ಕಟ್ಟಿಕೊಂಡ ಮನುಷ್ಯ ಕಾಡಿನ ಭವ್ಯತೆಯ ಮುಂದೆ ಕುಬ್ಜನಾಗಿ, ಕಾಡೇ ದೇವರಾಗಿ, ತೊಂದರೆಯನ್ನೂ ಆನಂದವನ್ನೂ ಏಕಕಾಲಕ್ಕೆ ಕೊಡುವ ದಿವ್ಯಾನುಭವ ವಾಗಿ; ಕಾಡು ಮದುಮಗಳು ಕಾದಂಬರಿಯಲ್ಲಿ ಮೂಡಿಬಂದಿದೆ. ಆ ಅರ್ಥದಲ್ಲಿ ಕುವೆಂಪುರವರ ಅದ್ವಯವಾದೀ ದಾರ್ಶನಿಕತೆಗೆ ಈ ಕಾಡೇ ಒಂದು ಭವ್ಯವಾದ ರೂಪಕ.

ಭರಮೈ ಹೆಗ್ಗಡೆಯವರಿಂದ ಹಿಡಿದು ನಾಯಿ ಗುತ್ತಿಯವರೆಗೆ ಐತ–ಪೀಂಚಲುವಿ ನಿಂದ ತೊಡಗಿ ಮುಕುಂದಯ್ಯ–ಚಿನ್ನಮ್ಮನವರೆಗೆ ಮತ್ತು ಕಿಲಸ್ತರಿಂದ ಹಿಡಿದು ಹೊನ್ನಾಳಿ ಸಾಬರವರೆಗೆ ಎಲ್ಲರೂ ಈ ಕಾಡಿನ ಮಕ್ಕಳೇ. ಈ ಕಾಡು ಇಲ್ಲದಿದ್ದರೆ ಇಲ್ಲಿಯ ಜನರ ಯಾವ ವ್ಯೂಹವೂ, ಅವರ ಯಾವ ಕನಸೂ, ಅವರ ಯಾವ ಬದುಕೂ ನೆರವೇರಲು ಸಾಧ್ಯವೇ ಇಲ್ಲ. ಹಾಗಾಗಿ ಕಾಡು ಇಲ್ಲಿಯ ಜನರನ್ನು ಪೊರೆಯುವ ಮತ್ತು ಆಗಿಂದಾಗ್ಗೆ ಅವರನ್ನೂ ತರಿದು ಮುಕ್ಕುವ ಕೆಲಸವನ್ನೂ ತಣ್ಣಗೆ ಮಾಡಿಕೊಂಡು ಬಂದಿದೆ. ಕೇವಲ ತನ್ನ ಅಸ್ತಿತ್ವ ಮಾತ್ರದಿಂದಲೇ ಮಾನುಷ ಜೀವನದ ಅನೇಕಾನೇಕ ಅಲ್ಲೋಲಕಲ್ಲೋಲ ಗಳಿಗೆ ಕಾರಣೀಭೂತವಾಗುವ ಈ ಕಾಡು ಮದುಮಗಳು ಕಾದಂಬರಿಯ ಜೀವದ್ರವ್ಯವೂ ಹೌದು. ಪೋಷಕ ದ್ರವ್ಯವೂ ಹೌದು.

ಕಾಡು ಮತ್ತು ಬೇಟೆ ಇವರೆಡೂ ಪರಸ್ಪರ ಅನ್ಯೋನ್ಯವಾದ ಮತ್ತು ಪರಸ್ಪರಾನ್ವಯ ಗೊಳ್ಳುವಂತಹ ಸಂಗತಿಗಳು. ಕಾದಂಬರಿಯ ಬೇರೆ ಬೇರೆ ಸನ್ನಿವೇಶಗಳಲ್ಲಿ ಈ ಬೇಟೆ ಒಂದು ರೂಪಕವಾಗಿಯೂ ಕಂಡು ಬರುತ್ತದೆ. ಹೊನ್ನಾಳಿ ಸಾಬರು ಗಬ್ಬದ ಆಡನ್ನು ಕಾಡಿನೊಳಗೆ ಕುಯ್ಕೊಂಡು ಹೆಂಗೆ ತಿಂದರೋ ಹಂಗೇನೇ ಅವರು ಕಾಡಿನೊಳಗೆ ಹಲಸಿನ ಹಣ್ಣನ್ನೂ ತಿನ್ನಬಲ್ಲರು. ಕಾವೇರಿಯೆಂಬ ಅಮಾಯಕ ಹುಡುಗಿಯನ್ನೂ ಉಂಗುರದ ಮಿಕವೊಡ್ಡಿ ಕೆಡಹಿ ತಮ್ಮ ಹಸಿವು ತೀರಿಸಬಲ್ಲವರು. ತನಗೆ ಬರಬೇಕಾದ ಹೆಣ್ಣು ಗುತ್ತಿಯ ಪಾಲಾದಳಲ್ಲ ಎಂದು ಬಚ್ಚ ಗುತ್ತಿಯನ್ನು ಬೇಟೆಯಾಡಲು ಹೊಂಚುವುದೂ ಇದೇ ಕಾಡಿನಲ್ಲಿ. ಅಂದರೆ ಮನುಷ್ಯರು ಮನುಷ್ಯರನ್ನೇ ಬೇಟೆಯಾಡುವ ಪ್ರವೃತ್ತಿಯನ್ನು ಕುವೆಂಪು ತೋರಿಸುತ್ತ ಕಾಡಿಗೂ ಊರಿಗೂ ವ್ಯತ್ಯಾಸವೇ ಇಲ್ಲದ ಒಂದು ಚಿತ್ರವನ್ನು ಕೆತ್ತುತ್ತಿದ್ದಾರೆ.ಈ ಅರ್ಥದಲ್ಲಿ ಕುವೆಂಪುರವರ ಮದುಮಗಳು ಕಾದಂಬರಿ ಕಾಡಿನ ಕಥೆಯೇ ಹೌದು. ಕಾಡು–ನಾಡು, ಮೃಗ–ಮನುಷ್ಯ, ಬೇಟೆ–ಬೇಟ ಇವು ಯಾವುವೂ ಕುವೆಂಪು ಅವರಿಗೆ ಪರಸ್ಪರ ಪ್ರತ್ಯ–ಪ್ರತ್ಯೇಕವಾದ ಸಂಗತಿಗಳಲ್ಲ. (೧೯೮೬) ತಮ್ಮ ಸಂದರ್ಶನ

ವೊಂದರಲ್ಲಿ ಕುವೆಂಪು ಒಂದು ಮಾತನ್ನು ಹೇಳುತ್ತಾರೆ : I am not a mere artist, Predominantly and Primarily I am a Philosopher (1986) ಈ ಮಾತು ಬಹಳ ಮುಖ್ಯ ಯಾಕೆಂದರೆ, ಒಬ್ಬ ಫಿಲಸಾಫರ್‌ಗೆ ಮಾತ್ರ ಎಲ್ಲವನ್ನೂ ಒಳಗೊಳ್ಳುವ ಸಮಗ್ರ ದೃಷ್ಟಿ ಸಿದ್ಧಿಸೋದು. ಹಾಗಾಗಿ ಮದುಮಗಳು ಕಾದಂಬರಿಯನ್ನು ನಾವು ಅಧ್ಯಾತ್ಮದ ಸ್ಪರ್ಶವಿಲ್ಲದೆ, ಅದ್ವಯವಾದೀ ತಾತ್ತ್ವಿಕ ಹಿನ್ನೆಲೆಯಿಲ್ಲದೆ ಅರ್ಥ ಮಾಡಿಕೊಳ್ಳಲಾರೆವು. ಓದಲಾರೆವು.

ಮನುಷ್ಯರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಪ್ರೀತಿ-ಪ್ರೇಮದ ಮರ್ಮವನ್ನು ಅರಿಯುತ್ತ, ಮನುಷ್ಯರನ್ನು ಗೋಳಾಡಿಸುವ ಮತ್ತು ಅಟ್ಟಾಡಿಸುವ ಬದುಕಿನ ಪ್ರಾಣಮೀಮಾಂಸೆಯನ್ನು ಅನ್ವೇಷಿಸುವ ಮಾರ್ಗದ ಪಯಣಿಗರಾದ ಕುವೆಂಪು ಸಹಜವಾಗಿಯೇ ಈ ಮಾರ್ಗದಲ್ಲಿರಬಹುದಾದ ಪ್ರಗತಿಪರ-ಸಾಂಪ್ರದಾಯಿಕ, ಆಧುನಿಕ-ಅನಾಧುನಿಕ, ಬ್ರಾಹ್ಮಣ-ಶೂದ್ರ ಇತ್ಯಾದಿ ದ್ವಂದ್ವಗಳನ್ನು ಹರಿದು ಹಾದು ಕೊನೆಗೆ ಸಜೀವ-ನಿರ್ಜೀವ ಎಂಬ ಬೇಧವೂ ಇಲ್ಲದ ವಿಶ್ವದ ಸಮಗ್ರತೆಯ ರಹಸ್ಯವನ್ನು ಅರ್ಥಮಾಡಿಕೊಳ್ಳುವುದಕ್ಕಾಗಿಯೇ ಈ ಮದುಮಗಳು ಕಾದಂಬರಿಯನ್ನು ಬರೆದರೇನೋ ಎಂದು ಅನ್ನಿಸಿಬಿಡುತ್ತದೆ. ಹೀಗನ್ನಿಸುವುದಕ್ಕೆ ಮುಖ್ಯ ಕಾರಣವೊಂದು ಈ ಕಾದಂಬರಿಯಲ್ಲಿದೆ. ಅದೇನೆಂದರೆ, ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಹೂವಯ್ಯ ಓರ್ವ ಪುರುಷೋತ್ತಮ; ಶ್ರೀ ರಾಮಾಯಣ ದರ್ಶನಂನಲ್ಲಿ ರಾಮ ಓರ್ವ ಮರ್ಯಾದಾ ಪುರುಷೋತ್ತಮ. ಆದರೆ ಬಹಳ ದೊಡ್ಡ ವಿಕಾಸ ಅಂದರೆ; ಕಾನೂರು ಮತ್ತು ರಾಮಾಯಣ ಬರೆದಾದ ಮೇಲೆ ಮದುಮಗಳು ಕಾದಂಬರಿಯನ್ನು ಕುವೆಂಪು ಬರೆಯುವಾಗ ಅವರು ಇಲ್ಲಿ ಯಾವ ನಾಯಕನನ್ನಾಗಲೀ; ಯಾವ ಪುರುಷೋತ್ತಮನನ್ನಾಗಲೀ ಸೃಷ್ಟಿಸೋದಿಲ್ಲ. ಮನುಷ್ಯ ಬದುಕಿನಲ್ಲಿ ನಮಗೆ ಗೊತ್ತಿದ್ದೋ ಗೊತ್ತಿಲ್ಲದೇನೋ ಅನೇಕಾನೇಕ ಕ್ಷುದ್ರ ಮತ್ತು ಕ್ಷುಲ್ಲಕ ವಿಷಯಗಳಲ್ಲಿ ನಾವೆಲ್ಲ ಈಜಾಡಿ-ಕಾದಾಡಿ ಬಂದಿರೋದರಿಂದ ಶುದ್ಧ ಮರ್ಯಾದೆ ಅಂತ ಇರೋದಕ್ಕೆ ಸಾಧ್ಯ ಇಲ್ಲ ಎನ್ನುವುದನ್ನು ಕುವೆಂಪು ಮದುಮಗಳು ಕಾದಂಬರಿಯಲ್ಲಿ ನಿರೂಪಿಸುತ್ತಾ ಹೋಗ್ತಾರೆ. ಹಾಗಾಗಿ ಈ ಕಾದಂಬರಿಯಲ್ಲಿ ಮರ್ಯಾದಾ ಪುರುಷೋತ್ತಮರಿಲ್ಲ. ಸಾಮಾನ್ಯ ಮನುಷ್ಯ ಬದುಕಿನ ಒಳಜಗತ್ತು ಎಷ್ಟು ವೈವಿಧ್ಯಮ ಯವೂ, ಜೀವಂತವೂ, ಕ್ರೂರವೂ ಆಗಿದೆ. ಎಷ್ಟೊಂದು ಬಗೆಯ ತಳಮಳಗಳ, ವಿರೋ ಧಾಭಾಸಗಳ, ದಿಗ್ಭ್ರಮೆಗಳ, ಪೀಕಲಾಟಗಳ ಸಂಕೀರ್ಣ ಸಂದರ್ಭ ಸೃಷ್ಟಿಯಾಗಿ ಮನುಷ್ಯ ಹೇಗೆ ಹತಪ್ರಭನಾಗುತ್ತಾನೆ. ಹತನಾಗುತ್ತಲೇ ಹೇಗೆ ಬೆಳಗುತ್ತಾನೆ ಅಥವಾ ಹೇಗೆ ಮುದುಡುತ್ತಾನೆ ಎನ್ನುವ ಅನೇಕಾನೇಕ ಮನುಷ್ಯ ಚೇತನಗಳ ಒಂದು ಮಹಾಒಕ್ಕೂಟ ವನ್ನು ಈ ಕಾದಂಬರಿ ನಮಗೆ ಕಾಣಿಸುತ್ತದೆ. ಅದಕ್ಕೆ ಬಹಳ ಪ್ರಬಲವಾಗಿ ಒದಗಿ ಬಂದಿರುವ ಪರಿಪ್ರೇಕ್ಷ್ಯವೇ ದಟ್ಟಕಾಡು.

'ಶ್ರೀಸಾಮಾನ್ಯವೇ ಭಗವದ್ ಮಾನ್ಯಂ' ಎಂದು ಘೋಷಿಸಿದವರು ಕುವೆಂಪು. ಸಾಮಾನ್ಯ ಮನುಷ್ಯನೊಬ್ಬನ ಉಪಸ್ಥಿತಿಯನ್ನೂ ದಿವ್ಯ ಉಪಸ್ಥಿತಿಯನ್ನಾಗಿ ಕುವೆಂಪು ರೂಪಾಂತರಗೊಳಿಸಬಲ್ಲರು. ನಾನು ಈ ಮಾತನ್ನು ಕಾದಂಬರಿಯ ಗಡ್ಡದಯ್ಯನನ್ನು ನೆನಪು ಮಾಡಿಕೊಂಡು ಹೇಳುತ್ತಿದ್ದೇನೆ. ನಾವಿಂದು ಯಾವುದನ್ನು ಆಧುನಿಕ ಎಂದು ಹೇಳುತ್ತೇವೆಯೋ ಆ ಆಧುನಿಕದ ಅರ್ಥವನ್ನು ಆಧುನಿಕ ಎಂಬ ಪದ ಹುಟ್ಟಿಕೊಂಡ ಯುರೋಪ್‌ನ ಜ್ಞಾನಮೀಮಾಂಸೆಯೇ ಅವಾಕ್ಕಾಗುವಂತೆ ಕುವೆಂಪು ಇಲ್ಲಿ ಚಿತ್ರಿಸಿದ್ದಾರೆ ಮತ್ತು ವಿಸ್ತರಿಸಿದ್ದಾರೆ.

'ಶ್ರೀರಾಮಾಯಣ ದರ್ಶನಂ'ನ ಒಂದು ಮುಖ್ಯವಾದ ಸಂದರ್ಭವನ್ನು ಇಲ್ಲಿ ನೆನಪು ಮಾಡಿಕೊಳ್ಳುವುದು ಹೆಚ್ಚು ಸೂಕ್ತವಾಗಬಲ್ಲುದು. ಕಾಡಿನ–ಪಚ್ಚೆ–ಪೈರಿನ–ಹುಲ್ಲು–ಕಡ್ಡಿಯ ವಿವರಣೆ ಮಾಡುತ್ತ ಬರುವ ಸಂದರ್ಭದಲ್ಲಿ ಕುವೆಂಪು ಗರಿಕೆಯ ಹುಲ್ಲಿನ ಎಸಳಿನ ಮೇಲೆ ನಿಂತಿರುವ ನೀರಹನಿಗಳು ಶ್ರೀರಾಮನ ಕಿರೀಟದಲ್ಲಿ ಪೋಣಿಸಿದ ಮುತ್ತುಗಳಂತೆ ಕಾಣುತ್ತಿದ್ದವು ಎಂದು ಬರೆಯುತ್ತಾರೆ. ಅಂದರೆ ಕುವೆಂಪುಗೆ ಪ್ರಾಕೃತಿಕವಾದ ಗರಿಕೆ ಹುಲ್ಲಿನ ಮೇಲಿನ ನೀರಹನಿಗೂ ಶ್ರೀರಾಮ ಕಿರೀಟದ ಮುತ್ತಿನ ಮಾಲೆಗೂ ವ್ಯತ್ಯಾಸವೇ ಇಲ್ಲ. ಅದ್ವಯವಾದೀ ಜೀವನದರ್ಶನವೆಂದರೆ ಇದೇ ಅಲ್ಲವೇ.? ಈ ಅದ್ವಯವಾದೀ ಚಿಂತನೆಯ ಮಹಾರೂಪಕವೇ ಕಾಡು. ಡಿಎಸ್‌ಎನ್ ಅವರು 'ನಮ್ಮ ಪರಂಪರೆಯಲ್ಲಿ ವಿಷಮ– ತೆಗಳು ಇವೆಯೇ ಹೊರತು ವಿಚ್ಛಿನ್ನತೆ ಇಲ್ಲ.' ಎಂಬ ಮಾತನ್ನು ಹೇಳುತ್ತಾರೆ. ಇದು ಸಮ್ಯಕ್ ದೃಷ್ಠಿಯೂ ಹೌದು. ಇದು ಕುವೆಂಪು ಅವರಲ್ಲಿ ನಿಹಿತವಾಗಿತ್ತು. ಹಾಗಾಗಿ ಅವರಿಗೆ ಹೊಲೆಯನಾದ ಗುತ್ತಿ ಬೇರೆ ಅಲ್ಲ. ಬ್ರಾಹ್ಮಣನಾದ ಮಂಜ ಭಟ್ಟ ಬೇರೆ ಅಲ್ಲ. ಒಕ್ಕಲಿಗನಾದ ವೆಂಕಟಪ್ಪ ನಾಯಕ ಬೇರೆ ಅಲ್ಲ. ಸಮಾಜವಾದ ಬೇರೆ ಅಲ್ಲ. ಆಧ್ಯಾತ್ಮಿಕತೆ ಬೇರೆ ಅಲ್ಲ. ಇವೆಲ್ಲವನ್ನೂ ಕಥನ ಮಾರ್ಗದ ಮೂಲಕ ನಮಗೆ ಮನಗಾಣಿಸಿಕೊಟ್ಟದ್ದೇ ಕುವೆಂಪು.

ಕುವೆಂಪುರವರ ಚಿಂತನೆಯನ್ನು ಅವರೇ ಪರಿಕಲ್ಪಿಸಿದ 'ಮನುಜಮತ, ವಿಶ್ವಪಥ', 'ಸರ್ವೋದಯ', 'ಸಮನ್ವಯ' ಮತ್ತು 'ಪೂರ್ಣದೃಷ್ಟಿ' ಎಂಬ ಐದು ಪರಿಕಲ್ಪನೆಗಳಲ್ಲಿ ನೋಡ ಬೇಕು ಎಂದು ಅನೇಕ ವಿದ್ವಾಂಸರು ಹೇಳುತ್ತಾರೆ. ಅವರ ಕೊನೆಯ ಪರಿಕಲ್ಪನೆ ಯಾಗಿರುವ ಪೂರ್ಣದೃಷ್ಟಿ ಎಂದರೆ ಏನು..? ಈ ಪೂರ್ಣದೃಷ್ಟಿ ನಮಗೆ ಸಿದ್ಧಿಯಾಗದೇ ಹೋದರೆ ನಾವು ಮನುಜಮತದಿಂದ ತೊಡಗಿ ಸಮನ್ವಯದವರೆಗೆ ಏನನ್ನಾದರೂ ಕಾಣಬಲ್ಲೆವೇ..? ಪೂರ್ಣದೃಷ್ಟಿಯೆಂದರೆ ಅದು ಅದ್ವಯವಾದೀ ತಾತ್ತ್ವಿಕತೆಯೇ ಆಗಿದೆ. ಈ ಅದ್ವಯವಾದೀ ತಾತ್ತ್ವಿಕತೆಯನ್ನು ಮೂರ್ತರೂಪಕ್ಕಿಳಿಸಿ ಪ್ರತಿಯೊಂದು ಸಣ್ಣಪುಟ್ಟ ವಿವರಗಳನ್ನೂ ರೂಪಕಗಳನ್ನಾಗಿ ಪರಿವರ್ತಿಸಿ ಕಟ್ಟಿದ ಮಹಾನ್ ರೂಪಕಾತ್ಮಕ ಕಾದಂಬರಿಯೇ ಮದುಮಗಳು. ಒಂದು ಹುಳು ಕೂಡ ದೇವರಲ್ಲಿ ಹೋಗಿ ಸೇರುತ್ತದೆ ಎಂಬ ವಿವೇಕಾನಂದರ ಮಾತನ್ನು ಉಲ್ಲೇಖಿಸುವ ಕುವೆಂಪುರವರಿಗೆ ಈ ಪೂರ್ಣ

ಸಾಯುಜ್ಯದ ನಿಸರ್ಗಲೀಲೆಯಲ್ಲಿ ಅಪಾರ ವಿಶ್ವಾಸವಿತ್ತು. ಲೋಕದ ಚಲನೆ ಹೀಗಿರದೆ ಇನ್ನೊಂದು ರೀತಿಯಲ್ಲಿ ಇರಲು ಸಾಧ್ಯವಿಲ್ಲ ಎನ್ನುವುದು ಅವರ ನಂಬುಗೆಯಾಗಿತ್ತು.

ಒಂದು ಕೇಂದ್ರ ಮತ್ತು ಉಳಿದವುಗಳು ಪರಿಧಿ ಎಂಬ ಇಂದ್ರಿಯ ದೃಗ್ಗೋಚರ ಲೋಕ ಜ್ಞಾನವನ್ನು ಪಡೆದ ನಮಗೆ; ಇಂದ್ರಿಯ ದೃಗ್ಗೋಚರ ಲೋಕಜ್ಞಾನ ಮಾತ್ರವೇ ದೊಡ್ಡದು, ಬೆಲೆಕೊಡಬೇಕಾದದ್ದೂ ಅದಕ್ಕೆ ಮಾತ್ರ ಎಂದು ಭ್ರಮಿಸಿಕೊಂಡಿರುವ ನಮಗೆ; ಭೂಮ ವಾದ ಇನ್ನೊಂದು ಜಗತ್ತನ್ನು ಅರ್ಥಮಾಡಿಕೊಳ್ಳಲು ಸಾಧ್ಯ ಇಲ್ಲ. ಅಮೂರ್ತದ ಸಂಗತಿ ಗಳಿಗೆ ಮೂರ್ತದ ಪ್ರಶ್ನೆಗಳನ್ನು ಕೇಳುವುದೇ ಮೂರ್ಖತನವಲ್ಲವೇ? ಈ ಕಾದಂಬರಿ ಯಲ್ಲಿ ಕೇಂದ್ರ ಮತ್ತು ಪರಿಧಿಗಳ ಪ್ರಶ್ನೆಯನ್ನು ಎತ್ತುವವರು ಮನುಷ್ಯ ಬದುಕಿನ ಬಗೆಗೇನೇ ಬಹಳ ಅಸಮಂಜಸವಾದ ನಿಲುವನ್ನು ಹೊಂದಿದ್ದಾರೆ. ಈ ಕಾದಂಬರಿಯಲ್ಲಿ ಎಲ್ಲವೂ ಏಕಕಾಲಕ್ಕೆ ಕೇಂದ್ರವೂ ಹೌದು ಪರಿಧಿಯೂ ಹೌದು. ನಮಗೆ ಗೊತ್ತಿರುವ ಸೌರಮಂಡ ಲದ ಜ್ಞಾನದ ಹಿನ್ನೆಲೆಯಲ್ಲಿ ನಾವು ಸೂರ್ಯನನ್ನು ಕೇಂದ್ರ ಎಂದೂ ಉಳಿದವುಗಳನ್ನು ಪರಿಧಿ ಎಂದೂ ಗುರುತಿಸುತ್ತೇವೆ. ಆದರೆ ನಮಗೆ ದೃಗ್ಗೋಚರವಾಗದ, ನಮಗೆ ಊಹಿಸಲೂ ಸಾಧ್ಯವಾಗದ, ಈ ಅಗಾಧ ವಿಶ್ವದ ಸನ್ನಿ ವೇಶದಲ್ಲಿ ಕೇಂದ್ರ ಯಾವುದು . .? ಪರಿಧಿ ಯಾವುದು..?

ನನ್ನ ಪ್ರಕಾರ ಈ ಕಾದಂಬರಿ, ಅದ್ವೈತ ದರ್ಶನದ ತತ್ತ್ವಜ್ಞಾನೀಯ ನಿಬಿಡತೆಯನ್ನು ಹೃದ್ಯ ನಿರೂಪಣೆಯಲ್ಲಿ ಕಥನವಾಗಿಸಿದ ಕೃತಿ. ಅತ್ತ ಮಹಾಸತಿಯನ್ನೂ ಚಿತ್ರಿಸದೆ, ಇತ್ತ ಮರ್ಯಾದಾ ಪುರುಷೋತ್ತಮನನ್ನೂ ಕೆತ್ತದೆ ಸಾಮಾನ್ಯ ಮನುಷ್ಯರ ದಿನನಿತ್ಯದ ದಂದುಗ ವನ್ನು ಸೂಕ್ಷ್ಮಾತಿಸೂಕ್ಷ್ಮ ವಿವರಗಳೊಂದಿಗೆ ಪೋಣಿಸುತ್ತಾ ನಮ್ಮ ದೇಹ ಹೇಗೆ ಒಂದ ಕ್ಕೊಂದು ಹೆಣೆದುಕೊಂಡಿರುವುದರಿಂದ ಒಂದು ಅಖಂಡವಾದ ದೇಹವಾಗಿದೆಯೋ, ನಮ್ಮ ಜಗತ್ತು ಹೇಗೆ ಒಂದನ್ನೊಂದು ಬೆಸೆದುಕೊಂಡಿರುವುದರಿಂದ ಒಂದು ಸಮಗ್ರವಾದ ವಿಶ್ವವಾಗಿದೆಯೋ; ತದ್ವತ್ ಹಾಗೆಯೇ ಸಂದುಗಡಿಯದೆ ರೂಪುಗೊಂಡಿರುವ ಈ ಕಾದಂ ಬರಿಯನ್ನು ಓದ ಬೇಕಾಗಿರುವುದು ಇದರ ಕಥೆಗಾಗಿ ಅಲ್ಲ. ಇದರ ವಿವರಗಳಿಗಾಗಿ. ಹಾಗಾಗಿ ವಿವರಗಳಿಂದ ಸೊಕ್ಕಿದೆ ಎನ್ನುವುದು ಇದರ ಅವಲಕ್ಷಣ ಅಲ್ಲ. ವಿವರಗಳೇ ಇದರ ಸಲ್ಲಕ್ಷಣವೂ ಸಹಜಲಕ್ಷಣವೂ ಆಗಿದೆ.

ನಿಬಿಡವಾಗಿರುವ ಮತ್ತು ಸಂಕೀರ್ಣವಾಗಿರುವ ಈ ಕೃತಿ, ಇಲ್ಲಿಯ ಮನುಷ್ಯ ಸಂಬಂ ಧಗಳು, ಅವರ ಭಾವೋದ್ವೇಗಗಳು, ಅವರ ಚಿತ್ತವಿಕಾರಗಳು, ಅವರು ಮಾಡಿ ಕೊಳ್ಳುವ ಸಂಬಂಧಗಳು-ಕೂಡಿಕೊಳ್ಳುವ ಜಾಗಗಳು, ಅನ್ಯಾನ್ಯ ಜಾತಿ-ಮತಗಳ ಜೊತೆಗೆ ಸಮಯ -ಸಂದರ್ಭಕ್ಕನುಗುಣವಾಗಿ ಮತ್ತು ಜಾಯಮಾನಕ್ಕನುಗುಣವಾಗಿ ನೆರವೇರಿ ಸುವ ನೆಂಟ ಸ್ತಿಕೆಗಳು, ಇಲ್ಲಿಯ ದಟ್ಟ ಅರಣ್ಯಗಳು, ದನಗೋಳು ಮಳೆಗಳು, ಭೋರ್ಗ ರೆದು ಹರಿವ ಹಳ್ಳ-ಕೊಳ್ಳಗಳು, ಮೃಗಯಾವ್ಯಾಜಗಳು ಇವು ಯಾವುವೂ ನೇರಾನೇರ ಕನ್ನಡ ಸಂಸ್ಕೃತಿ

ಯದ್ದಷ್ಟೇ ಅಲ್ಲ. ಇಲ್ಲಿಯ ಮನುಷ್ಯರು ಕನ್ನಡ ಆಡುತ್ತಾರೆ ಎಂಬುದನ್ನು ಹೊರತು ಪಡಿಸಿದರೆ ಇದು ಪ್ರಪಂಚದ ಯಾವುದೇ ಅರಣ್ಯಭಾಗದಲ್ಲಿ, ಮಲೆಯ ತಪ್ಪಲು ಗಳಲ್ಲಿ ಸಂಭವಿಸಬಹುದಾದ ಮನುಷ್ಯ ದೈನಿಕದ ಉಪದ್ವ್ಯಾಪಗಳೇ ಸರಿ. ಕನ್ನಡ ದ್ದಾಗಿಯೂ ಕೇವಲ ಕನ್ನಡದ್ದಷ್ಟೇ ಆಗಿ ಉಳಿಯ ಬಯಸದ ಈ ಮಹಾಕೃತಿಯನ್ನು ಕಾಡು ಪೊರೆದಿರು ವುದೂ ಅಷ್ಟೇ ಸಹಜವಾಗಿದೆ. ಕಾಡು ಇಲ್ಲದಿದ್ದರೆ ಈ ಕಾದಂಬರಿಗೆ ಅಸ್ತಿತ್ವವೇ ಇಲ್ಲ. ಕಾಡನ್ನು ಯಾವ ಭಾಷೆಯಲ್ಲಿ ನೀವು ಹೇಗೆ ಕರೆದರೇನು.? ಕಾಡು ಕಾಡೇ. ಅದರ ಅಗಮ್ಯದ ಅನುಭವ ಗಮಿಸುವವನ ಅನುಭವಕ್ಕೇ ಬರಬೇಕು. ನಾವು ನಮಗೀಗ ಚೂರುಪಾರು ಉಳಿದಿರುವ ಕಾಡನ್ನೂ ಉಳಿಸಿಕೊಳ್ಳದಿದ್ದರೆ ಇನ್ನು ಐವತ್ತು ವರ್ಷಗಳಲ್ಲಿ ನಮ್ಮದೇ ಕನ್ನಡದ ಜನರಿಗೆ ಮದುಮಗಳು ಕಾದಂಬರಿ ಚೀನೀ ಯಾತ್ರಿಕ ಹ್ಯೂಯೆನ್ ತ್ಸಾಂಗ್‌ನ ಪ್ರವಾಸೀ ಬರವಣಿಗೆ ಎಂದು ಅನ್ನಿಸಿದರೂ ಆಶ್ಚರ್ಯವಿಲ್ಲ.

ವನಗಮನದ ಮತ್ತು ಅರಣ್ಯವಾಸದ ಎರಡು ಮುಖ್ಯ ನಿದರ್ಶನಗಳ ಮೂಲಕ ಈ ಚರ್ಚೆಯನ್ನು ಮುಗಿಸಬಹುದು. ನಮ್ಮ ಪರಂಪರೆಯ ಭಾಗವಾಗಿರುವ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಕಾವ್ಯಗಳ ನಾಯಕರುಗಳು ಕಾಡಿನಲ್ಲಿ ವಾಸವಾಗುವ ಪ್ರಕರಣವನ್ನು ಕಾಣುತ್ತೇವೆ. ಆದರೆ ಅಲ್ಲಿ ಬರುವ ಕಾಡು ನಾಡನ್ನಾಳುವ ದೊರೆಗೆ ಅಮೋಘವಾದ ಜೀವನಾನುಭವವನ್ನು ಕೊಡುವುದಕ್ಕಾಗಿ; ಆತ ಮಾಗುವುದಕ್ಕಾಗಿ, ಆತನ ವ್ಯಕ್ತಿತ್ವವನ್ನು ಪುಟಕ್ಕಿಟ್ಟ ಚಿನ್ನದಂತೆ ರೂಪಿಸುವುದಕ್ಕಾಗಿ ಹೊಗಬೇಕಾದ ಕಾಡು ಆಗಿದೆ. ಆದರೆ ಪುಟ್ಟಪ್ಪನವರು ಮದುಮಗಳು ಕಾದಂಬರಿಯಲ್ಲಿ ಕಂಡರಿಸಿದ ಕಾಡು; ಹೊಗಬೇಕಾದ ಕಾಡಲ್ಲ, ಬದುಕುವುದಕ್ಕಾಗಿ ಹರಸಾಹಸ ಪಡುತ್ತಾ ಏಗಬೇಕಾದ ಕಾಡು. ಹೋರಾಟವಿಲ್ಲದೇ ಬಾಳ್ವೆಯೇ ದುಸ್ಸಾಧ್ಯ ಎಂಬಂತಹ ಕಾಡು. ಅಂತಹ ಕಾಡಿನಲ್ಲಿ ಮನುಷ್ಯರು ಮೃಗಗಳಂತೆಯೂ ಮೃಗಗಳು ಮನುಷ್ಯರಂತೆಯೂ ಮೃಗ–ಮನುಷ್ಯರಿಗೆ ಪರಸ್ಪರ ವ್ಯತ್ಯಾಸವೇ ಇಲ್ಲದಂತೆಯೂ ಬದುಕುವುದಕ್ಕೆ ಸಾಧ್ಯವಿದೆ.

ಕಾಡನ್ನು ಅರ್ಥ ಮಾಡಿಕೊಳ್ಳದವರು ಮದುಮಗಳು ಕಾದಂಬರಿಯನ್ನು ಅರ್ಥ ಮಾಡಿಕೊಳ್ಳಿಯಾರೇ.? ಮನುಷ್ಯರನ್ನು ಅರ್ಥಮಾಡಿಕೊಳ್ಳದವರು ಮದುಮಗಳು ಕಾದಂಬರಿಯನ್ನು ಹೇಗೆ ಓದಬಲ್ಲರು . .? ನಾವು ಬದುಕುತ್ತಿರುವ ಸಮಾಜವನ್ನು ಎಡಬಲ ಎಂದು ಈಗಾಗಲೇ ವಿಭಜಿಸಿಕೊಂಡಿರುವವರು ಈ ಕಾದಂಬರಿಯನ್ನು ಓದುವ ಪರಿ ಹೇಗಿದ್ದೀತು . . ? ಈ ಕಾದಂಬರಿಯನ್ನು ಓದಿದ ಮೇಲೆ, ಇದರ ಕುರಿತು ಇಷ್ಟು ಯೋಚನೆ ಮಾಡಿದ ಮೇಲೆ, ಈ ಕಾದಂಬರಿಯನ್ನು ಅರ್ಥ ಮಾಡಿಕೊಳ್ಳುವುದೆಂದರೆ ನಮ್ಮ ಜನರನ್ನು ಮತ್ತು ಅವರ ಬಾಳ್ವೆಯನ್ನು ಅರ್ಥಮಾಡಿಕೊಳ್ಳುವುದು ಹಾಗೂ ನಮ್ಮ ನಮ್ಮ ಚೌಕಟ್ಟುಗಳನ್ನು ವಿಸರ್ಜಿಸುವುದು ಎಂದು ಹೇಳಿದ ಮೇಲೂ ಪರಿಹಾರವಾಗದೆ ಉಳಿದಿರುವ ಪ್ರಶ್ನೆ ಒಂದೇ. ಓದುವುದು ಎಂದರೆ ಏನು . . ?

೮. 'ಮಲೆಗಳಲ್ಲಿ ಮದುಮಗಳು': ಸ್ತ್ರೀತ್ವದ ಶೋಧನೆ

– ವಿನಯಾ ಒಕ್ಕುಂದ

'ಮಲೆಗಳಲ್ಲಿ ಮದುಮಗಳು' ನಿಸ್ಸಂಶಯವಾಗಿಯೂ ಕನ್ನಡದ ಕ್ಲಾಸಿಕ್ ಕೃತಿ. ಕೃತಿ ರಚನೆಗೊಂಡು ಅರ್ಧ ಶತಮಾನ ಕಳೆದಿದೆ. ಅದೇ ಆಗ ಕುವೆಂಪು, ಶ್ರೀರಾಮಾಯಣದ ಮಹೋನ್ನತ ದರ್ಶನದಿಂದ ಹೊರಹೊಮ್ಮಿದ್ದರು. ಮದುಮಗಳು ರಚನೆಯ ಹೊತ್ತಿಗೆ ತನ್ನ ಪ್ರಜ್ಞಾಪಾತಳಿಯಲ್ಲಿಯೆ ಮಹತ್ವದ ಪಲ್ಲಟವು ಸಂಭವಿಸಿತ್ತೆಂದು ಹೇಳಿಕೊಂಡಿದ್ದಾರೆ. ಯಾವುದೂ ಮುಖ್ಯವಲ್ಲ, ಯಾವುದೂ ಅಮುಖ್ಯವಲ್ಲ ಎಂಬ ತಿಳಿವಿನ ಬೆಳಕು, ಪಿತೃಪ್ರಧಾನತೆಯ ಅಪಾಯವನ್ನು ಕಾಣಿಸಿತ್ತು. ಇದು ಸ್ತ್ರೀತ್ವದ ಶೋಧನೆಯ ತ್ರಾಣ ವಾಯಿತು. ಸಮುದಾಯದ ಬದುಕು ಅಂತರ್ಗತಗೊಳಿಸಿಕೊಂಡು ಬಂದ ಜೀವನ ವಿವೇಕದ ಮೂಲಚೂಲಗಳ ಅನ್ವೇಷಣೆಯ ಪ್ರೀತಿಯಲ್ಲಿ ರೂಪುಗೊಂಡ ಕೃತಿಯಿದು. ಕೃತಿ ರಚನೆಯಂತೆಯೆ ಕೃತಿ ಆಸ್ವಾದನೆಯೂ ಒಂದು ಸೃಷ್ಟಿಕಾರ್ಯ. "ಕಾದಂಬರಿಯು ಓದುವವರ ಪ್ರತಿಭೆಯಲ್ಲಿ ಮತ್ತೊಮ್ಮೆ ಸೃಷ್ಟಿಯಾಗಬೇಕು" ಎನ್ನುತ್ತಾರೆ ಕುವೆಂಪು. ಆದರೆ ಅಂತಹ ಮರುಸೃಷ್ಟಿಗೆ ಕೃತಿಯ ಸಶಕ್ತತೆಯೇ ಮೊದಲ ಅರ್ಹತೆ. ಈ ಮಾತನ್ನು 'ಮದು ಮಗಳು' ಸಾಕ್ಷೀಕರಿಸಿದೆ. ಅದೆಷ್ಟೋ ಮರು ಓದುಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತ ಓದುವ ದಾರಿಗಳನ್ನು ತೆರೆದಿದೆ ಮತ್ತು ಸಿದ್ಧ ಓದಿನ ಮಾದರಿಗಳನ್ನು ಮುರಿದಿದೆ. ಹುಲಿಕಲ್ ನೆತ್ತಿಯ ಕಡಿದಾದ ಏರಿನ ಹಾದಿಯಲ್ಲಿ ಬರುವ 'ಮಸೆಕಲ್ಲಿನ' ಚಿತ್ರಣ ಕಾದಂಬ ರಿಯಲ್ಲಿದೆ.ಕಾಡು ಹೊಕ್ಕಾಡುವವರೆಲ್ಲರೂ ತಂತಮ್ಮ ಹತಾರಗಳನ್ನು ಈ ಮಸೆಕಲ್ಲಿಗೆ ಉಜ್ಜಿ ಹರಿತಗೊಳಿಸಿಕೊಳ್ಳುತ್ತಾರೆ. ಹತಾರಗಳಿಂದ ಉಜ್ಜಿಸಿಕೊಂಡು, ಅದು ತಾನೂ ಹೊಳೆವ ಗುರು ತುಗಲ್ಲಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ ಮದುಮಗಳು ಕೃತಿಯೂ ಇಂತಹ ಮಸೆಕಲ್ಲೇ ಆಗಿದೆ. ಕುವೆಂಪು ಈ ಕೃತಿಯಲ್ಲಿ ಮಂಡಿಸುವ ಲೋಕಮೀಮಾಂಸೆಯ ನೆಲೆ ಅದೆಷ್ಟು ದಟ್ಟವಾಗಿದೆಯೆಂದರೆ, ಮುಂದಿನ ಕನ್ನಡದ ನಿರ್ಮಿತಿಗಳಲ್ಲಿ ಅದರ ಛಾಯೆಯಿದೆ. 'ಕುಸುಮಬಾಲೆ ಮದುಮಗಳ ಮೊಮ್ಮಗಳು' ಎಂಬಂಥ ಮಾತು ಸುಮ್ಮನೆ ಅಲ್ಲವಲ್ಲ.

ನಮ್ಮ ಸಾಮಾಜಿಕ ಬದುಕು ಮತ್ತು ಸಾಂಸ್ಕೃತಿಕ ತಿಳಿವು ಪಿತೃತ್ವದ ಏಕರೂಪೀ ಮಾದರಿಯಿಂದ ಬಳಲಿರುವುದನ್ನು ಮನವರಿಕೆ ಮಾಡಿದ ಸ್ತ್ರೀವಾದಿ ತಾತ್ವಿಕತೆಯ

ಪ್ರವೇಶವಾಗಿಯೂ ಸರಿಸುಮಾರು ಅರ್ಧ ಶತಮಾನ ಸಮೀಪಿಸುತ್ತಿದೆ. ಆರಂಭದಲ್ಲಿ ಸ್ತ್ರೀವಾದ ದಟ್ಟ ರೆಟೊರಿಕ್ ಆದ ನಿರಾಕರಣ ಮಾದರಿಯ ಚಿಂತನೆಯಾಗಿತ್ತು. ದಮನಿತ ಸಂವೇದನೆಗೆ ಅನಿವಾರ್ಯವಾದ ಶಂಕಿತ ಪ್ರಜ್ಞೆಯ ನೋಟ ಕ್ರಮವಾಗಿತ್ತು. ಸೀತೆ ಮತ್ತು ಸಿರಿಯರ ಮಾದರಿಗಳಲ್ಲಿ-ಸೀತೆಯನ್ನು ಹೆಣ್ತನದ ಯಾತನೆ, ಅಪಮಾನಗಳ ಪ್ರತೀಕ ವಾಗಿ; ಸಿರಿಯನ್ನು ಹೆಣ್ತನದ ಸಶಕ್ತ ಪ್ರತಿರೋಧಗಳ ಪ್ರತೀಕವಾಗಿಯೂ ನೋಡಲಾಗು ತ್ತಿತ್ತು. ನಂತರದಲ್ಲಿ ಸ್ತ್ರೀವಾದಿ ನೋಟಕ್ರಮವು ಸ್ವ ಪರಿಶೀಲನೆಯ ಆಳಕ್ಕೆ ಇಳಿಯದಂತೆ ಪ್ರತಿರೋಧ-ಅನುಸರಣೆಗಳ ಸಿದ್ಧ ಕಲ್ಪಿತಗಳನ್ನು ಒಪ್ಪಿಕೊಂಡಿರುವ ಅಪಾಯ ಕಾಣ ತೊಡಗಿತು. ಪುರುಷ ನಿರ್ಮಿತ ಸ್ತ್ರೀ ಪ್ರತೀಕವನ್ನು ನಿರಾಕರಿಸುವ ಭಾಗವಾಗಿಯೇ ಮೌಲ್ಯಗಳ ಪರಿಕಲ್ಪನೆಗಳನ್ನು ಮರುಪರಿಶೀಲಿಸಿಕೊಳ್ಳಬೇಕಾಯಿತು. ಈ ಎಚ್ಚರವು ಮಹಿಳಾ ಓದಿನ ತಾತ್ವಿಕತೆಯಾಗಿ ಬೆಳೆಯಿತು. ಪರಿಣಾಮವಾಗಿ, ಸ್ತ್ರೀವಾದಿ ಓದು ಮರು ಓದಿನ ವಿಸ್ತರಣೆಗೆ ಒಳಗಾಗಬೇಕಾಯಿತು. ಕುವೆಂಪು ಅವರಲ್ಲಿ ಸ್ತ್ರೀ ಪ್ರತಿನಿಧೀಕರಣದ ನೆಲೆಯನ್ನು ಪರಿಶೀಲಿಸುವಾಗ, ಅವರ ಕಾವ್ಯದ 'ಗೃಹ ತಪಸ್ವಿನಿ' ಮಾದರಿಯನ್ನು ಪ್ರಶ್ನಿಸಲಾಗಿತ್ತು. ಏಕಮುಖಿ ನಿರ್ಣಯಗಳಿಗೆ ತಲುಪಲಾಗಿತ್ತು. ಕುವೆಂಪು ಕಾದಂಬರಿಗಳ ಓದು ಅಥವಾ ಕುವೆಂಪು ಬರಹಗಳ ಇಡಿಯಾದ ಓದು ಮಾತ್ರ ಅವರ ಸ್ತ್ರೀತ್ವದ ನಿಲುವನ್ನು ಕಾಣಿಸಬಲ್ಲುದು ಎಂಬ ತಿದ್ದುಪಡಿಗೆ ಮಹಿಳಾ ಓದು ಒಳಗಾಗಬೇಕಾಯಿತು. ಪ್ರಸ್ತುತ ಓದು ಕೂಡ ಆ ತಿದ್ದುಪಡಿಯ ಒಂದು ಭಾಗವೇ ಆಗಿದೆ. ಮದುಮಗಳು ಕೃತಿಯು ತನ್ನ ಪದರು ಪದರುಗಳಲ್ಲಿ ಅತಿ ದೃಢವಾಗಿ ಮತ್ತು ಸೂಕ್ಷ್ಮವಾಗಿ ಹೆಣ್ತನದ ಕುರಿತ ಪಿತೃತ್ವದ ನಿಲುವುಗಳನ್ನು ಪ್ರಶ್ನಿಸುತ್ತದೆ. ಹೆಣ್ಣನ್ನು ಕುರಿತ ಸಾಂಪ್ರದಾಯಿಕ ನಂಬಿಕೆ ಗಳನ್ನು ಉಲ್ಲಂಘಿ ಸುತ್ತದೆ. ಹೆಣ್ತನದ ಅದಮ್ಯ ತಾಕತ್ತಿನ ಮೂಲದ ಹುಡುಕಾಟದಲ್ಲಿ ತಾದ್ಯಾತ್ಮದಿಂದ ತೊಡಗಿಸಿಕೊಂಡಿದೆ. ಪಿತೃತ್ವವು ಚಲನರಾಹಿತ್ಯ ಗುಡ್ಡವನ್ನು ಎದುರಿಟ್ಟಷ್ಟೂ, ಎಳೆಯ ಹಲ್ಲುಗರಿಕೆಯಂತೆ ಅದನ್ನು ಹತ್ತಿ ಮುಂಚಲಿಸುವ ಸ್ತ್ರೀ ಸಂವೇದನೆ ಯನ್ನು ಕಾಣಿಸುತ್ತದೆ. ಹೀಗೆ ಕಾಣಿಸುವ ಕ್ರಮವು-ಸ್ತ್ರೀವಾದಿ ಚಿಂತನೆಯು ಲಿಂಗನಿರಪೇಕ್ಷ್ಯ ವಾದದ್ದು ಎಂಬ ತಾತ್ವಿಕ ಸ್ಪಷ್ಟತೆಯೂ ಆಗಿದೆ.

ಕುವೆಂಪು ಕಾದಂಬರಿಗಳು ಸ್ತ್ರೀತ್ವದ ಶೋಧನೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಪೂರಕವಾಗಿ ಆಧುನಿಕ ಭಾರತದ ಸಾಮಾಜಿಕ ಸ್ಥಿತ್ಯಂತರಗಳಿದ್ದವು. ಹೆಣ್ಣನ್ನು ಸಹನೆಯಿಂದ ಕಾಣುವ, ಸಹವರ್ತಿನಿಯಾಗಿ ಸ್ವೀಕರಿಸುವ ನಿಲುವಿಗೆ ನವೋದಯ ಸಂದರ್ಭ ತನ್ನನ್ನು ಸಿದ್ಧಪಡಿಸಿಕೊಳ್ಳುವ ಪ್ರಯತ್ನದಲ್ಲಿತ್ತು. ಗಂಡುಗರ್ವವನ್ನು ಇಳುಹಬೇಕಾದ ಅಗತ್ಯದ ಬಗ್ಗೆ ಸಂವೇದನಾಶೀಲತೆ ಎಚ್ಚರಗೊಂಡಿತ್ತು. ಉದಾರವಾದವು, ಸಾಂಪ್ರದಾಯಿ ಕತೆಯ ಪೊರೆ ಯನ್ನು ಕಳಚಿದ್ದರಿಂದ ಹೊಸ ನೋಟಕ್ರಮವು ರೂಪುದಾಳುತ್ತಿತ್ತು. ಈ ಎಲ್ಲದರ ಫಲಿತ ವಾಗಿರುವ ಮದುಮಗಳು ಕೃತಿಯು ಸ್ತ್ರೀತ್ವವನ್ನು ನಿರ್ವಚಿಸಿಕೊಳ್ಳುವ ಬಗೆಯನ್ನು ಹೀಗೆ ಪ್ರಮೇಯಿಸಬಹುದು-

೧. ನಿರಂತರ ಚಲನಶೀಲ ಸ್ತ್ರೀಲೋಕ :

ಮದುಮಗಳು ಕಥಾಭಿತ್ತಿಯಲ್ಲಿ ಮೂರ್ತಗೊಳ್ಳುವ ಸ್ತ್ರೀಜಗತ್ತು ಮಲೆಕಾಡಿನಷ್ಟೇ ನಿಬಿಡವಾಗಿದೆ, ಚೈತನ್ಯದಾಯಕವಾಗಿದೆ. ಇಲ್ಲಿ ಬಹುಸ್ತರೀಯವಾದ ಅದರಲ್ಲೂ ಅಬ್ರಾಹ್ಮಣ ಮಹಿಳಾ ಜಗತ್ತು ಇಡಿಕಿರಿದಿದೆ. ಬ್ರಾಹ್ಮಣೇತರವಾದ ಬಹುಜಾತಿ-ಬಹು ವರ್ಗಗಳ ಮಹಿಳಾ ಪಾತ್ರಗಳಿವೆ. ಈ ಎಲ್ಲ ಪಾತ್ರಗಳೂ ತಂತಮ್ಮ ನೆಲೆಯಲ್ಲಿ ಚಲನ ಶೀಲವಾಗಿವೆ. ಆದರೆ ಈ ಚಲನೆ, ಹೆಜ್ಜೆ ಕಿತ್ತು ಮುನ್ನಡೆಯುವ ರೀತಿಯದಲ್ಲ. ಬೇರು ಆಳವಾಗಿಸುತ್ತ; ತನ್ನನ್ನೇ ತಾನು ಜೀವಂತ ಚಲನೆಯಾಗಿಸಿಕೊಳ್ಳುತ್ತ ಸುತ್ತಲನ್ನು ಪೋಷಿಸುವ ಮರದ ತತ್ವಕ್ಕೆ ಸಂವಾದಿಯಾದದ್ದು. ಈ ಪರಿವರ್ತಿತ ಪ್ರಕ್ರಿಯೆ ಮೇಲ್ನೋ-ಟಕ್ಕೆ ಕಾಣುಪಂಥದ್ದೂ ಅಲ್ಲ. ತಿಮ್ಮಿ, ಚಿನ್ನಕ್ಕ, ಸೇಸಿ, ಪೀಂಚಲು, ಅಕ್ಕಣಿ-ಎಲ್ಲರೂ ಈ ಚಲನಶೀಲತೆಯ ಭಾಗಗಳೇ.

ವ್ಯವಸ್ಥೆಯ ನಿರ್ದೇಶಿತ ಚೌಕಟ್ಟುಗಳ ಒಳಗೆ, ಇದು ಇರುವುದು ಅಥವಾ ಇರಬೇಕಾದದ್ದು ಹೀಗೇ ಎಂಬ ನೆಚ್ಚಿಕೆಯಿಂದ ಬದುಕುತ್ತಿರುವಂತೆ ಕಾಣುವ ಈ ಹೆಣ್ಣುಗಳು, ಅತ್ಯಂತ ಪ್ರಜ್ಞಾಪೂರ್ವಕವಾಗಿ ಆ ಚೌಕಟ್ಟುಗಳನ್ನು ದಾಟುತ್ತಾರೆ. ಈ ದಾಟುವಿಕೆಯಲ್ಲಿ ಸಹಜತೆಯಿದೆ. ಅದೊಂದು ಸಾಂದರ್ಭಿಕ ತೀರ್ಮಾನವಾಗಿ ಕಾಣುವುದಿಲ್ಲ. ತಮ್ಮ ಆಯ್ಕೆಯ ಹಾದಿಗಳ ಬಗ್ಗೆ ಅವರಿಗೆ ದೃಢತೆಯಿದೆ. ಸ್ವ ನಿರ್ಧಾರದ ತೃಪ್ತಿಯಿದೆ. ಗುತ್ತಿಯೊಂದಿಗೆ, ಗುತ್ತಿಗೆ ಕಡಿಮೆಯಿಲ್ಲದಂತೆ ಮಲೆ ಸುತ್ತುವ ತಿಮ್ಮಿಯಿದ್ದಾಳೆ. ಬದುಕಿನ ಸವಾಲುಗಳೆದುರು ಅವಳು ಸೋತು ನೆಲಕಚ್ಚುವವಳಲ್ಲ. ದಣಿದ ಗುತ್ತಿಯನ್ನು ನಗಿಸುವ, ರಮಿಸುವ ಶಕ್ತಿವಂತೆ ಅವಳು. ಕಾಡು-ನಾಡುಗಳ ಕತ್ತಲು-ಬೆಳಕಿನ ಕಾಲು ದಾರಿಗಳಲ್ಲಿ ಸತತ ಸಂಚಲನ ಸೃಷ್ಟಿಸುವ ತಿಮ್ಮಿ, ಚಿನ್ನಕ್ಕ ಮತ್ತು ಪೀಂಚಲು-ಕ್ರಮಿಸುವ ದರ್ದುಗಳನ್ನು ಗಮನಿಸಬೇಕು. ಹೆಣ್ಣಿನ ಬಾಳಿನ ನಿರ್ಣಾಯಕ ಘಟ್ಟವಾಗಿರುವ ಮದುವೆಯ ಸಂದರ್ಭಗಳವು. ಪೀಂಚಲುಗೆ ಮುಕುಂದಯ್ಯನ ಬಗ್ಗೆ ರೂಢಿಯ ಭಾಷೆಯಲ್ಲಿ ಹೇಳಲಾಗದ ಅನೂಹ್ಯ ಪ್ರೀತ್ಯಾದರಗಳಿವೆ. ಹಾಗಾಗಿಯೇ ಮುಕುಂದಯ್ಯ ತನ್ನ ಮತ್ತು ಚಿನ್ನಕ್ಕನ ಬೇಟದ ನಿರ್ಣಾಯಕ ಸಂದರ್ಭದಲ್ಲಿ ಮಧ್ಯವರ್ತಿಯಾಗಿ ನೇಮಿಸಿಕೊಳ್ಳುವುದು ಪೀಂಚಲುವನ್ನು. ಪೀಂಚಲು ತನ್ನ ಐತನಿಗೂ ಹೇಳದೆ, ಮಳೆ ಕತ್ತಲ ಕಾಡುದಾರಿಯಲ್ಲಿ ಕ್ರಮಿಸುತ್ತಾಳೆ. ಮದುವೆ ಮನೆಯಿಂದ ಮದುವೆ ಹೆಣ್ಣನ್ನು ಹೊರ ಹೊರಡಿಸುತ್ತಾಳೆ. ಆ ಕತ್ತಲ ಕಾವಳದಲ್ಲಿ ಚಿನ್ನಕ್ಕನಿಗೆ ರಕ್ಷಕಿಯಾಗುತ್ತಾಳೆ. ಹೊಟ್ಟೆಯ ಕೂಸು ಮುಲುಕುತ್ತಿರುವ ನೋವಿನಲ್ಲೂ ಚಿನ್ನಕ್ಕ ಮತ್ತು ಮುಕುಂದಯ್ಯರನ್ನು ಒಂದು ಮಾಡಲು ಗುಡ್ಡದ ನೆತ್ತಿ ಏರುತ್ತಾಳೆ.

ಇಲ್ಲಿಯ ಹೆಣ್ಣು ಜೀವಗಳು ಲಘಿಮಾ ಕೌಶಲ್ಯದ ಅದ್ಭುತವನ್ನು ಪ್ರಕಟಿಸುವುದು ಜೊತೆಯ ಗಂಡುಜೀವಗಳನ್ನು ಆಧರಿಸಿ ಮಾತ್ರವೇ ಅಲ್ಲ. ಅದೊಂದು ಅತಿ ದುರ್ಬಲ

ಎಳೆ ಎಂಬುದನ್ನು ತಿಳಿದೂ. ಮುಕುಂದಯ್ಯನ ಮಾತಿನಂತೆ ಚಿನ್ನಕ್ಕನನ್ನು ಮದುವೆ ಮನೆಯ ಬೆಳಕಿನಿಂದ ಕತ್ತಲಿಗೆ ತಂದ ಪೀಂಚಲು, ಮುಕುಂದಯ್ಯನೂ ತನ್ನ ಐತನೂ ಸಿಗದೆ, ಕಾಡಿನ ಕತ್ತಲಲ್ಲಿ ದಾರಿತಪ್ಪಿದ್ದೇವೆಂದು ಗೊತ್ತಾದ ಪ್ರಸಂಗವನ್ನು ಗಮನಿಸಿ. 'ಚೊಚ್ಚಲ ಬಸಿರಿಯೂ ಮತ್ತು ಒಲ್ಲದ ಮದುವೆಯಿಂದ ಪಾರಾದ ಮದುಮಗಳೂ' ಕಂಬಳೀಕೊಪ್ಪೆಯನ್ನು ಬಲವಾಗಿ ಸುತ್ತಿಕೊಂಡು ಹಾಡ್ಯದ ಮಾರಮ್ಮನ ಗುಡಿ ಹಾದಿ ತಪ್ಪಿ, ಮಿಂಚುಹುಳುಗಳು ಆವರಿಸಿ ಮಿರುಗುತ್ತಿದ್ದ . . . ಕ್ರಿಮಿ ಕೀಟಾದಿಗಳು ಕರ್ಕಶವಾಗಿ ಕೂಗುತ್ತಿದ್ದ ಹಳುವದೊಳಕ್ಕೆ' ಬಂದುಬಿಟ್ಟಿರುತ್ತಾರೆ. ಒಂದು ಕ್ಷಣ ಅಧೀರರಾದರೂ, ತಮ್ಮ ತೀರ್ಮಾನಗಳಿಂದ ಹಿಂತೆಗೆವವರಲ್ಲದ ಕಾರಣಕ್ಕೆ ವಿವೇಚಿಸಿ ಹಾದಿಹಿಡಿಯುತ್ತಾರೆ. ಎಂತಹ ಆಪತ್ತಿನಲ್ಲೂ ಹಿಂದೆಗೆಯದ ಹೆಣ್ತನ ಅದು. 'ನೀ ಮನೀಗೋಗು ಬೇಕಾದರೆ. ನಾನಿಲ್ಲೇ ಕೆರೆಗೆ ಹಾರ್ತೀನಿ' ಎನ್ನುವ ಚಿನ್ನಕ್ಕನ ದೃಢತೆ, 'ಕರ ಕೇಡನೊಡ್ಡಿದಡೆ ಒಡಲನೂ ಪ್ರಾಣವನೂ ನಿಮಗರ್ಪಿಸಿ ಧನ್ಯಳಹೆನು' ಎಂಬ ಅಕ್ಕನ ನಿಲುವೇ ಆಗಿದೆ.

ಈ ಕಾದಂಬರಿಯ ಹೆಣ್ಣು ಜೀವಗಳು ಭೌತಿಕ ಚಲನೆಯಲ್ಲಿ ಮಾತ್ರ ತೊಡಗಿ ಕೊಂಡಿಲ್ಲ. ಅವರು ಪ್ರಜ್ಞಾ ಪ್ರವಾಹದ ಅದಮ್ಯ ಚಲನಶೀಲತೆಯ ಉಪಾಧಿಗಳಾಗುತ್ತಾರೆ. ಆಸ್ಟ್ರೇಲಿಯಾದ ಕಡಲಿನಲ್ಲಿ ಒಂದು ವಿಶಿಷ್ಟ ಜಾತಿಯ ಮೀನುಗಳಿವೆಯಂತೆ. ಅವು ಮೊಟ್ಟೆಯಿಡುವ ಕಾಲದಲ್ಲಿ ಕಡಲ ತೆರೆಗಳ ಮೇಲ್ಪದರಿನಲ್ಲಿ ಯಾವ ಸುಳಿಯನ್ನೂ ಸದ್ದನ್ನೂ ಹುಟ್ಟಿಸದೆ, ಸುರಕ್ಷಿತ ಸ್ಥಳವನ್ನರಸಿ ನೀರಿನಾಳದಲ್ಲಿಯೇ ನೂರಾರು ಕಿ.ಮೀ. ದೂರ ಕ್ರಮಿಸಿಬಿಡುತ್ತವಂತೆ. ಆ ತಾಕತ್ತನ್ನು ಇಲ್ಲಿಯ ಸ್ತ್ರೀತ್ವ ಪ್ರಕಟಿಸುತ್ತದೆ. ಮನುಷ್ಯ ಪ್ರಪಂಚದ ಘನತೆಯ ಮಾನದಂಡಗಳಿಗೆ ಯಾವ ಅಂಚಿನಿಂದಲೂ ಸ್ಪರ್ಶವಾಗದ ತಿಮ್ಮಿ, ಹುಲಿಕಲ್ ನೆತ್ತಿಯಲ್ಲಿ ವರ್ಣನಾತೀತ ಸೊಬಗಿನ ಸಾಕ್ಷೀಪ್ರಜ್ಞೆಯಾಗುತ್ತಾಳೆ. ಮತ್ತೊಮ್ಮೆ ಅದೇ ಹುಲಿಕಲ್ ನೆತ್ತಿಯ ಕಲ್ಲು ಮಂಟಪದಲ್ಲಿ ಚಿನ್ನಕ್ಕನ ಬರವನ್ನು ಕಾಯುತ್ತ ಕುಳಿತ ರಾತ್ರಿ ತಿಮ್ಮಿ, 'ರಣತೇಜಿಯನ್ನೇರಿ ಬಂದ ಧೀರಭಂಗಿಯ ಅಶ್ವಾರೋಹಿಯನ್ನೂ ಅವನ ಕೈ ಹಿಡಿದು ಚಂಗನೆ ಕುದುರೆಯೇರಿದ ಸಾಲಂಕೃತ ವಧುವೇಷದ ತರುಣಿಯನ್ನು' ಕಾಣುತ್ತಾಳೆ. ಕನಸಿನಲ್ಲಲ್ಲ. ಕಣ್ಣು ತೆರೆದು ಕೂತಿರುವ ಎಚ್ಚರದಲ್ಲಿಯೇ. ಆ ಕುದುರೆಯ ಟಿಕ್ ಟಿಕ್ ಸದ್ದು ಇನ್ನೂ ಕಿವಿಯಲ್ಲಿದೆ ಎನ್ನುವಷ್ಟು ಸ್ಪಷ್ಟವಾಗಿ. ಕಾಲಾತೀತವಾದ ಯಾವುದೋ ಸಂಗತಿಗಳು ಅವಳಲ್ಲಿ ಮರುಸಂಭವಿಸುತ್ತ ಮುಂದಿನ ಅನಂತದೆಡೆ ಸಾಗಿಸುತ್ತವೆ. ಅದಕ್ಕೇ ಅವಳಿಗೆ ಮದುವಣಗಿತ್ತಿಯ ವೇಷದ ಚಿನ್ನಕ್ಕನನ್ನು ಕಂಡಾಗ, ತಾನು ಕಂಡ ಆ ಕುದುರೆ ಸವಾರನ ಕೈಹಿಡಿದ ಹೆಣ್ಣು ಇವಳೇ ಅನ್ನಿಸುತ್ತದೆ. ಹೆಣ್ಣು ತನ್ನ ಸುತ್ತಲೊಂದಿಗೆ ಹೊಂದಿರುವ ಪ್ರಜ್ಞಾಪ್ರವಾಹದ ಕಂಪನಾಂಕವನ್ನು ಅಳೆಯುವುದು ಸಾಧ್ಯವಿಲ್ಲ. ಅಲ್ಲಿ ಬಸುರಿ ದೇಯಿ, ತನ್ನ ಗಂಡ ಚೀಂಕ್ರ ಸೇರೆಗಾರನ ಕಾರಣದಿಂದ ರಕ್ತಸ್ರಾವವಾಗಿ, ರಕ್ತದ ಮಡುವಿನಲ್ಲಿ ಬಿದ್ದು ಸತ್ತ ರಾತ್ರಿಯ ಬೆಳಗು ಜಾವದಲ್ಲಿ ಪೀಂಚ-

ಲುವಿಗೆ, ದೇಯಿ ಬಂದು ತಟ್ಟಿಯಾಚೆ ನಿಂತು ಕರೆದಂತಾಗಿ ದಡಬಡಿಸಿ ಎದ್ದು ಓಡುತ್ತಾಳೆ. ಹೆಣ್ಣು ಎಂದರೆ, 'ಇಟ್ಟಾಂಗ ಇರಬೇಕಾದವಳು' ಎಂಬ ಜನಪದ ಹೆಣ್ತನದ ಗ್ರಹಿಕೆಯನ್ನು ಮೀರಿ-ಇಲ್ಲಿಯ ಹೆಣ್ಣುಗಳು ತಮ್ಮ ಲೋಕದ ಸಂಭಾಳಿಕೆಗೆ ಸತತ ಶ್ರಮಿಸುವವರು. ಈ ಸಶ್ರಮದ ಚಲನೆಯೇ ಹೆಣ್ತನದ ಪರಿಭಾಷೆ ಎನ್ನುವುದು ಕಾದಂಬರಿಯ ನಿಲುವು.

೨. ತಾಯ್ತನದ ನಿಕಶ :

ತಾಯ್ತನ ಎನ್ನುವುದು ಜೈವಿಕತೆಗೆ ಸಂಬಂಧಿಸಿದ್ದಲ್ಲ. ಅದು ತನ್ನ ಸುತ್ತಿಕೊಂಡಿರುವ ಮನುಷ್ಯ ಸಂಬಂಧವನ್ನೂ ಪ್ರಕೃತಿಯ ಸಂಬಂಧವನ್ನೂ ಕಾಣುವ-ಪೊರೆಯುವ ಒಂದು ತ್ರಾಣ, ರೆಕ್ಕೆಯನ್ನು ಮತ್ತೂ ಅಗಲಿಸಿ ಮರಿಗಳನ್ನು ಒಳಗೆ ಗೆಬರಿಕೊಳ್ಳುವ ತಾಯಿ ಹೇಂಟೆಯ ಗುಣ. ತಿಮ್ಮಿಯ ತಾಯಿ ಸೇಸಿ, ತಿಮ್ಮಿಯು ಗುತ್ತಿಯೊಂದಿಗೆ ಓಡಿಹೋಗುವ ನಿರ್ಧಾರಕ್ಕೆ ಪೂರಕವಾಗಿ ನಿಂತವಳು. ಆದರೆ, ಇದೇ ಕಾರಣಕ್ಕಾಗಿ ಬೆಟ್ಟಳ್ಳಿ ಕಲ್ಲಯ್ಯಗೌಡ್ರು ಸಾಬಿಯ ಕೈಯ ಬಾರುಕೋಲಿಂದ ತನ್ನ ಮಗ ಸಣ್ಣಬೀರನನ್ನು ಕ್ರೂರವಾಗಿ ಥಳಿಸುವಾಗ, ಸುಮ್ಮನಿರಲಾರದವಳಾಗಿ ಓಡಿ ನುಗ್ಗಿ ಚೀರಿ ಪ್ರತಿಭಟಿಸುತ್ತಾಳೆ. ತಾಯ್ತನದ ಆ ನಿಷ್ಕಲ್ಮಶ ಪ್ರತಿರೋಧವನ್ನು ಎದುರಿಸುವ ಶಕ್ತಿ ಸಾಬಿಯ ಬಾರುಕೋಲಿಗಾಗಲಿ, ಬೆಟ್ಟಳ್ಳಿಗೌಡ್ರ ನಾಲಿಗೆಗಾಗಲಿ ಇರಲಿಲ್ಲ. ಸೇಸಿಯದು ನೇರ ಪ್ರತಿರೋಧ. ಆದರೆ, ಮಗು ಚೆಲುವಯ್ಯನಿಗೆ ಎದೆಹಾಲೂಡುತ್ತ ನಿಶ್ಚಲವಾಗಿ ಕುಳಿತಿರುವ ದೇವಮ್ಮ ತಾಯ್ತನದ ಅಪಾರ ತಾಳ್ಮೆಯ ಮೂಲಕವೇ ತನ್ನ ಸುತ್ತಲು ನಡೆಯುತ್ತಿರುವ ಅಪ್ರಿಯಗಳನ್ನು ಎದುರಿಸುತ್ತಿದ್ದಾಳೆ. ಅವಳು ತನ್ನ ಕೂಸಿಗೆ ಸೆರಗನ್ನು ಮಾತ್ರ ಮರೆಮಾಡಿಲ್ಲ. ಲೋಕದ ಕೇಡುಗಳಿಂದ ಮರೆ ಮಾಡಲು ಯತ್ನಿಸುತ್ತಾಳೆ. ಹಾಗಾಗಿ, ತಾಯಿ ಹಾಲೂಡುವ ಪ್ರಸಂಗ ಕಾದಂಬರಿಯಲ್ಲಿ, 'ಶ್ರೀಮದ್‌ಗಂಭೀರವಾದ ಭವಿತವ್ಯದ ಯಾವುದೋ ಸಂಗತಿಯೊಂದು ಸಂಭವಿಸುತ್ತಿರುವುದಕ್ಕೆ' ನೇಮದಂತೆ ಕಾಣುತ್ತದೆ.

ಗಂಡ ಪಿಜಣನ ನಿರಂತರ ಕಾಯಿಲೆ, ಕುಡಿತಗಳನ್ನು ಸಂಭಾಳಿಸಿಕೊಂಡು ಏನಿಲ್ಲದ ಬಾಳಿನಲ್ಲೂ ಬಾಳಾಟ ನಡೆಸಲು ಪ್ರಯತ್ನಿಸುವ ಅಕ್ಕಣಿಯಿದ್ದಾಳೆ. ಅವಳು ಗುಡಿಸಲ ಮೂಲೆ ಹಿಡಿದ ಗಂಡ ಪಿಜಣನನನ್ನು ತಾಯಿಯಂತೆ ನೋಡಿಕೊಳ್ಳುವವಳು. ದೇಯಿ ಸತ್ತು ತಾಯಿಲ್ಲದೆ ಪರದೇಶಿಯಾದ ದೇಯಿಯ ಮಕ್ಕಳಿಗೆ ತಾಯಿಯಾದವಳು. ಅವಳು ಕಡೆಯಲ್ಲಿ ಚೀಂಕ್ರನನ್ನು ದೂರಮಾಡಬಲ್ಲಳಾದರೂ, ದೇಯಿಯ ಮಕ್ಕಳನ್ನು ದೂರ ಮಾಡಲಾರಳು. ಹೂವಳ್ಳಿ ವೆಂಕಪ್ಪನಾಯಕನ ಮಗಳು ಚಿನ್ನಮ್ಮ, ಮುಕುಂದ ಬಾವಯ್ಯನಿಗಾಗಿ ಓಡಿ ಬರುವ ಆ ರಾತ್ರಿ ಜೀಂಗಟ್ಟೆ ಸರಿಯುವ ಮಳೆಯಿಂದ ಕೊಂಚ ವಿರಾಮಕ್ಕಾಗಿ ಹಳೆಪೈಕದ ಮುದುಕಿ ಯಂಕಿಯ ಆರೈಕೆಗೆ ಒಳಗಾಗುತ್ತಾಳೆ-ರಾತ್ರಿಯೇ ವಿರಾಮವಿಲ್ಲದವರಂತೆ ಹೊರಟ ಚಿನ್ನಕ್ಕ-ಮುಕುಂದಯ್ಯ, ಐತ-ಪೀಂಚಲು ಇವರುಗಳ ನೆರಳು

ದೂರ ಸರಿಯುತ್ತಿದ್ದಂತೆ, ಬಾಗಿಲು ಮುಚ್ಚಿಕೊಂಡ ಯೆಂಕಿ, ಅದ್ಯಾಕೆ ಸೆರಗಿನಿಂದ ಕಣ್ಣು-ಮೂಗು ಒರೆಸಿಕೊಂಡಳು? ಅಕಾರಣವಾಗಿ ಜೀವದಯೆಯಿಂದ ದ್ರವಿಸುವ ಭಾವವನ್ನು ತಾಯ್ತನ ಎಂದು ಕರೆಯುತ್ತೇವೆಯೇ? ಹಾಗಿದ್ದರೆ, ತಾಯ್ತನವನ್ನು ಪಿತೃತ್ವದ ಪರಿಭಾಷೆ ಅದ್ಯಾಕೆ ಅಷ್ಟು ಸಂಕುಚಿತಗೊಳಿಸಿದೆ? ರಾಮಾಯಣದಲ್ಲಿ - ತನಗಾಗಿ ಹಂಬಲಿಸಿ ಹಲವರಿವ ರಾವಣನಿಗೆ ಸೀತೆ-

ಮರುಗುವೆನ್ ದಶಾನನ ನಿನಗಾಗಿ।
ತಾಯಿ ತನ್ನ ಕೇಡಾಡಿ ಕಂದಂಗೆ ಮರುಗುವಂತೆ

ಎನ್ನುತ್ತಾಳೆ. ಗಂಡಿನ ಎಲ್ಲ ದುಷ್ಟತನವನ್ನೂ ಕ್ಷಮಿಸುವ, ತಿದ್ದಲು ಯತ್ನಿಸುವ, ತಿದ್ದುವಿಕೆಗಾಗಿ ತುಡಿವ ಅದಮ್ಯ ಗುಣವನ್ನೇ ತಾಯ್ತನ ಎನ್ನಬಹುದೇ? ಸೀತೆಗಾಗಿ ಹಂಬಲಿಸುತ್ತ, ಅವಳ ತೊಡೆಯಲ್ಲಿ ಕೂಸಾಗಿ ಆಡಿದ ಕನಸಾಯಿತೆಂದು ಬೆದರಿ ಬೆವರುವ ದಶಕಂಠನಿಗೆ, ತನ್ನ ಸೆರಗಿನಿಂದ ಬೆವರೊರೆಸಿ ಸಾಂತ್ವನಿಸುವ ಮಂಡೋದರಿಯ ಧೀ:ಶಕ್ತಿಯಿರುವುದು ಅವಳ ತಾಯ್ತನದಲ್ಲಿಯೇ. ತಾಯ್ತನ ಎಂಬ ಪರಿಭಾಷೆ ಹಳೆಯದು. ಸ್ವಾರ್ಥ ಅಸಹಾಯಕತೆಗಳ ಕ್ಲೀಷೆಯನ್ನು ಹೊತ್ತಿಕೊಂಡಿರುವುದೂ. ಆದರೆ ತಾಯ್ತನ ಎನ್ನುವುದು ಗಂಡಿಗೆ ಹೆಣ್ಣು ಅರ್ಥವಾಗಬಲ್ಲ ಸಹಜ ಮಾಧ್ಯಮ. ಆದಿಮ ಕಾಲ ದಿಂದಲೂ ಹೆಣ್ಣು ತನ್ನ ಲೋಕಾಂತಕ್ಕೆ ಬಳಸಿಕೊಂಡು ಬಂದ ಮಂತ್ರದಂಡ. ಹೆಣ್ಣು ತನ್ನ ಸಾಮರ್ಥ್ಯವನ್ನು ಉನ್ನತೀಕರಿಸಿಕೊಳ್ಳಲು, ತನ್ನನ್ನು ತಾನು ಸಶಕ್ತೀಕರಿಸಿ ಕೊಳ್ಳಲು ಪೋಷಿಸಿಕೊಂಡು ಬಂದ ಶ್ರದ್ಧಾಕೇಂದ್ರ-ಎನ್ನುವಂತೆ ಇಲ್ಲಿಯ ಸ್ತ್ರೀತ್ವದ ನೆಲೆಯಿದೆ.

೩. ತುಳಿವ ಪಾದಗಳ ಹೊತ್ತ ನೆಲ :

'ಮಲೆಗಳಲ್ಲಿ ಮದುಮಗಳು' ಕಾದಂಬರಿ ಅತ್ಯಂತ ವಿಸ್ತಾರವಾದ ನೆಲೆಯಲ್ಲಿ ಮಲೆನಾಡಿನ ಸಾಮಾಜಿಕ ಬದುಕನ್ನು-ಆ ಬದುಕನ್ನು ಪಲ್ಲಟಗೊಳಿಸಿದ ಆರ್ಥಿಕ ರಾಜಕೀಯ ಸ್ಥಿತ್ಯಂತರಗಳನ್ನು ಕಾಣಿಸುತ್ತದೆ. ಈ ವಿಸ್ತೃತ ಕ್ಯಾನವಾಸಿನಲ್ಲಿ ಸಾಮಾಜಿಕವಾಗಿ ಮುಖ್ಯ ರಲ್ಲದೆ, ಕುಟುಂಬದ ಪದರುಗಳೊಳಗೆ ಉಸಿರುಗಟ್ಟಿಯೂ, ಬದುಕಲು ಶ್ರಮಿಸುತ್ತಿರುವ ಹೆಣ್ಣುಗಳ ಚರಿತ್ರೆಯನ್ನೂ ಬರೆಯುತ್ತದೆ. ಹೆಣ್ಣು, ಹೆಣ್ಣಾಗಿರುವ ಕಾರಣಕ್ಕಾಗಿ ಗಂಡು ಹೆಜ್ಜೆಗಳೊಳಗೆ ತೊತ್ತಳ ತುಳಿದು ಹೋಗುವುದನ್ನು ಜೀವ-ಭಾವಗಳು ನಲುಗಿ ಬರ್ಫದಲ್ಲಿ ಸುಟ್ಟುರಿದಂತೆ ಪೇಲವವಾಗುವುದನ್ನು ಈ ಕಾದಂಬರಿ ತೋರುತ್ತದೆ, ಇನ್ನಿಲ್ಲದ ಶ್ರದ್ಧೆಯಲ್ಲಿ, ದಣಿವರಿಯದ ಯಾತನೆಯಲ್ಲಿ.

ಅಕಾರಣ ಹಿಂಸೆಗೆ ಈಡಾಗುವ ಹಲವು ಹೆಣ್ಣುಗಳ ಕಥನವಿಲ್ಲಿದೆ. ಗಂಡ ತಿರುಪತಿಗೆ ಎಂದು ಹೋದವನು ಪತ್ತೆಯೇ ಇಲ್ಲದಂತಾದಾಗ, ಆ ವೇದನೆಯೊಂದಿಗೆ, ಕೌಟುಂಬಿಕ

ಹಿಂಸೆಗೂ ಒಳಗಾಗಿ ಹುಚ್ಚು ಹೆಗ್ಗಡ್ತಿ ಎಂದು ಕರೆಯಿಸಿಕೊಂಡ ದೊಡ್ಡಯ್ಯಗೌಡನ ಹೆಂಡತಿ ರಂಗಮ್ಮ ಇದ್ದಾಳೆ. ಶಂಕರಪ್ಪನ ಅತಿ ವೈದಿಕತೆ ಮತ್ತು ದೊಡ್ಡಸ್ತಿಕೆಯ ಭ್ರಮೆಯಲ್ಲಿ ನಲುಗಿ ಜೀವಶವವಾಗಿರುವ ಹೆಂಡತಿಯಿದ್ದಾಳೆ. ಹೆಂಡತಿಯೆನ್ನುವವಳ ದೇಹಸ್ಥಿತಿ-ಮನಸ್ಥಿತಿಗಳನ್ನು ಗಣನೆಗೆ ತೆಗೆದುಕೊಳ್ಳದೆ, ಅದು ತನ್ನ ಲೈಂಗಿಕ ಬಳಕೆಯ ವಸ್ತುವೆಂಬ ಕೌಟುಂಬಿಕ ದೌರ್ಜನ್ಯದ ಚೀಂಕ್ರನ ನಡೆಗೆ, ತುಂಬು ಬಸಿರಿ ದೇಯಿ ಸತ್ತುಬೀಳುತ್ತಾಳೆ. ಚೀಂಕ್ರನಿಗೆ ತನ್ನ ದುರ್ವರ್ತನೆ ಅರಿವಾಗುವುದಿಲ್ಲ. ಗಂಡಾಳಿಕೆಯನ್ನು ಒಪ್ಪಿಕೊಂಡ ಸಮಾಜಕ್ಕದು ಅನ್ಯಾಯ ಅನ್ನಿಸುವುದಿಲ್ಲ. ಅದೇ ಚೀಂಕ್ರ ಸೇರೆಗಾರ, ತನ್ನ ಮಕ್ಕಳಿಗೆ ತಾಯ್ತನದ ಮಮತೆ ತೋರುವ ಅಕ್ಕಣಿಯನ್ನು ತನ್ನ ಬಳಕೆಯ ವಸ್ತುವಾಗಿ ಪಳಗಿಸುತ್ತಾನೆ. ಅಕ್ಕಣಿಯ ಕೌಟುಂಬಿಕ ಸೌಖ್ಯದ ಕೊರತೆಯನ್ನು ಉಪಯೋಗಿಸಿ ಕೊಳ್ಳುತ್ತಾನೆ. ತನ್ನ ಗಂಡ ಪಿಜಣನ ಸಾವಿಗೆ ಚೀಂಕ್ರ ಪರೋಕ್ಷವಾಗಿ ಕಾರಣನೆಂದು ತಿಳಿದ ಅಕ್ಕಣಿ, ಮತ್ತೆಂದೂ ಚೀಂಕ್ರನೊಂದಿಗೆ ಸಂಬಂಧವಿಟ್ಟುಕೊಳ್ಳದ ಕಠೋರೆಯಾಗು ತ್ತಾಳೆ. ಅಕ್ಕಣಿಯ ವರ್ತನೆ ಚೀಂಕ್ರನಿಗೆ ಅರ್ಥವಾಗುವುದೇ ಇಲ್ಲ. ದುರಂತವೆಂದರೆ ಚೀಂಕ್ರ ಹೆಣ್ಣುತನವನ್ನು ಅರ್ಥಮಾಡಿಕೊಳ್ಳುವ ಸಣ್ಣ ಪ್ರಯತ್ನವನ್ನೂ ಮಾಡುವುದಿಲ್ಲ. ಮಾಡಿದ್ದಿದ್ದರೆ . . ಎಳೆಯ ಬಾಲೆ ಕಾವೇರಿಯ ದೇಹದ ಮೇಲೆ ಎರಗುವ ಪಿಶಾಚತನಕ್ಕೆ ತಡೆಯಿರುತ್ತಿತ್ತೋ ಏನೋ? ಕಾವೇರಿ ಅತ್ಯಾಚಾರದಿಂದ ಅಪಮಾನಿತಳಾಗಿ ಆತ್ಮಹತ್ಯೆ ಮಾಡಿಕೊಂಡಳು. "ತನ್ನ ಮೈಯನ್ನು ಕೆಡಿಸಿದ್ದ ಪಾಪಿಗಳಲ್ಲಿ ಚೀಂಕ್ರನೂ ಸೇರಿದ್ದನೆಂಬುದು ಕಾವೇರಿಗೆ ಗೊತ್ತಾಗದಿದ್ದುದು ಒಂದು ಭಗವತ್ ಕೃಪೆಯೆ ಆಗಿತ್ತು. ಅದೇನಾದರೂ ಗೊತ್ತಾಗಿದ್ದರೆ ಭಗವಂತನೆ ಸತ್ತು ಹೋಗುತ್ತಿದ್ದನು"- ಎಂದು ವ್ಯಾಖ್ಯಾನಿಸಿದೆ ಕೃತಿ. ಅತ್ಯಾಚಾರಕ್ಕೆ ಬಲಿಯಾದ ಎಳೆಯ ಬಾಲೆಯು ಅನುಭವಿಸುವ ವಿಶ್ವಾಸದ್ರೋಹದ ಆಘಾತವನ್ನು ಇನ್ನೂ ವಿದ್ರಾವಕವಾಗಿ ಹೇಳಲು ಸಾಧ್ಯವಿಲ್ಲ.

ಅದ್ಯಾವ ಪ್ರವಾಹದ ಎದಿರು ಹಾದು, ಮುಂದಕ್ಕೆ ಸೆಣೆಸಲಾರೆ ಎನ್ನುವಂತೆ ಸಿಕ್ಕ ದಡ ಕಚ್ಚಿ ಉಸಿರುಹಾಕಿ ಬಾಳುತ್ತಿದ್ದ ಅಂತಕ್ಕ ಸೇಡ್ತಿಯ ಹೊಟೇಲು, ಆ ಸೀಮೆಯ ಗೌಡಿಕೆಯವರಿಗೆ ತಾತ್ಕಾಲಿಕ ನಿಲ್ದಾಣವಾಗಿತ್ತು. ಕಾಫಿ, ಟೀಗಳಿಗಷ್ಟೇ ಅಲ್ಲದೆ 'ಹಾಸಿಗೆಯನುಕೂಲತೆಗಳನ್ನು' ಒದಗಿಸುವ ತಾಣವಾಗಿತ್ತು. ಅಂತಕ್ಕನ ಹೋಟ್ಲು, ಮಗಳು ಕಾವೇರಿಯನ್ನು ದೇವಯ್ಯ ಸಾಹುಕಾರನೊಟ್ಟಿಗೆ ಸಲುಗೆಯಿಂದಿಡುತ್ತದೆ. ಗರತಿಯರ ಬಾಳುವಿಕೆಗಿಂತ ಬೇರೆಯಾಗಿರುವ ಅಂತಕ್ಕ ಸೇಡ್ತಿ-ಕಾವೇರಿ; ನಾಗತ್ತೆ-ನಾಗಕ್ಕರ ಜೋಡಿಗಳು ಗುತ್ತಿಯಂಥ ಗುತ್ತಿಯೂ ಮೀಸೆಯಂಚಲ್ಲಿ ವ್ಯಂಗ್ಯದಿಂದ ನಗತಕ್ಕ ಜೀವಗಳು ನಿಜ. ಆದರೆ, ಹುಟ್ಟಿಬಂದ ಕರ್ಮ ಕಳೆಯಲು ಅವರು ಇನ್ನೇನು ತಾನೇ ಮಾಡಬಹುದಿತ್ತು? ಎಂಬ ವಿಷಾದ ವಾಸ್ತವವನ್ನು ಕೃತಿಯ ನಿರೂಪಣೆ ಕಾಣಿಸುತ್ತದೆ. ನಾಗಕ್ಕನ ಬದುಕು

ಕೈಮೀರಿದ ತಿರುವುಗಳಲ್ಲಿ ಹಾದಾಡಿದೆ. ಅದಕ್ಕಾಗಿ ಮರುಗದೆ, ಕೂಡಿಕೆಯ ಸಂಬಂಧವಾದರೂ ಆ ಮನೆಯ ಒಳಿತು ಬಯಸುತ್ತಾಳೆ. ಚಿನ್ನಕ್ಕನ ಬದುಕು ಸಾಂಗವಾಗಲಿ ಎಂದು ಹಾರೈಸುತ್ತಾಳೆ. ಮಗಳ ಮೃತ್ಯುವಿನ ಭೀಕರತೆಯನ್ನು ಮರೆಯಲು ಅಂತಕ್ಕ, ಶಾಲೆಯ ಮಕ್ಕಳ ಹಾಸ್ಟೆಲ್ಲಾಗಿ ತನ್ನ ಹೋಟ್ಲು ಬದಲಾಗುವ ನಿರೀಕ್ಷೆಯಲ್ಲಿದ್ದಾಳೆ. ಬದುಕು ವೈಪರೀ-ತ್ಯಗಳಿಗೆ ಒಳಗಾದಾಗಲೂ ಅದನ್ನು ಸರಿಪಡಿಸಿಕೊಳ್ಳಲು ಸೆಣಸುವ ಹೆಣ್ಣು ಜೀವಗಳ ಜೀವನಪ್ರೀತಿಯಿದು. ಈ ಇಂತಹ ದುರ್ಬಲ ಸ್ತ್ರೀ ಪಾತ್ರಗಳ ಮೂಲಕವೇ ಕುವೆಂಪು ಹೆಣ್ಣಿನ ಸಶಕ್ತತೆಯ ಮೂಲ ಸೆಲೆಯನ್ನು ಶೋಧಿಸುತ್ತಾರೆ. ಒಬ್ಬ ಚೀಂಕ್ರ ದೇಯಿ-ಅಕ್ಕಣಿ-ಕಾವೇರಿಯರ ಬದುಕಿಗೆ ಬೆಂಕಿಯಿಕ್ಕುತ್ತ ಮತ್ತೂ ಸಭ್ಯಸ್ಥನಾಗಿಯೇ ಉಳಿದುಬಿಡುವ ಕ್ರೌರ್ಯವೇ, ಹೆಣ್ಣಿನ ಸತತ ಶ್ರಮವೂ ಸೋಲುವ ಕಾರಣದ ಶೋಧನೆಯಾಗಿದೆ.

೪. ನೀರ ದಾರಿಯ ಗುರುತುಗಳು :

ಹೆಣ್ತನದ ಕುರಿತ ಪಿತೃತ್ವದ ಆರೋಪಗಳು ಏನಿವೆಯೋ ಅವುಗಳನ್ನು ಹೆಣ್ತನದ ಸಂಕಥನದ ಮೂಲಕವೇ ಮರುವಿಚಾರಕ್ಕೆ ಒತ್ತಾಯಿಸುವ ಕೃತಿಯಿದು. ಹೆಣ್ಣೆಂದರೆ ದುರ್ಬಲೆ, ಚಂಚಲೆ, ಅಸೂಯಾಪರಳು ಇಂತಹ ನೂರಾರು ತಥಾಕಥಿತಗಳನ್ನು 'ಮದುಮಗಳು' ತನ್ನ ಸಹಜತೆಯಲ್ಲಿಯೇ ಪ್ರಶ್ನಿಸುತ್ತದೆ. ಗಂಡಾಳಿಕೆಯ ಜಾತಿ-ನೀತಿಗಳು ಹೆಣ್ಣು ಬಾಳಿನ ಹೋರಾಟದಲ್ಲಿ ಅಪ್ರಸ್ತುತವೆನಿಸಿಬಿಡುತ್ತವೆ. ಚಿನ್ನಕ್ಕ-ಪೀಂಚಲು; ಪೀಂ-ಚಲು ತಿಮ್ಮಿ; ನಾಗಕ್ಕ-ಚಿನ್ನಕ್ಕ ಈ ಜೊತೆಗಳು ಬದುಕನ್ನು ಕಟ್ಟಿಕೊಳ್ಳಲು ಸನ್ನದ್ಧರಾಗುವುದೇ ಪರಸ್ಪರರ ಬಗೆಗಿರುವ ನಿರುಪಮ ಸ್ನೇಹದಲ್ಲಿ. ಈ ಹೆಣ್ಣು ಜೀವಗಳು ಜೊತೆಯಾಗಿ ಆಡದ, ಕೇಳದ, ಕೂಡದ, ತಣಿಯದ ಕ್ಷಣಗಳಿಲ್ಲ ಎನ್ನುವಷ್ಟು ತೀವ್ರವಾದ ಬಾಂಧವ್ಯವದು. ನೆಲದ ಆಳದ ನೀರದಾರಿಯಂತಹ ಹೆಣ್ಣು ಸಂವೇದನೆಯನ್ನು, ಆ ಬೆಸುಗೆಯನ್ನು ಕಾಣಿಸುತ್ತಾರೆ ಕುವೆಂಪು. ಮಣ್ಣಿನ ಪದರು ಪದರುಗಳನ್ನು ಎತ್ತಿ ನೀರಸೆಲೆ ಕಾಣಿಸುವ ನಿತಾಂತ ಶ್ರದ್ಧೆಯಲ್ಲಿ.

ಕಾದಂಬರಿ ಗಂಡು-ಹೆಣ್ಣುಗಳನ್ನು ವಿರುದ್ಧ ನೆಲೆಗಳಲ್ಲಿ ಇಟ್ಟು ಸಂಘರ್ಷಿಸುವುದಿಲ್ಲ. ಬದುಕಿನ ಚೌಕಟ್ಟಿನಲ್ಲಿ ಇವು ವಿರುದ್ಧ ಧ್ರುವಗಳು ಅಲ್ಲವಲ್ಲ? ಜೊತೆ ಸಾಗುತ್ತಲೇ ಹೆಣ್ಣು ತನ್ನ ಹೆಜ್ಜೆಗಳನ್ನೂರಬೇಕಿದೆ ಎಂಬ ಸ್ಪಷ್ಟ ತಿಳಿವು ಕಾದಂಬರಿಯದು. ಐತ-ಪೀಂಚಲು ಬಗ್ಗೆ ಅಕಸ್ಮಾತ್ ಅನುಮಾನಿಸಿ, ಸಂಶಯ ಪರಿಹಾರ ಮಾಡಿಕೊಳ್ಳುತ್ತ ತನ್ನ ನಡತೆಯ ಬಗ್ಗೆ ತಾನೇ ನಾಚುತ್ತಾನೆ. ಪೀಂಚಲುವಿನ ಒಯ್ಯಾರಕ್ಕೂ ಅವಳ ಗಟ್ಟಿಗಿತ್ತಿತನಕ್ಕೂ ಬೆರಗಾಗುತ್ತಾನೆ. "ಹೌದೇನೇ, ಇದು ಹ್ಯಾಂಗೇ? . . " ಇಂಥವೇ ಉದ್ಗಾರಗಳು ಐತನದು. ಪೀಂಚಲು, ಐತನನ್ನು ಅಬೋಧನೆಂಬಂತೆ ಮುದ್ದುಗರೆದು ಸಂಭಾಳಿಸುತ್ತಾಳೆ. ತಾನು,

ಹೆಣ್ಣನ್ನು ಓಡಿಸಿಕೊಂಡು ಬಂದವನು ಎಂಬ ಅಹಂ ಗುತ್ತಿಯದು. ತಿಮ್ಮಿಯೆದುರಂತೂ ಮುಚ್ಚಿಟ್ಟುಕೊಳ್ಳಲಾಗದ ಏರುಭಾವವದು. ಹುಲಿಕಲ್ ನೆತ್ತಿಯ ಆ ಬೆಳಗಿನಲ್ಲಿ ಕಾವಣ ಕಾಡು-ಕಣಿವೆಯನ್ನೆಲ್ಲ ಮುಚ್ಚಿದಂತಹ ಭೂಮಾನುಭೂತಿಯ ಬೆರಗಿನಲ್ಲಿ-'ಅಃ ಭಾವ ನಮ್ಮ ಬಿಡಾರ ಇಲ್ಲೇ ಇದ್ದಿದ್ರೆ' ಎಂದು ಉದ್ಗರಿಸುತ್ತಾಳೆ ತಿಮ್ಮಿ, ಆ ಖುಷಿಯ ನಡಿಗೆ ಯಲ್ಲಿಯೇ ಗುತ್ತಿಗೆ, ತನ್ನ ಹಿಂದೆ ತಿಮ್ಮಿ ಓಡಿಬಂದಿದ್ದು ಕಣ್ಣಾಪಂಡಿತರು ಕೊಟ್ಟ ಅಂತ್ರದ ಪ್ರಭಾವದಿಂದ- ಎಂದು ಜಂಭಕೊಚ್ಚಿಕೊಳ್ಳಬೇಕೆನಿಸಿತು. 'ಈ ಅಂತ್ರವೇ ಚುಟಗಿ ಹಾಕಿ ಕರದ್ರೆ ನಾಯಿ ಬರಾಹಂಗೆ' ನೀ ಬರಲು ಕಾರಣವಾದದ್ದು ಎಂದ. ಆಗ ತಿಮ್ಮಿ, ಕಣ್ಣಾ ಪಂಡಿತರಿಂದ ಅಂತ್ರವನ್ನು ಬಚ್ಚನೂ ತಂದಿದ್ದ. ಅವನೂ ನಿನ್ನಾಂಗೆ ತೋರಿಸಿದ್ದ-ಎಂದು ಗತ್ತಿನಿಂದಲೇ ಹೇಳಿದಳು. ಗುತ್ತಿ ಬೆಪ್ಪಾದ. ನಾ ಬಂದಿದ್ದು ನನ್ನ ಆಯ್ಕೆ, ಯಾವ ಅಂತ್ರವೂ ನನ್ನ ನಾಯಿಹಂಗೆ ಎಳೆದು ತರಲಾರದು-ಎಂದು ದೃಢವಾಗಿಯೇ ಹೇಳಿದ್ದಳು ತಿಮ್ಮಿ. ನಗೆಯಲ್ಲೇ. ಮತ್ತೆ ಗುತ್ತಿಯ ಅಹಂಕಾರ ತಲೆಯೆತ್ತದಂತೆ. ಗುತ್ತಿ, ಹುಲಿಯನನ್ನು ಕಳೆದು ಕೊಂಡು ಕಣ್ಣೊರೆಸಿಕೊಳ್ಳುತ್ತಿದ್ದ ಆ ಸಂಕಟದಲ್ಲಿ, ತಾವೀಗ ದುಡಿಮೆಗೆ ಸೇರಬೇಕಾದ ಜಮೀನದ್ದಾರರು ತನ್ನ ಮೈಯನ್ನು ಕಣ್ಣೆಂಜಲು ಮಾಡುತ್ತಿರುವ ಇರುಸುಮುರಿಸಿಗೆ, ಸ್ವರಕ್ಷಣೆಯ ಮೊದಲ ಪಟ್ಟು ಎನ್ನುವಂತೆ ತಿಮ್ಮಿ ತಿರುವಿ ನಿಲ್ಲುತ್ತಾಳೆ. ಒಳಗಣ ರಣರಂಗ, ಹೊರಗಣ ರಣರಂಗ – ಎರಡನ್ನೂ ಎದುರಿಸ ಬೇಕಲ್ಲವೇ ಎಂಬ ದೃಢತೆಯಲ್ಲಿ.

ಕಾದಂಬರಿ ಸಣ್ಣ ಸಣ್ಣ ವಿವರಗಳಲ್ಲಿ ಹೆಣ್ಣಿನ ಮನಸ್ಸನ್ನು ದಾಖಲಿಸುತ್ತದೆ. ನೀರಿ ನೊಳಗಿರುವ ಮೀನಿನ ಮೈಯ ಮಿರುಗನ್ನು ಬರೆವ ಕಲಾವಿದನ ಶ್ರದ್ಧೆಯಲ್ಲಿ. ಚಿನ್ನಕ್ಕ-ಮುಕುಂದಯ್ಯರ ಪ್ರೇಮದ, ತ್ಯಾಗದ, ಆದರ್ಶದ ಜೊತೆಯಲ್ಲಿ ಪ್ರಖರವಾಗಿ ಬೆಳಗು ವವಳು ಚಿನ್ನಮ್ಮನೇ. "ಶಠ ಸಂಪ್ರದಾಯಬದ್ಧವಾದ ಕುಲೀನ ಸಮಾಜದಲ್ಲಿ ನಾಗರಿಕ ಅಕ್ಷರ ವಿದ್ಯೆಯ ಗಂಧವೂ ಇಲ್ಲದ ಲಜ್ಜಾಶೀಲಳಾದ ಸಣ್ಣ ಹುಡುಗಿಯೊಬ್ಬಳು ಧೈರ್ಯಮಾಡಿ ಮಾನ ಮರ್ಯಾದೆ, ಕ್ಷೇಮ, ಬಂಧು ಬಾಂಧವರು ಯಾವುದನ್ನೂ ಲಕ್ಷಿಸದೆ ತನ್ನ ಮದುವೆಯ ದಿನವೆ ತಾನೊಲಿದವನಿಗಾಗಿ ಸಾಹಸಿಯಾಗಿದ್ದನ್ನು" ಮುಕುಂದಯ್ಯ ಬೆರಗಾಗಿ ನೋಡುತ್ತಿದ್ದ. ಅದೇ ಬೆರಗು ಚಿನ್ನಮ್ಮಳನ್ನು ತಿಳಿದೆ-ಅರಿತೆ ಎಂದುಕೊಳ್ಳು ತ್ತಿರುವ ಪ್ರತಿ ಹಂತದಲ್ಲೂ ಮತ್ತೊಂದೇ ಆಗಿ ಬೆಳೆಯುತ್ತ ಹೋಗುತ್ತದೆ. ಕಾದಂಬರಿಯ ಕಟ್ಟಕಡೆಯಲ್ಲಿ ಮುರಿನೊಲೆಯ ಕೆಂಗೆಂಡದ ಬೆಚ್ಚಗಿನ ಕಾವಿನ ಪಕ್ಕ ಮುದುರಿ ಪೀಂ ಚಲುವಿನೊಂದಿಗೆ ಮಲಗಿದ್ದ ಚಿನ್ನಕ್ಕ ಆಲಿಸಲಿ ಎಂಬ ಸುಖಾನುಭವದಲ್ಲಿ ಮುಕುಂದಯ್ಯ ಮಾತನಾಡುತ್ತಾನೆ.

'ಮದುಮಗಳು' ಕಾದಂಬರಿ, ಹೆಣ್ತನದ ಮಾಗುವಿಕೆಯು ಲೋಕ ನಿಯತಿಯನ್ನು ಮೃದುಗೊಳಿಸಬೇಕೆಂಬ ಹಂಬಲವನ್ನು ಪ್ರತಿಪಾದಿಸುತ್ತದೆ. ಇಲ್ಲಿ ಗುತ್ತಿ, ಐತ, ಮುಕುಂ

ದಯ್ಯ ಎಲ್ಲರೂ ಈ ಮಾಗುವಿಕೆಯಲ್ಲಿ ಹದಗೊಂಡವರೇ. ಭಯ, ಆತಂಕ, ಲಜ್ಜೆ, ಮುಜುಗರ, ಕಣ್ಣೀರುಗಳಿಲ್ಲದ ಗಂಡಸುತನದ ಕಾಠಿಣ್ಯಕ್ಕೆ ಒಳಗಾಗದೆ, ಜೊತೆ ಜೀವಗಳೊಂದಿಗೆ ಸಹಯಾನವನ್ನು ಸುಂದರವಾಗಿಸಿಕೊಳ್ಳುತ್ತಾರೆ. ಮದುಮಗಳು ಕೃತಿ ಶೀರ್ಷಿಕೆಯಲ್ಲಿ ಮಾತ್ರ ಹೆಣ್ಣನ್ನು ಸೂಚಿತವಾಗಿಸಿದ್ದಲ್ಲ. ಹೆಣ್ಣಿನ ಬೇಕು ಬೇಡಗಳ, ದುಡಿಮೆ ವಿರಾಮಗಳ, ನೆತ್ತರು ಬೆವರು ಕಣ್ಣೀರುಗಳ ಸಂಕಥನವಾಗಿದೆ. "ಮುಟ್ಟಾದ ಮೂರು ದಿನವಾದರೂ ಮಲೆನಾಡಿನ ಮಹಿಳೆಯರಿಗೆ ನಿವೃತ್ತಿ ಜೀವನದ ವಿರಾಮದ ಹಕ್ಕು ಇರುತ್ತಿತ್ತಷ್ಟೇ"–ಎಂದು ಮುಕ್ತಾಯವಾಗುವುದು ಈ ಒಟ್ಟಾರೆ ಚಲನೆಯ ಸಂಕೇತ. ಮುಟ್ಟು ಮತ್ತು ಕೃಷಿ ಬಾಳಿನ ಮುನ್ನಡೆಗಳೇ. ಹೆಣ್ಣು ಬಾಳನ್ನು, ಹೆಣ್ಣು ಮನಸ್ಸನ್ನು ಇಷ್ಟು ಗಾಢವಾಗಿ ಆವರಿಸಿಕೊಳ್ಳುವಂತೆ ಹಿಡಿದಿಟ್ಟ ಕಾದಂಬರಿ ಕನ್ನಡದಲ್ಲಿ ಅಪರೂಪವೇ. 'ಮದುಮಗಳ' ಪ್ರತಿ ಓದೂ ತಿಮ್ಮಿ ಕಂಡ ಕಾವಣದ ಬೆರಗಿನಂತೆ. ಕಂಡದ್ದನ್ನು ಕಾಣಿಸುವ ಪ್ರಯತ್ನದಲ್ಲಿ – ವಿಸ್ಮಿತ ಸಂತಸವನ್ನು ವ್ಯವಹಾರಿಕವಾಗಿ ಹೇಳಿದಂತಾಗಿಬಿಡುತ್ತದೆ. ಓದು ಆಳದ ಸಂತಸವನ್ನು ಹೆಚ್ಚಿಸುತ್ತದೆ. ಅದರೆದುರು ಮಾತು ಪೇಲವವಾಗಿ ಸೋಲುತ್ತದೆ.

೬. 'ಮಲೆಗಳಲ್ಲಿ ಮದುಮಗಳು' – ಒಂದು ಮರು ಓದು

– ಜಿ. ರಾಜಶೇಖರ

ಕುವೆಂಪು ಅವರ ಬರಹಗಳಲ್ಲಿ ಮಲೆನಾಡು ಪ್ರತಿಮೆ, ರೂಪಕ, ಸಂಕೇತ ಮತ್ತು ಇವೆಲ್ಲದರ ಜೊತೆ ವಾಸ್ತವದ ಜಗತ್ತಿನಲ್ಲಿ ಇರುವ ಒಂದು ಭೌಗೋಳಿಕ ಪ್ರದೇಶವೂ ಆಗಿ ಕಾಣಿಸಿಕೊಳ್ಳುತ್ತದೆ. ಮಲೆನಾಡಿನ ಏಕಾಂತ, ಈ ಲೇಖಕನನ್ನು ಆಧ್ಯಾತ್ಮದ ಅನುಸಂಧಾನ ದಲ್ಲಿ ತೊಡಗಿಸಿದರೆ, ಅದರ ನೀರವ ಮೌನ, ಅವರಿಗೆ ಧ್ಯಾನದಂತೆ ಭಾಸವಾಗುತ್ತದೆ. ಮಲೆನಾಡು ಕುವೆಂಪು ಅವರ ನೆನಪು ಮತ್ತು ಕನಸು; ಜೊತೆಗೆ ಅದು ವರ್ತಮಾನದ ಈ ಕ್ಷಣದ ಹದಗೆಟ್ಟ ಇರಸ್ತಿಕೆಯೂ ಹೌದು. ಇದನ್ನೆಲ್ಲ ಒಂದೇ ಉಸಿರಿನಲ್ಲಿ ಹೇಳುವ 'ಹೋಗುವೆನು ನಾ' [೧೯೩೫] ಎಂಬ ಕವಿತೆಯಲ್ಲಿ ಕವಿ ತನ್ನ ಆದರ್ಶದ ಮಲೆನಾಡನ್ನು ಹೀಗೆ ಬಣ್ಣಿಸುತ್ತಾರೆ:

> **'ಅಲ್ಲಿ ಇಂತಿರಬೇಕು, ಇಂತಿರಬಾರದೆಂಬುದಿಲ್ಲವೈ**
> **ಅಲ್ಲಿ ಹೊರೆ ಹೊಣೆಯಿಲ್ಲ; ಶಾಸ್ತ್ರದ ವಿಧಿನಿಷೇಧಗಳಿಲ್ಲವೈ**
> **ಜಾತಿಗೀತಿಯ ವೇದಭೇದದ ಕಟ್ಟು ಕಟ್ಟಳೆನಿಲ್ಲದೈ**
> **ಅಲ್ಲಿ ಪ್ರೀತಿಯೆ ನೀತಿ; ಧರ್ಮಕೆ ಬೇರೆ ಭೀತಿಯೆ ಸಲ್ಲದೈ'**

[ಕುವೆಂಪು ಅವರ ಆಯ್ದ ಕವಿತೆಗಳು–ಅಕ್ಷರ ಪ್ರಕಾಶನ ಹೆಗ್ಗೋಡು, ೨೦೦೬–ಪುಟ ೫೬]

ಕವಿತೆಯ ಬಗ್ಗೆ ತನ್ನ ಲೇಖನವೊಂದರಲ್ಲಿ ವಿಮರ್ಶಕ ಟಿ.ಪಿ. ಅಶೋಕ್, ಈ ಸಾಲುಗಳನ್ನು ಉದ್ಧರಿಸಿ, 'ಇವನ್ನು ಓದುತ್ತಿದ್ದಂತೆ ಕುವೆಂಪು ಅವರು ಇಲ್ಲಿ ಯಾವ ಮಲೆನಾಡನ್ನು ಧ್ಯಾನಿಸುತ್ತಿದ್ದಾರೆ ಎಂಬ ಪ್ರಶ್ನೆ ಏಳುತ್ತದೆ' ಎಂದು ಹೇಳಿರುವುದು ಸರಿಯಾದ ಮಾತು. [ಕಾವ್ಯ ಪ್ರೀತಿ–ಅಕ್ಷರ ಪ್ರಕಾಶನ– ೨೦೧೩, ಪುಟ ೩೪]. ಮಲೆ ನಾಡಿನ ಹಳ್ಳಿಗಳ ಸಾಮಾಜಿಕ ಕಟ್ಟುಪಾಡು, ಜಾತಿ ತಾರತಮ್ಯ, ರೀತಿ ರಿವಾಜು, ವ್ರತ ಆಚರಣೆ ಮುಂತಾದವುಗಳ ಜೊತೆ ಮಲೆನಾಡಿನ ವಿವಿಧ ಸಮುದಾಯಗಳ ವಿಶಿಷ್ಟ ಅಡುಗೆ ಬಗ್ಗೆ ಕೂಡ ಕುವೆಂಪು ಬರೆದಿದ್ದಾರೆ. ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮಲೆನಾಡಿನದ್ದೇ ಪ್ರಧಾನ ಭೂಮಿಕೆ; ಮಲೆನಾಡು ಕುವೆಂಪು ಅವರಿಗೆ ಸ್ವಾಯುತ್ತತೆ, ಸ್ವಾತಂತ್ರ್ಯ ಮತ್ತು ಸಹಬಾಳ್ವೆಯ ಒಂದು ಸಾಧ್ಯತೆ; ಜೊತೆಗೆ, ಜಿದ್ದು, ಜಾತಿ,

ವೈಷಮ್ಯ, ಲೈಂಗಿಕ ಬಯಕೆ, ಆಸ್ತಿ, ಬಡತನ ಮತ್ತು ಭೂಮಾಲಕರ ದಬ್ಬಾಳಿಕೆಗಳ ವರ್ತಮಾನದ ಸ್ಥಿತಿ ಎಂಬಂತೆಯೂ ಅವರು ತಮ್ಮ ಕಾದಂಬರಿಯಲ್ಲಿ ಮಲೆನಾಡನ್ನು ಚಿತ್ರಿಸಿದ್ದಾರೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಮಲೆನಾಡು, ಮನುಷ್ಯ ನಿಸರ್ಗದ ಜೊತೆ ಹೊಂದಿಕೊಂಡು ಬಾಳುವ, ಒಮ್ಮೊಮ್ಮೆ ಕೇವಲ ತನ್ನ ಉಳಿವಿಗೋಸ್ಕರ ನಿಸರ್ಗದ ಜೊತೆ ಸೆಣಿಸಾಡುತ್ತ, ಬದುಕುತ್ತಿರುವ ಒಂದು ಪ್ರದೇಶ. ಈ ಮಲೆನಾಡನ್ನು ಹಾಲಿ ಕರ್ನಾಟಕದ ಮತ್ತು ಭಾರತದ ಭೂಪಟಗಳಲ್ಲಿ ಸಹ ಗುರುತಿಸಬಹುದು.

ಸರಳವೂ ಸ್ವಯಂವೇದ್ಯವೂ ಆಗಿರುವ ಈ ಸಂಗತಿಯನ್ನು ಹೇಳುತ್ತಿರುವುದಕ್ಕೆ ಒಂದು ಕಾರಣವಿದೆ. ೧೯೮೭ರ ಸುಮಾರಿಗೆ, ಸರಕಾರ, ಪಶ್ಚಿಮ ಘಟ್ಟದ ಆಸುಪಾಸಿನಲ್ಲಿರುವ ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಅರಣ್ಯ ಪ್ರದೇಶಕ್ಕೆ ಸಂಬಂಧಿಸಿದ ಹಾಗೆ 'ರಾಷ್ಟ್ರೀಯ ಉದ್ಯಾನ ಯೋಜನೆ'ಯನ್ನು ರೂಪಿಸಿತು. ಮಲೆನಾಡಿನ ಕಾಡುಗಳ ನಡುನಡುವೆ ಜನ, ಬಹಳ ಹಿಂದಿನಿಂದಲೂ ನೆಲೆಸಿದ್ದು, ಬೇಸಾಯ, ವಾಣಿಜ್ಯ, ತೋಟಗಾರಿಕೆ [ಉದಾ: ಅಡಿಕೆ, ಕಾಫಿ] ಮುಂತಾದ ವೃತ್ತಿಗಳನ್ನು ಮಾಡಿಕೊಂಡಿದ್ದರು. ಮಲೆನಾಡಿನ ಅರಣ್ಯಗಳ ಪ್ರಾಣಿ, ಪಕ್ಷಿ, ಹುಳಹುಪ್ಪಟೆ, ಗಿಡ, ಮರ, ಬಳ್ಳಿಗಳ ಜೀವಜಗತ್ತಿಗೆ, ಅಲ್ಲಿ ವಾಸಿಸಿಕೊಂಡಿದ್ದ ಮನುಷ್ಯರಿಂದ ವಿಶೇಷವಾದ ಹಾನಿ ಆಗಿರಲಿಲ್ಲ. ಆದರೆ ಮಲೆನಾಡಿನ ಪರಿಸರಕ್ಕೆ, ಅಲ್ಲಿನ ಜನರಿಂದಲೇ ಅಪಾಯವಿದೆ ಎಂದು ಯೋಚಿಸಿದ ಸರಕಾರ, ರಾಷ್ಟ್ರೀಯ ಉದ್ಯಾನ ಯೋಜನೆಯ ವ್ಯಾಪ್ತಿಯ ಒಳಗಿನ ಪ್ರದೇಶದಲ್ಲಿ ನೆಲೆಸಿದ್ದವರನ್ನೆಲ್ಲ ಬಲಾತ್ಕಾರದಲ್ಲಿ ಒಕ್ಕಲೆಬ್ಬಿಸಲು ಶುರುಮಾಡಿತು. ಹೀಗೆ ಮಲೆನಾಡಿನ 'ಅಭಿವೃದ್ಧಿ'ಗೆಂದು ಸರಕಾರ ರೂಪಿಸಿದ ಯೋಜನೆ, ಮಲೆನಾಡಿನಲ್ಲಿ ಲಾಗಾಯ್ತಿನಿಂದಲೂ ನೆಲೆಸಿದ್ದ ಸಾವಿರಾರು ಜನರನ್ನು ಅವರು ನಿಂತ ನೆಲದಲ್ಲೇ ನಿರಾಶ್ರಿತರನ್ನಾಗಿಸಿತು. ಮಲೆನಾಡಿನಲ್ಲಿ ವಾಸಿಸುತ್ತಿರುವ ಜನಗಳೇ ಮಲೆನಾಡಿನ ಪರಿಸರದ ಶತ್ರುಗಳು ಎಂಬ ಸರಕಾರದ ಅಪಕಲ್ಪನೆಯಿಂದಾಗಿ, ಈಗ ಮಲೆನಾಡಿನ ಪರಿಸರ ರಕ್ಷಣೆಯ ಇಡೀ ಭಾರವನ್ನು ಅಲ್ಲಿ ವಾಸಿಸುತ್ತಿರುವ ಜನರಷ್ಟೇ ಹೊರಬೇಕಾಗಿದೆ.

ಈ ಹಿನ್ನೆಲೆಯಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಮರು ಓದು, ನಮ್ಮನ್ನು ಅಸ್ವಸ್ಥಗೊಳಿಸುತ್ತದೆ. ಮಲೆನಾಡಿನ ದಟ್ಟವಾದ ಕಾಡು, ಹುಲಿಕಲ್ಲು ನೆತ್ತಿಯಂತಹ ದುರ್ಗಮ ಗಿರಿಶಿಖರಗಳು, ಕಾಡು ಹಂದಿ, ಕಾಡುಕೋಣ, ಹುಲಿ, ಚಿರತೆ, ಹೆಬ್ಬಾವು, ನಾಗರಹಾವು ಮತ್ತು ಇತರ ಪ್ರಾಣಿ ಪಕ್ಷಿಗಳು, ಅಲ್ಲಿನ ಗಾಳಿ, ಮಳೆ, ಮಂಜು ಮತ್ತು ಚಳಿ ಹಾಗೂ ಇದೆಲ್ಲದರ ಜೊತೆ ಏಗಿಕೊಂಡು ಬಾಳುತ್ತಿರುವ ಅಲ್ಲಿನ ಜನರು-ಅವರ ಹುಟ್ಟು, ಬಾಲ್ಯ ವಿವಾಹ, ಮರಣಗಳಂತಹ 'ಜೀವನ ಚಕ್ರದ ಆಚರಣೆಗಳು' ದುಃಖ ದುಮ್ಮಾನಗಳು – ಇದೇ ಕುವೆಂಪು ಅವರ ಕಾದಂಬರಿಯ ವಸ್ತು. ಆದರೆ 'ಮಲೆನಾಡು ಒಂದು

ರಾಷ್ಟ್ರೀಯ ಉದ್ಯಾನ' ಎಂಬ ಭಾರತ ಸರಕಾರದ ನಿರ್ವಚನೆ ಅಲ್ಲಿ ನೆಲೆಸಿರುವ ಮನುಷ್ಯರನ್ನೇ ಮಲೆನಾಡಿಗೆ 'ಅನ್ಯ'ರನ್ನಾಗಿ ಮಾಡಿದೆ. ಕುವೆಂಪು ಅವರ ಕಾದಂಬರಿ ಈಗ ಕೆಲವು ಪುಟಗಳ ಮಟ್ಟಿಗೆ ಅದ್ಭುತರಮ್ಯ ಕತೆಯ ಹಾಗೆ ಇದೆ; ಕಾದಂಬರಿಯ ಇನ್ನು ಕೆಲವು ಪುಟಗಳು ಒಂದು ಅಸಂಗತ ನಾಟಕದಂತೆಯೂ, ಉಳಿದ ಭಾಗಗಳು ಸಂದು ಹೋದ ಕಾಲದ ನೆನಪು ಮತ್ತು ಹಂಬಲಗಳ ನಿರೂಪಣೆಯಂತೆಯೂ ಓದಿಸಿಕೊಳ್ಳುತ್ತವೆ. ಆ ಬಗೆಯ 'ತಲ್ಲಣದ ಓದಿ'ನ ಬದಲು ಸಮಕಾಲೀನ ವಿದ್ಯಮಾನಗಳನ್ನೆಲ್ಲ ಬದಿಗೊತ್ತಿ, ರಾಜಕೀಯದ ಕುರಿತು ಸಹ ತಲೆಕೆಡಿಸಿಕೊಳ್ಳದೆ, 'ರಸೈಕ ದೃಷ್ಟಿಯಿಂದ' ಓದುವುದು ಮಾತ್ರ ಈಗ ಕಾದಂಬರಿಯನ್ನು ಓದುವ ಸರಿಯಾದ ವಿಧಾನವೆ?

ಅದು ಹೇಗೂ ಇರಲಿ, ಮಲೆನಾಡಿನಲ್ಲಿ ಜನವಸತಿ ಮತ್ತು ಅದರೊಟ್ಟಿಗೇ ಬರುವ ಬೇಸಾಯ, ಸಾಕು ಪ್ರಾಣಿಗಳು, ವ್ಯಾಪಾರ ವಹಿವಾಟು ಮುಂತಾದವು ಕುವೆಂಪು ಅವರ ದೃಷ್ಟಿಯಲ್ಲಿ ಅಸಂಗತವೂ ಅಲ್ಲ; ವಿರೋಧಾಭಾಸವೂ ಅಲ್ಲ. ಅವರ ಈ ಕಾದಂಬರಿಯ ಶೀರ್ಷಿಕೆ ಕೂಡ ಮಲೆನಾಡನ್ನು ಕುರಿತ, ಅವರ ಈ ತಿಳುವಳಿಕೆಯನ್ನೇ ಧ್ವನಿಸುತ್ತದೆ; 'ಮಲೆಗಳಲ್ಲಿ ಮದುಮಗಳು'- ಈ ಹೆಸರಿನಲ್ಲಿ 'ಮಲೆ' ಅರಣ್ಯವನ್ನು ಸೂಚಿಸಿದರೆ, 'ಮದುಮಗಳು' ಎಂಬ ಪದ ಸಂಸಾರ ಜೀವನದ ಜೊತೆಗೆ, ನಾಗರಿಕತೆಯ ಬಹು ಮುಖ್ಯ ಆಚರಣೆಯೊಂದರ ಕುರಿತು ಸಹ ಹೇಳುತ್ತದೆ. ಅದಕ್ಕೆ ಸರಿಯಾಗಿ ಕಾದಂಬರಿ ಯಲ್ಲಿ ಓದುಗರಿಗೆ ಎದುರಾಗುವುದು ಕೇವಲ ಒಬ್ಬಳು ಮದುಮಗಳಲ್ಲ; ಬದಲಿಗೆ ಮದುಮಕ್ಕಳ ಎರಡು ಜೋಡಿ : ಗುತ್ತಿ ತಿಮ್ಮಿಯರದ್ದು ಮದುಮಕ್ಕಳ ಒಂದು ಜೋಡಿ ಯಾದರೆ ಮುಕುಂದಯ್ಯ ಚಿನ್ನಕ್ಕರದ್ದು ಇನ್ನೊಂದು ಜೋಡಿ. ಈ ಎರಡು ಜೋಡಿಗಳ ಜೊತೆ, ಕಾದಂಬರಿಯ ಕಥಾನಕ ಪ್ರಾರಂಭವಾಗುವ ಮೊದಲೇ ಮದುವೆಯಾಗಿದ್ದರೂ, ಹೊಸ ಮದುಮಕ್ಕಳ ಸಂಭ್ರಮ, ಪರಸ್ಪರ ಪ್ರೀತಿ, ಮತ್ತು ಆ ಪ್ರೀತಿಯ ಕುರಿತೇ ಈರ್ಷ್ಯೆ ಸಂದೇಹಗಳಿಂದ ಇನ್ನೂ ಹೊರಬರದ, ಈಗಲೂ ಹೊಸ ಮದುಮಕ್ಕಳ ಹಾಗೆಯೇ ವರ್ತಿಸುವ ಐತ ಮತ್ತು ಪೀಂಚಲು, ಅವರ ಜೋಡಿ ಕೂಡ ಕಾದಂಬರಿಯ ಕತೆಯನ್ನು ಬೆಳೆಸುತ್ತದೆ. ಪ್ರೀತಿಯಲ್ಲಿ ಒಂದಾಗಿರುವ ಈ ಮೂರು ಜೋಡಿಗಳ ಜೊತೆ ಕಾದಂಬರಿ ಯಲ್ಲಿ ವಿಕೃತ ಶೃಂಗಾರದ ನಾನಾ ಬಗೆಗಳು ಸಹ ಚಿತ್ರಿತವಾಗಿವೆ. ವೃದ್ಧಾಪ್ಯದಲ್ಲಿರುವ ಮದುವೆ ಗಂಡನ್ನು ವಂಚಿಸಿ, ಎಳೆ ಪ್ರಾಯದ ವಧು ಪಲಾಯನಮಾಡುವುದು, ರೋಗಿಷ್ಠ ಗಂಡ ಮತ್ತು ಅವನ ಪತ್ನಿಯ ನೆವ ಮಾತ್ರದ ದಾಂಪತ್ಯ, ಅಕಾಲದಲ್ಲಿ ವಿಧವೆಯಾದ ಯುವತಿಯೊಬ್ಬಳ 'ಸೀರುಡಿಕೆ'ಯ ಮದುವೆ, ವಿಕೃತ ಕಾಮಿಯಾದ ಗಂಡನೊಬ್ಬ ಅಸ್ವ ಸ್ಥಳಾಗಿ ಹಾಸಿಗೆ ಹಿಡಿದಿರುವ ತನ್ನ ಪತ್ನಿಯನ್ನೇ ಬಲಾತ್ಕಾರದಲ್ಲಿ ಸಂಭೋಗಿಸಿ, ಅವಳ ಸಾವಿಗೆ ಕಾರಣನಾಗುವುದು, ಹಳ್ಳಿಯ ತನ್ನ ಮನೆಯಲ್ಲಿ ಹೊಸದಾಗಿ ಹೋಟೆಲು ನಡೆಸುತ್ತಿದ್ದ ಮಹಿಳೆಯೊಬ್ಬಳ, ಪ್ರಾಯಕ್ಕೆ ಬಂದ ಮಗಳ ಮೇಲೆ ನಡೆಯುವ ಸಾಮೂಹಿಕ

ಅತ್ಯಾಚಾರ-ಹೀಗೆ ಹೆಣ್ಣು ಗಂಡುಗಳ ಸರಸ, ವಿರಸ, ರತಿ ವಿಕೃತಿಗಳ ಹಲವು ನಮೂನೆಗಳನ್ನು ಕಾದಂಬರಿ ನಿರೂಪಿಸುತ್ತದೆ. ತೋಡು, ತೊರೆ, ಹಳ್ಳ ಕೊಳ್ಳಗಳನ್ನೆಲ್ಲ ಜೊತೆಗೂ-ಡಿಸಿಕೊಂಡು ಸಮುದ್ರದತ್ತ ಸಾಗುವ ನದಿಯಂತೆ ಕತೆ, ಉಪಕತೆ, ವೃತ್ತಾಂತ, ಐತಿಹ್ಯ, ಚಾಡಿ, ತರಲೆಗಳನ್ನೆಲ್ಲ ತನ್ನ ಹರಿವಿನಲ್ಲಿ ಸೇರಿಸಿಕೊಂಡು ಮುಂದೆ ಹೋಗುವ ಈ ಕಾದಂಬರಿಗೆ ಕೇಂದ್ರವೊಂದು ಇದ್ದರೆ-ಅಂತಹ ಒಂದು ಕೇಂದ್ರ ಬೇಕೇಬೇಕು ಎಂದಾದರೆ ನೂತನ ವಧೂವರರು ತಮಗೆದುರಾದ ಕ್ಲೇಶಗಳನ್ನೆಲ್ಲ ನಿವಾರಿಸಿಕೊಂಡು ಸಂಸಾರವಂದಿಗರಾಗುವುದೇ, ಅದರ ಕೇಂದ್ರ.

ಕಾದಂಬರಿಯ ವಧೂವರರ ಮೂರು ಜೋಡಿಗಳಲ್ಲಿ, ಮುಕುಂದಯ್ಯ ಮತ್ತು ಚಿನ್ನಮ್ಮ ಹಾಗೂ ಗುತ್ತಿ ಮತ್ತು ತಿಮ್ಮಿಯರ ಪ್ರಣಯ, ಒಂದು ಅದ್ಭುತ ರಮ್ಯ ಕತೆಯಂತೆ ಕಾಣುತ್ತದೆ. ಚಿನ್ನಮ್ಮನ ಮದುವೆ ನಿಗದಿಯಾದದ್ದು ವಯೋವೃದ್ಧನಾದರೂ ದೊಡ್ಡ ಭೂಮಾಲಕನಾಗಿದ್ದ ಸಿಂಭಾವಿ ಭರಮೈ ಹೆಗಡೆಯ ಜೊತೆಗೆ. ಆತನಿಗೆ ಈಗಾಗಲೇ ಮದುವೆಯಾಗಿದೆ. ಆದರೆ ತನ್ನ ಮೊದಲ ಪತ್ನಿಯಲ್ಲಿ ಮಕ್ಕಳನ್ನು ಪಡೆಯಲು ವಿಫಲ ನಾದ ಕಾರಣಕ್ಕೆ, ಅವಳು ಜೀವಂತವಿರುವಾಗಲೇ ಭರಮೈಹೆಗಡೆ ಇನ್ನೊಂದು ಮದುವೆ ಮಾಡಿಕೊಳ್ಳಲು ನಿರ್ಧಾರ ಮಾಡಿದ್ದಾನೆ. ಚಿನ್ನಮ್ಮನಿಗೆ ಈ ಸಂಬಂಧ ಸುತಾರಾಂ ಇಷ್ಟವಿಲ್ಲ. ಭರಮೈ ಹೆಗಡೆಯನ್ನು ಒಲ್ಲದ ಮದುಮಗಳು ಚಿನ್ನಮ್ಮ ಉಪಾಯದಲ್ಲಿ ಮದುವೆ ಮನೆಯಿಂದಲೇ ಪಲಾಯನ ಮಾಡಿ, ತನ್ನ ಪ್ರಿಯಕರ ಮುಕುಂದಯ್ಯನನ್ನು ವರಿಸುತ್ತಾಳೆ. ಅಸ್ಪೃಶ್ಯ ಜಾತಿಯ ಹುಡುಗಿ ತಿಮ್ಮಿ, ಕಾದಂಬರಿಯ ಮತ್ತೋರ್ವ ಮದು ಮಗಳು. ಚಿನ್ನಮ್ಮನ ಹಾಗೆ ಅವಳಿಗೂ ಸಹ ಇಷ್ಟವಿಲ್ಲದ ಗಂಡೊಬ್ಬನ ಜೊತೆ ಮದುವೆ ನಿಶ್ಚಯವಾಗಿದೆ. ತಿಮ್ಮಿ ಅವಳ ಸೋದರ ಸಂಬಂಧಿಯೂ ಪ್ರಿಯತಮನೂ ಆದ ಗುತ್ತಿ ಯೊಡನೆ, ಸೇರಿಕೊಂಡು ಅವರಿಬ್ಬರೂ ಮನೆ ಮಾರು ತೊರೆದು, ತಮ್ಮ ಹಿರಿಯರ ಕಣ್ಣುತಪ್ಪಿಸಿ ಲಗ್ನವಾಗುತ್ತಾರೆ.

ಈ ಎರಡು ಜೋಡಿಗಳ ಜೊತೆಗೆ ಕಾದಂಬರಿಯ ಕಥಾ ನಕದಲ್ಲಿ ಪ್ರಧಾನ ಪಾತ್ರವಹಿಸುವ ಮೂರನೆಯ ಮದುಮಕ್ಕಳ ಜೋಡಿ ಗಟ್ಟದ ತಗ್ಗಿನಿಂದ ಹೊಟ್ಟೆಪಾಡಿಗಾಗಿ ದುಡಿಯಲು ಬಂದಿದ್ದ ಬಿಲ್ಲವರ ಜಾತಿಯ ಐತ ಮತ್ತು ಅವನ ಹೆಂಡತಿ ಪೀಂಚಲು – ಈ ತರುಣ ದಂಪತಿಗಳದ್ದು. ಅದು ಎಂತಹ ಚೆಲುವಿನ ಜೋಡಿ ಎಂದರೆ ಅವರ ದಣಿ ಮುಕುಂದಯ್ಯ ನಿಗೆ ಐತ ಮತ್ತು ಪೀಂಚಲು 'ಬಿಲ್ಲ ವೇಷದ ಶಿವಶಿವಾಣಿ- ಯರಂತೆ' ತೋರುತ್ತಾರೆ. [ಮಲೆಗಳಲ್ಲಿ ಮದುಮಗಳು-ಉದಯರವಿ ಪ್ರಕಾಶನ, ಮೈಸೂರು – ೧೯೬೭, ಪುಟ ೧೫೬] ತನ್ನ ಹೆಂಡತಿ ಚೆಲುವೆ ಎಂದು ಐತನಿಗೆ ಗೊತ್ತಿದೆ; ಅವಳ ಮೇಲೆ ಅವನ ಪ್ರೀತಿಯೂ ತೀವ್ರಗೊಂಡಿದೆ; ಜೊತೆಗೆ ಅವಳ ಪ್ರೀತಿಯಲ್ಲಿ ತನಗೆ ಪ್ರತಿಸ್ಪರ್ಧಿಗಳು ಇರಬಹುದೆ ಎಂಬ ಸಂದೇಹ ಮತ್ತು ಈರ್ಷ್ಯೆಯೂ,

ಅವನ ಮನದಲ್ಲಿ ಹೊಗೆಯಾಡುತ್ತಿದೆ. ಕ್ರಮೇಣ ಐತನ ಮನಃಕ್ಲೇಶಗಳೆಲ್ಲ ಪರಿಹಾರವಾಗಿ, ಪತ್ನಿಯ ಶೀಲದ ಬಗ್ಗೆ ಅವನಿಗೆ ಮನವರಿಕೆಯಾಗಿ ಗರ್ಭಿಣಿಯಾದ ಅವಳನ್ನು ಮೊದಲಿಗಿಂತ ಇಮ್ಮಡಿ- ಯಾಗಿ ಪ್ರೀತಿಸತೊಡಗುತ್ತಾನೆ. ಅವರ ದಾಂಪತ್ಯಕ್ಕೆ ಎದುರಾದ ತೊಡಕು ಸುಸೂತ್ರವಾಗಿ ಬಗೆಹರಿಯುವುದರೊಂದಿಗೆ ಕಾದಂಬರಿ ಕೊನೆಗೊಳ್ಳುತ್ತದೆ.

ಕಾದಂಬರಿಯ ಮದುಮಕ್ಕಳ ಮೂರು ಜೋಡಿಗಳ ಪೈಕಿ, ಗುತ್ತಿ ಮತ್ತು ಅವನ ವಧು ತಿಮ್ಮಿ ಮಾತ್ರ ಅಸ್ಪೃಶ್ಯ ಜಾತಿಯವರು. ಗುತ್ತಿಯನ್ನು ಮದುವೆಯಾಗಲು ತಿಮ್ಮಿಯ ಹೆತ್ತ-ವರು ಮತ್ತು ಊರವರ ವಿರೋಧವಿದ್ದರೂ ತಿಮ್ಮಿ ಗುತ್ತಿಯನ್ನು ಮದುವೆಯಾದವಳು. ಅದಕ್ಕೆಂದೇ ತಿಮ್ಮಿ ಗುತ್ತಿ ಮನೆಯವರ ಕಣ್ಣು ತಪ್ಪಿಸಿ, ಗುತ್ತಿಯ ಜೊತೆ ಊರುಬಿಟ್ಟು ಹೋಗುತ್ತಾಳೆ. ಮೊದಲೇ ಅಸ್ಪೃಶ್ಯರಾಗಿರುವ ತಾವು ಇನ್ನು ಮುಂದೆ ಊರವರ ವೈಷಮ್ಯವನ್ನು ಕಟ್ಟಿಕೊಂಡು ಬಾಳುವೆ ಮಾಡುವುದು ಸಾಧ್ಯವಿಲ್ಲ ಎಂದು ಮನಗಂಡು ಗುತ್ತಿ ಮತ್ತು ತಿಮ್ಮ ತಮ್ಮ ಊರುಕೇರಿ ತೊರೆದು, ದೂರದ ಊರಿಗೆ ಹೊರಟು ಹೋಗುತ್ತಾರೆ. ತಾವು ಹುಟ್ಟಿ ಬೆಳೆದ ಊರು ಬಿಟ್ಟು ಹೋಗುವುದಕ್ಕೆ ಅವರಿಬ್ಬರಿಗೂ ವಿಶೇಷವಾದ ದುಃಖ ಏನೂ ಆಗುವುದಿಲ್ಲ. ದುಡಿದು ತಿನ್ನುವ ತಮಗೆ ಯಾವ ಊರಾದರೇನು ಎಂಬ ಉದಾ- ಸೀನ ಭಾವದಲ್ಲೆ ಅವರ ತಮ್ಮ ಊರನ್ನು ತೊರೆದು ಹೋಗುತ್ತಾರೆ.

ಅಸ್ಪೃಶ್ಯರಿಗೆ ಯಾವ ಊರೂ 'ಅವರದ್ದಾಗುವುದು' ಸಾಧ್ಯವಿಲ್ಲ. ಯಾವ ಊರಿಗೆ ಹೋದರೂ ಅಲ್ಲಿ ಅವರು 'ಪಂಚಮರು' ಮತ್ತು 'ಅನ್ಯರು' ಎಂಬ ಕಟುಸತ್ಯವನ್ನು ಕಾದಂಬರಿ ನಮ್ಮ ಮನಗಾಣಿಸುತ್ತದೆ. ಗುತ್ತಿ ತಿಮ್ಮಿಯರು ಸಿಂಭಾವಿ ಬಿಟ್ಟು ದೂರದ ಊರಿಗೆ ಹೋಗುವಾಗ ದಾರಿಯಲ್ಲಿ ತೀರ್ಥಹಳ್ಳಿಯ ದೋಣಿಗಂಡಿಯಲ್ಲಿ ನಡೆದ ಒಂದು ಹೃದಯವಿದ್ರಾವಕ ಘಟನೆಯನ್ನು ಯಾವ ಓದುಗನೂ ಮರೆಯಲಾರ. ಕಾದಂಬರಿಯ ಮೊತ್ತಮೊದಲ ಪುಟದಲ್ಲೇ ಓದುಗರೆದುರು ಹಾಜರಾಗುವ ಹೊಲೆಯರ ಗುತ್ತಿ ಅಥವಾ ನಾಯಿಗುತ್ತಿ, ಅವನ ಸೋದರ ಸಂಬಂಧಿ, ಪ್ರಿಯತಮೆ ಹಾಗೂ ಭಾವೀ ಪತ್ನಿಯಾಗಿರುವ ತಿಮ್ಮಿಯನ್ನು, ಅವಳ ಹೆತ್ತವರ ಕಣ್ಣುತಪ್ಪಿಸಿ, ಹಾರಿಸಿಕೊಂಡು ಬರಲು ಹೊರಟು ನಿಂತಿ-ದ್ದಾನೆ; ಅವನ ಜೊತೆ, ಅವನ ನಾಯಿ 'ಹುಲಿಯ'ನೂ ಯಥಾಪ್ರಕಾರ ಹೊರಟಿದೆ. ಕಾದಂಬರಿಕಾರರೇ ಹೇಳುವಂತೆ ಗುತ್ತಿಯನ್ನು ನೆರಳಿನಂತೆ ಸದಾ ಹಿಂಬಾಲಿಸುವ ಅವನ ನಾಯಿ ದೆಸೆಯಿಂದಲೆ ಗುತ್ತಿಗೆ 'ನಾಯಿಗುತ್ತಿ' ಎಂದೂ, ಅವನ ನಾಯಿಗೆ 'ಗುತ್ತಿ ನಾಯಿ' ಎಂದೂ ಜನ ಕರೆಯುತ್ತಿದ್ದರು. ಗುತ್ತಿ ಮತ್ತು ಅವನ ನಾಯಿಯ ನಡುವೆ ಎಷ್ಟು ಅನ್ಯೋನ್ಯವಿದೆಯೆಂದರೆ, ಗುತ್ತಿ ನಾಯಿ ಗುತ್ತಿಯ ಇನ್ನೊಂದು 'ಸ್ವ' ಅಥವಾ Alter Ego ಎಂಬಂತೆ ಕಾದಂಬರಿಯ ಉದ್ದಕ್ಕೂ ಗುತ್ತಿಯ ಜೊತೆ ಅವನ ನಾಯಿಯೂ ಓದುಗ

ನೆದುರು ಕಾಣಿಸಿಕೊಳ್ಳುತ್ತದೆ.

ಕಾದಂಬರಿಯ ಕೊನೆಯಲ್ಲಿ ತಿಮ್ಮಿಯ ಹೆತ್ತವರು ಮತ್ತು ಊರವರ ವಿರೋಧವಿದ್ದರೂ ಗುತ್ತಿ ತಿಮ್ಮಿಯನ್ನು ಮದುವೆ ಯಾಗಿದ್ದಾನೆ. ತನ್ನ ಈ 'ಅಪರಾಧ'ಕ್ಕಾಗಿ ಪೋಲೀಸರು ತನ್ನ ಬೆನ್ನುಬಿದ್ದಿದ್ದಾರೆ ಎಂದು ಅವನು ದಿಗಿಲಾಗಿದ್ದಾನೆ. ಸಿಂಭಾವಿ ಮತ್ತು ಅದರ ಆಸುಪಾಸಿನಲ್ಲಿ ಎಲ್ಲಿದ್ದರೂ ತನಗೆ ಅಪಾಯ ತಪ್ಪಿದ್ದಲ್ಲ ಎಂಬ ಭಯದಲ್ಲಿ ಗುತ್ತಿ 'ಜಿರಾಪತಿ ಮಳೆ'ಯ ಒಂದು ದಿನ, ತನ್ನ ಹೊಲೆಗೇರಿ ತೊರೆದು ಮೇಗರವಳ್ಳಿ ಮುಖಾಂತರ ತೀರ್ಥಹಳ್ಳಿಗೆ ಬಂದು ತುಂಗಾನದಿಯ ದಡದ, ದೋಣಿಗಂಡಿಯಲ್ಲಿ ನಿಂತಿದ್ದಾನೆ. ತುಂಗಾ ನದಿಯಲ್ಲಿ ನೆರೆ ಏರಿ, ನದಿಗೆ ನದಿಯೇ ಮಹಾಪ್ರವಾಹವಾಗಿದೆ. ನದಿಯ ಆಚೆಯ ದಡದ ಕಾನೂರು ಕಡೆ ಹೋಗುವುದಕ್ಕೆ ಗುತ್ತಿ ದೋಣಿ ಹತ್ತಿದ್ದಾನೆ; ದೋಣಿಯಲ್ಲಿ ಜನ ಕಿಕ್ಕಿರಿದು ತುಂಬಿದ್ದಾರೆ. ಅಸ್ಪೃಶ್ಯನಾದ ಗುತ್ತಿಗೇ ದೋಣಿಯಲ್ಲಿ ಜಾಗ ಸಾಲದು; ಇನ್ನು ಅವನ ನಾಯಿಗೆ ಯಾರು ಸ್ಥಳ ಕೊಡುತ್ತಾರೆ? ಗುತ್ತಿ ದೋಣಿಯ ಒಂದು ಮೂಲೆಯಲ್ಲಿ ತುಸು ಜಾಗ ದೊರಕಿಸಿಕೊಂಡರೂ, ಅವನ ನಾಯಿಗೆ ದೋಣಿ ಹತ್ತಲು ಯಾರೂ ಬಿಡುವುದಿಲ್ಲ. ಗುತ್ತಿಯನ್ನು ಬಿಟ್ಟು ಇರಲಾರದ ಅವನ ನಾಯಿ ನದಿಗೆ ಹಾರಿ ತನ್ನ ಯಜಮಾನನನ್ನು ಹಿಂಬಾಲಿಸುತ್ತದೆ. ಆದರೆ ತುಂಗಾನದಿಯ, ಪ್ರವಾಹಕ್ಕೆ ಎದುರಾಗಿ ಈಸುವುದು ಹುಲಿಯನಂತಹ ಹುಲಿಯನಿಗೂ ದುಸ್ಸಾಧ್ಯವಾಗುತ್ತದೆ. ಪ್ರವಾಹದ ಎದುರು ಗುತ್ತಿ ನಾಯಿಯ ಧೀರೋದಾತ್ತ ಹೋರಾಟ, ತನ್ನ ನಾಯಿಯನ್ನು ಹೇಗಾದರೂ ರಕ್ಷಿಸಿಕೊಳ್ಳಲು, ಗುತ್ತಿ ಮಾಡುವ ವ್ಯರ್ಥಪ್ರಯತ್ನ ಅವನ ಅಸಹಾಯಕತೆ, ತನ್ನ ಜೀವವೇ ಆಗಿದ್ದ ನಾಯಿ ತನ್ನ ಕಣ್ಣೆದುರೇ ಪ್ರವಾಹದ ಪಾಲಾಗುತ್ತಿರುವುದನ್ನು ಕಂಡು ಅವನಿಗೆ ಆಗುವ ಸಂಕಟ, ಅವನು ಅಸ್ಪೃಶ್ಯನೆಂಬ ಕಾರಣಕ್ಕೆ ಅವನ ಆ ಮನಃಸ್ಥಿತಿ ಸಹ ದೋಣಿಯಲ್ಲಿದ್ದ ಇತರರ ನಗೆಚಾಟಿಕೆಗೆ ವಸ್ತುವಾಗುವುದು- ಕಾದಂಬರಿಯಲ್ಲಿ ಗುತ್ತಿ ನಾಯಿಯ ಜೀವಿತದ ಕೊನೆಯ ಕ್ಷಣಗಳ ಈ ನಿರೂಪಣೆ ಎಷ್ಟು ಹೃದಯ ಸ್ಪರ್ಶಿಯಾಗಿದೆ ಎಂದರೆ ತನ್ನ ನಾಯಿಯನ್ನು ಕಳಕೊಂಡ ಗುತ್ತಿಯ ಜೊತೆ ಓದುಗನೂ ಕಣ್ಣೀರು ಹಾಕುವಂತಾಗುತ್ತದೆ. [ಮಲೆಗಳಲ್ಲಿ ಮದುಮಗಳು-ಪುಟ ೬೦೫-೬೧೨]

ಆದರೆ ಕುವೆಂಪು ಓದುಗರ ಭಾವನೆಗಳನ್ನು ಪ್ರಚೋದಿಸಿ, ಅಷ್ಟಕ್ಕೇ ತೃಪ್ತರಾಗುವ ಸಾಮಾನ್ಯ ಲೇಖಕ ಅಲ್ಲ. ಗುತ್ತಿನಾಯಿಯ ಅಂತಿಮ ಕ್ಷಣಗಳ ನಿರೂಪಣೆ ಮಾತ್ರವಲ್ಲ, ಕಾದಂಬರಿಯ ಉದ್ದಕ್ಕೂ ಅದೇ ಬಗೆಯ ಉತ್ಕಟ ಜೀವದಯೆಯಲ್ಲಿ ಕುವೆಂಪು ತನ್ನನ್ನು ತಾನು ತೊಡಗಿಸಿಕೊಂಡು ಬರೆದಿದ್ದಾರೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಗುತ್ತಿ ಮತ್ತು ಅವನ ನಾಯಿ ಮಾತ್ರವಲ್ಲ ಮಲೆನಾಡು ಮತ್ತು ಅದರ ಜೀವಜಗತ್ತಿನ ಪ್ರತಿಯೊಂದು ಜೀವವೂ ಸಾಹಚರ್ಯದೊಡನೆ ಸ್ವಾಯುತ್ತ ಅಸ್ತಿತ್ವವನ್ನು ಪಡೆದಿವೆ.

ಗುತ್ತಿಯನ್ನು ಮರೆತು ಅವನ ನಾಯಿಯನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ; ಹಾಗೆಯೇ ಮಲೆನಾಡಿನ ಮನುಷ್ಯರನ್ನು ಮರೆತು, ಅಲ್ಲಿನ ನಿಸರ್ಗದ ಬಗ್ಗೆ ಮಾತ್ರ ಯೋಚಿಸುವುದು ಕೂಡ ಅಸಾಧ್ಯ. ಕುವೆಂಪು ಕಾದಂಬರಿಯಲ್ಲಿ ಚಿತ್ರಿತವಾಗಿರುವ ಮನುಷ್ಯ ಮತ್ತು ನಿಸರ್ಗಗಳ ಅನ್ಯೋನ್ಯ ಅಂತಹದ್ದು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮನುಷ್ಯ ಪಾತ್ರಗಳು ಹಾಗೂ ಆ ಪಾತ್ರಗಳ ಕ್ರಿಯೆಗಳಷ್ಟೇ ಅಲ್ಲದೆ ಬಗೆಬಗೆಯ ಪ್ರಾಕೃತಿಕ ವಿದ್ಯಮಾನಗಳು, ಋತುಮಾನದ ವೈಪರೀತ್ಯಗಳು, ಹೆಚ್ಚಿನವರ ಗಮನಕ್ಕೆ ಬಾರದ ಮನುಷ್ಯ ವರ್ತನೆಯ ಓರೆ ಕೋರೆಗಳು ಎಲ್ಲವೂ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿವೆ. ಉದಾಹರಣೆಗೆ, ಒಂದು ದಿನ ಇಳಿಸಂಜೆಯ ಹೊತ್ತಿಗೆ ಸಿಂಭಾವಿ ಹೊಲೆಗೇರಿಯ ತನ್ನ ಗುಡಿಸಲಿನಿಂದ ಹೊರಟ ಗುತ್ತಿ, ಸೀತೂರುವರೆಗೆ ನಡೆದು ದಣಿದಿದ್ದಾನೆ. ಆದರೆ ಆ ರಾತ್ರಿ ಅವನು ತಂಗಿದ್ದ ಮನೆಯ ಯಜಮಾನ ತಿಮ್ಮನಾಯ್ಕನ ಗೊರಕೆಯ ದೆಸೆಯಿಂದಾಗಿ ಗುತ್ತಿಗೆ ನಿದ್ರೆ ಹತ್ತುವುದಿಲ್ಲ. ಲೇಖಕರು ಸದ್ರಿ ತಿಮ್ಮನಾಯ್ಕನ ಗೊರಕೆಯನ್ನು ವರ್ಣಿಸುವುದು ಹೀಗೆ : 'ಜಗಲಿಯ ಮೇಲೆ ಮಲಗಿದ್ದ ತಿಮ್ಮನಾಯ್ಕ ಮಾರಾಯನು ಕೊರೆಯಲು ಪ್ರಾರಂಭಿಸಿದನು. ಅವನು ಗೊರಕೆ ಹೊಡೆದರೆ ಇವನಿಗೆ ನಿದ್ದೆ ಮಾಡುವುದಕ್ಕೆ ಏನಾಗುತ್ತಿತ್ತು ಎನ್ನುವಂತಿರಲಿಲ್ಲ ಆ ಗೊರಕೆ. ಇತರ ಎಲ್ಲರದಲ್ಲಿಯೂ ಇರುವಂತೆ, ಗೊರಕೆಯಲ್ಲೂ ಸಾತ್ವಿಕ, ರಾಜಸ, ತಾಮಸಗಳೆಂದು ಮೂರು ವಿಧವಿವೆಯಲ್ಲವೆ?ತಿಮ್ಮನಾಯ್ಕನ ಗೊರಕೆ ರಭಸದಲ್ಲಿ ರಾಜಸವಾಗಿಯೂ ರಸದಲ್ಲಿ ತಾಮಸವಾಗಿಯೂ ಇದ್ದು ಭೀಕರವಾಗಿತ್ತು. ಶ್ವಾಸೋಚ್ಛ್ವಾಸದ ಗರಗಸದಿಂದ ನಿಃಶಬ್ದತೆಯ ಗೋನಾಳಿಯನ್ನು ಘರಿಲ್ ಘರಿಲ್ ಗರಾಗರಾ ಗೊರ್ ಗೊರ್ ಎಂದು ಮೊದಲಾಗಿ ನಾನಾ ನಾದವಿನ್ಯಾಸಗಳಿಂದ ಕೊಯ್ಯುತ್ತಿತ್ತು. ಬಡಗುತ್ತಿಯ ನಿದ್ದೆಯ ಕುತ್ತಿಗೆಯನ್ನೇನೊ ಕೊಯ್ದೇ ಬಿಟ್ಟಿತ್ತು. [ಮಲೆಗಳಲ್ಲಿ ಮದುಮಗಳು-ಪುಟ ೨೦]

ಇಂತಹದೇ ಇನ್ನೊಂದು ಉದಾಹರಣೆ : ಸಿಂಭಾವಿ ಸುಬ್ಬಣ್ಣ ಹೆಗ್ಡೆ, ವೃದ್ಧಾಪ್ಯದಲ್ಲಿ ನಿದ್ದೆಬಾರದೆ ರಾತ್ರಿ ಇಡೀ ಹೊರಳಾಡಿ, ಬೆಳಗಿನ ವಿವಿಧ ಸದ್ದುಗಳಿಗೆ ಕಿವಿಗೊಡುವುದನ್ನು ಲೇಖಕರು ಹೀಗೆ ಚಿತ್ರಿಸುತ್ತಾರೆ: '....ಮನೆಯ ಕತ್ತಲೆಯಲ್ಲಿದ್ದ ಅವರಿಗೆ ಬಯಲಿನ ಕತ್ತಲೆಯಲ್ಲಿದ್ದ ಒಡ್ಡಿ ಆಕೃತಿ ಆಹ್ವಾನಕರವಾಗಿ ಗೋಚರಿಸಿತು. ಒಡ್ಡಿಗಳೊಳಗೆ ಆಗುತ್ತಿದ್ದ ಸದ್ದುಗಳೆಂದರೆ ಹೆಗ್ಗಡೆಯವರಿಗೆ ಬಹುಕಾಲದ ಸಾಧನೆಯಿಂದ ಸಾಕ್ಷಾತ್ಕಾರ ವಾಗಿದ್ದು, ಅವರಿಗೆ ಮಾತ್ರವೇ ಸಂವೇದ್ಯವಾಗುತ್ತಿದ್ದ ಯಾವುದೋ ಗುಪ್ತ ಲಿಪಿಯ ಸಂಕೇತ ಸ್ವರ ವಿಜ್ಞಾನವಾಗಿತ್ತು.ಊರ ಹಂದಿಯ ದಡ್ಡೆಯ ಸದ್ದೊ, ಸಲಗನ ಸದ್ದೊ, ಮರಿಗಳ ಸದ್ದೊ, ಹೋತನ ಸೀನೊ, ಆಡಿನ ಸೀನೊ, ಕೆಂಪು ಹುಂಜದ ಕೂಗೊ, ತಿಮ್ಮಪ್ಪ ಹೆಗ್ಗಡೆ [ಸುಬ್ಬಣ್ಣ

ಹೆಗ್ಗಡೆಯವರ ಮಗ] ಕೋಳಿ ಅಂಕದಲ್ಲಿ ಗೆದ್ದು ತಂದಿದ್ದ ಬಿಳಿ ಸಳಗದ ಕೂಗೊ ಹೆಗ್ಗಡೆಯವರಿಗೆ ಒಂದೊಂದೂ ಅರ್ಥವಾಗುತ್ತಿತ್ತು; ಭಾವವಾಗುತ್ತಿತ್ತು. ಮಹಾಕವಿ ಮಹಾಛಂದಸ್ಸಿನ ನಾದ ವಿನ್ಯಾಸವನ್ನು ಸವಿಯುವಂತೆ ಸವಿದು ಸುಖಿ ಸುತ್ತಲೂ ಇದ್ದರು. ಅಷ್ಟರ ಮಟ್ಟಿಗೆ ಆ ಒಂದೊಂದು ಸದ್ದಿಗೂ ಅವರ ಭಾವಕೋಶ ಬೆಳೆದು ಹೋಗಿತ್ತು." [ಮಲೆಗಳಲ್ಲಿ ಮದುಮಗಳು, ಪುಟ ೩೫]

ಇಂತಹದ್ದೇ ಇನ್ನೊಂದು ರಸವತ್ತಾದ ಪ್ರಸಂಗದಲ್ಲಿ ಕಾದಂಬರಿಕಾರರು ಸುಬ್ಬಣ್ಣ ಹೆಗ್ಗಡೆಯವರ ಹಂದಿಯೊಂದು, ಅವರ ಕೆಲಸದ ಆಳಿನ ಬೇಜವಾಬ್ದಾರಿತನದಿಂದಾಗಿ, ಒಡ್ಡಿಯಿಂದ ತಪ್ಪಿಸಿಕೊಂಡು ಹೊರಬಂದು ಮಾಡಿದ ರಂಪವನ್ನು ನಾಲ್ಕೈದು ಪುಟಗಳಷ್ಟು ವಿಸ್ತಾರವಾಗಿ ನಿರೂಪಿ ಸುತ್ತಾರೆ. ಈ ನಿರೂಪಣೆಯ ಉದ್ದಕ್ಕೂ ಸುಬ್ಬಣ್ಣ ಹೆಗ್ಡೆ ಅಸ್ಪೃಶ್ಯ ಜಾತಿಯ ತಮ್ಮ ಕೆಲಸದಾಳುಗಳನ್ನೆಲ್ಲ ಸಾರಾಸಗಟಾಗಿ, ತನಗೆ ಗೊತ್ತಿರುವ ಕೆಟ್ಟ ಶಬ್ದಗಳನ್ನೆಲ್ಲ ಬಳಸಿ ಬೈದು ಬಿಡುತ್ತಾರೆ. ಹಾಗೆ ಬೈಯುವುದು, ತನ್ನ ಆಸ್ತಿಯ ಜೊತೆಗೆ ಜಾತಿಯ ಕಾರಣ ದಿಂದಲೂ ಅವರಿಗೆ ದಕ್ಕಿದ ಅಧಿಕಾರ ಎಂಬ ವಸ್ತುಸ್ಥಿತಿಯನ್ನು ಸಹ ಲೇಖಕರು ನಮ್ಮ ಮನಗಾಣಿಸುತ್ತಾರೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಉದ್ದಕ್ಕೂ ಇಂತಹ ಪ್ರಸಂಗಗಳು, ಸನ್ನಿವೇಶಗಳು ಮತ್ತು ಸಾಂದರ್ಭಿಕ ಆಖ್ಯಾಯಿಕೆಗಳು ಹೇರಳವಾಗಿವೆ. ಕತೆ ತನ್ನ ಮುಕ್ತಾಯದ ಕಡೆಗೆ ಧಾವಿಸುತ್ತ ಓದುಗನನ್ನು ತುದಿಗಾಲಲ್ಲಿ ನಿಲ್ಲಿಸುವ ನಮೂನೆಯ ರೋಚಕ ಬರವಣಿಗೆ ಕುವೆಂಪು ಅವರ ಜಾಯಮಾನದಲ್ಲೇ ಇಲ್ಲ. ನಿರುದ್ವಿಗ್ನತೆಯಲ್ಲಿ ತನ್ನ ಕತೆಯನ್ನು ರಾಗದ ಆಲಾಪದಂತೆ ಸಾವಧಾನವಾಗಿ ವಿಸ್ತರಿಸುತ್ತ ಹೋಗುವುದು ಕುವೆಂಪು ಅವರ ಶೈಲಿಯ ಹೊರಮ್ಮೆ ಲಕ್ಷಣ. ಆದರೆ ಪ್ರಕೃತಿ ಪ್ರೇಮ, ಜೀವದಯೆ ಹಾಗೂ ಯಾವ ಅಧಿಕಾರಕ್ಕೂ ತಲೆಬಾಗದ ನಿರಂಕುಶಮತಿ-ಇವೇ ಅವರ ಕಾದಂಬರಿಯ ಶಕ್ತಿ ಮೂಲ ಗಳು. ಉದಾಹರಣೆಗೆ ಕಾದಂಬರಿಯಲ್ಲಿ ಕ್ರೈಸ್ತ ಪಾದ್ರಿ ಜೀವರತ್ನಯ್ಯ, ಸಿಂಧುವಳ್ಳಿಯ ಚಿನ್ನಪ್ಪ ಗೌಡರ ಮನೆಗೆ ಪ್ರವೇಶಿಸಿದ ದಿನವೇ, ಯೋಗಾಯೋಗ ವೆಂಬಂತೆ, ಅಮೇರಿಕದ ಚಿಕಾಗೋ ನಗರದ ಸರ್ವಧರ್ಮ ಸಮ್ಮೇಲನದಲ್ಲಿ ಸ್ವಾಮಿ ವಿವೇಕಾನಂದರು ಭಾಷಣ ಮಾಡಿದ್ದನ್ನು ಲೇಖಕರು ನಿರೂಪಿಸುವುದು ಹೀಗೆ: "೧೮೯೩ನೆ ಯ ಇಸವಿ, ಸೆಪ್ಟೆಂಬರ್ ೧೧ನೆಯ ತೇದಿ ಸೋಮವಾರ, ತೀರ್ಥಹಳ್ಳಿಯ ಪಾದ್ರಿ ಅಥವಾ ಉಪದೇಶಿ ಜೀವರತ್ನಯ್ಯ ಕಾಡುದಾಟಿ, ಆಗ ತಾನೆ ಕಳೆಕಿತ್ತು ತೆವರು ಕುಯ್ಲಾಗಿದ್ದ ಗದ್ದೆ ಕೋಗಿನ ಅಂಚುಗಳನ್ನು ಹತ್ತಿ ಹಾರಿ, ತೋಟದ ಬೇಲಿಯ ತಡಬೆಯನ್ನು ಎಚ್ಚರಿಕೆಯಿಂದ ಏರಿ ಇಳಿದು, ಅಡಕೆ ಮರದ ಸಾರದ ಮೇಲೆ ಅಡೆಹಳ್ಳವನ್ನು ಉತ್ತರಿಸಿ, ಮನೆಯೆಡೆಯ ಕಣದ ಬೇಲಿಯೊಡ್ಡಿಗೆ ಹಾಕಿದ್ದ ಉಣಗೋಲನ್ನು ಸರಿಸಿ ಸಿಂಧುವಳ್ಳಿ ಮನೆಗೆ ಪ್ರವೇಶಿಸಿದಂದು

ತಾನು ಎಂತಹ ಲೋಕ ಪ್ರಸಿದ್ಧವಾಗಲಿರುವ ಜಗದ್‌ಭವ್ಯ ಮಹದ್ ಘಟನೆಯೊಂದ ರೊಡನೆ ಪ್ರತಿಸ್ಪರ್ಧಿಯಾಗಿದ್ದೇನೆ ಎಂಬುದನ್ನು ಅರಿತಿರಲಿಲ್ಲ. ಆ ದಿನವೆ ಕ್ರೈಸ್ತಮತ ಶ್ರದ್ಧೆಯ ಮತ್ತು ಮಿಷನರಿ ಮತಾಂಧತೆಯ ಶಕ್ತಿ ಕೇಂದ್ರವಾಗಿದ್ದ ಅಮೇರಿಕಾ ದೇಶದ ಚಿಕಾಗೊ ನಗರದಲ್ಲಿ ನೆರೆದಿದ್ದ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾ ನಂದರು ಹಿಂದೂ ಧರ್ಮದ ಮತ್ತು ವೇದಾಂತ ದರ್ಶನದ ಮಹೋನ್ನತಿಯನ್ನೂ ವಿಶ್ವವೈಶಾಲ್ಯ ವನ್ನೂ ತಮ್ಮ ಸಿಂಹ ಕಂಠದಿಂದ ಘೋಷಿಸಿದ್ದರು. ಅದನ್ನು ಆಲಿಸಿದ್ದ ಅನ್ಯ ಧರ್ಮೀಯ ವಿದ್ವಜ್ಜನ ಸಮೂಹವೂ ಆನಂದೋನ್ಮತ್ತವಾಗಿ ಜಯಘೋಷ ಮಾಡಿತ್ತು. ಹಿಂದೂ ಧರ್ಮ ಮತ್ತು ವೇದಾಂತ ದರ್ಶನದ ದಿಗ್ವಿಜಯ ಧ್ವಜ ಗಗನ ಚುಂಬಿಯಾಗಿ ಏರಿ ಹಾರಿ ಲೋಕ ಲೋಚನಗಳನ್ನೆ ಬೆರಗುಗೊಳಿಸಿತ್ತು. ವಿಂಧ್ಯ ಹಿಮಾಚಲ ಸಹ್ಯಾದ್ರಿಗಳಲ್ಲಿಯೂ ಆ ದಿವ್ಯ ಧ್ವನಿ ಅನುರಣಿತವಾಗಿತ್ತು. [ಮಲೆಗಳಲ್ಲಿ ಮದುಮಗಳು, ಪುಟ ೧೯೬]

ಈ ದೀರ್ಘ ಉದ್ಧೃತದಲ್ಲಿ, ವಿವೇಕಾನಂದರ ಚಿಕಾಗೋ ಭಾಷಣದ ಚಾರಿತ್ರಿಕ ಘಟನೆ ಯನ್ನು ಕುವೆಂಪು ಸಂಭ್ರಮ ಮತ್ತು ವಿಸ್ಮಯಗಳ ಭಾವೋದ್ವೇಗದಲ್ಲಿ ಬಣ್ಣಿಸಿದರೆ ಪಾದ್ರಿ ಜೀವರತ್ನಯ್ಯ ಸಿಂಧುವಳ್ಳಿ ಮನೆಗೆ ಪ್ರವೇಶಿಸಿದ್ದನ್ನು ನಿರೂಪಿಸುವ ಶೈಲಿ ಬೇರೆಯೇ ಬಗೆಯದ್ದು. ಗೃಹಿಣಿಯೊಬ್ಬಳು, ಮನೆವಾರ್ತೆಯ ವಿವರಗಳನ್ನು ಗಮನಿಸುವಷ್ಟೇ ಸೂಕ್ಷ್ಮ ವಾಗಿ ಕುವೆಂಪು ಮಲೆನಾಡಿನ ತನ್ನ ಪರಿಸರದ ವಿವರಗಳನ್ನು ನೋಡಿ, ಅರಿತು, ಅನುಭವಿಸಿ ಬಲ್ಲವರು. ಪಾದ್ರಿ ಜೀವರತ್ನಯ್ಯ ಪ್ರವೇಶಿಸಿದ ಸಿಂಧುವಳ್ಳಿ ಚಿನ್ನಪ್ಪ ಗೌಡರ ಮನೆಯ ಸುತ್ತಲಿನ ಕಾಡು, ಕಳೆಕಿತ್ತು ತೆವರು ಕುಯ್ಲಾಗಿದ್ದ ಕಾಡಿನ ಬದಿಯ ಗದ್ದೆಕೋಗಿನ ಅಂಚು, ತೋಟದ ಬೇಲಿಯ ತಡಬೆ, ಅಡೆಹಳ್ಳದ ಮೇಲೆ ಹಾಕಿದ್ದ ಅಡಕೆ ಮರದ ಸಾರ, ಮನೆಯೆಡೆಯ ಕಣದ ಬೇಲಿ, ಬೇಲಿಯೊಟ್ಟಿಗೆ ಹಾಕಿದ್ದ ಉಣಗೋಲುಗಳನ್ನು ಕುವೆಂಪು, ತನ್ಮಯತೆಯಲ್ಲಿ ಚಿತ್ರಿಸುತ್ತಾರೆ.ಈ ಎರಡು ಬಗೆಯ ನಿರೂಪಣೆಗಳಲ್ಲಿ ಕುವೆಂಪು, ಯಾವು ದಕ್ಕೆ ಹೆಚ್ಚು ಒತ್ತು ಕೊಡುತ್ತಾರೆ ಎಂದು ಹೇಳುವುದೇ ಕಷ್ಟ.

ಪಾದ್ರಿ ಜೀವರತ್ನಯ್ಯ ಮಲೆನಾಡಿನ ಸಿಂಧುವಳ್ಳಿಯ ಪ್ರತಿಷ್ಠಿತ ಭೂಮಾಲಕ ಮನೆ ತನದ ಯುವಕ ಚಿನ್ನಪ್ಪ ಗೌಡರ ಮನೆಗೆ ಹೋದದ್ದು, ಚಿನ್ನಪ್ಪ ಗೌಡರನ್ನು ಕ್ರೈಸ್ತ ಮತ ದೆಡೆಗೆ ಸೆಳೆದುಕೊಳ್ಳುವ ಉದ್ದೇಶದಿಂದ. ಮಲೆನಾಡಿನಲ್ಲಿ ಜನರನ್ನು ಒಲಿಸಿಕೊಂಡು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಲು ಪಾದ್ರಿ ಜೀವರತ್ನಯ್ಯ ಸಾಕಷ್ಟು ಯತ್ನ ಮಾಡಿದರೂ, ಅವನು ಅದರಲ್ಲಿ ಅಷ್ಟೇನೂ ಯಶಸ್ವಿಯಾಗುವುದಿಲ್ಲ. ಕನ್ನಡದ ಇನ್ನೊಂದು ಶ್ರೇಷ್ಠ ಕೃತಿ, ಶಿವರಾಮ ಕಾರಂತರ 'ಚೋಮನ ದುಡಿ'ಯ ಹಾಗೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕೂಡ, ೧೯ನೆಯ ಶತಮಾನದ ಕೊನೆಯ ದಶಕಗಳಲ್ಲಿ ಕರ್ನಾಟಕದ ಕರಾವಳಿ ಮತ್ತು ಮಲೆನಾಡಿನ ಕೆಲವು ಊರುಗಳಲ್ಲಿ ನಡೆದ ಮತಾಂತರ ಯತ್ನಗಳ ಬಗ್ಗೆ ಅಪೂರ್ವವಾದ ಒಳನೋಟಗಳು ಇವೆ. ಕುವೆಂಪು ಕಾದಂಬರಿಯಲ್ಲಿ,

ಪಾದ್ರಿ ಜೀವರತ್ನಯ್ಯ, ತನ್ನ ಮತಪ್ರಚಾರದ ಜೊತೆಗೆ ಮೇಗರವಳ್ಳಿಯ ಮಿಷನ್ ಸ್ಕೂಲ್ ಕಟ್ಟಡ ನಿರ್ಮಾಣದಲ್ಲಿಯೂ ಮುತುವರ್ಜಿವಹಿಸುತ್ತಾನೆ ['ಮಿಷನ್ ಸ್ಕೂಲ್' ಎಂಬ ಶಾಲೆಯ ಹೆಸರನ್ನು ಗಮನಿಸಿ] ಜೀವರತ್ನಯ್ಯನ ಮತಾಂತರ ಪ್ರಯತ್ನಗಳನ್ನು ಒಲ್ಲದ ಸ್ಥಳೀಯ ಜನಗಳು ಸಹ ತಮ್ಮ ಊರಿನ ಮಿಷನ್ ಸ್ಕೂಲ್ ಬಗ್ಗೆ ಸದಭಿಪ್ರಾಯ ಉಳ್ಳವರಾಗಿದ್ದಾರೆ. ಜೀವರತ್ನಯ್ಯನ ಮತಾಂತರದ ಅಭಿಯಾನ ಎಲ್ಲರಿಗೂ ಒಪ್ಪಿಗೆ ಯಾಗದಿರಬಹುದು. ಆದರೆ ಅದು ಯಾವತ್ತೂ ಹಿಂಸೆ, ಬಲಾತ್ಕಾರದ ಮೂಲಕ ಕ್ರೈಸ್ತಮತವನ್ನು ಜನರ ಮೇಲೆ ಹೇರಲಿಲ್ಲ. ಪಾದ್ರಿ ಜೀವರತ್ನಯ್ಯ, ಕಾದಂಬರಿಯಲ್ಲಿ ಜನರೊಡನೆ ಆಗಂತುಕನಂತೆ ವರ್ತಿಸುವುದೂ ಇಲ್ಲ. ಮಲೆನಾಡಿನ ಗ್ರಾಮಸ್ಥರು ಅವನನ್ನು ತಮ್ಮವ ಎಂದೇ ಬಗೆದಿದ್ದಾರೆ. ಧರ್ಮಗುರುಗಳ ಶ್ರೇಣಿಯಲ್ಲಿ ಜೀವರತ್ನಯ್ಯನಿ ಗಿಂತ ಮೇಲಿನವರಾದ ರೆವರೆಂಡ್ ಲೇಕ್‌ಹಿಲ್ ಸಾಹೇಬರಂತೂ ಸಾವಧಾನ, ಸಜ್ಜನಿಕೆ ಮತ್ತು ಔದಾರ್ಯದ ಗುಣಗಳನ್ನು ಮೈಗೂಡಿಸಿಕೊಂಡವರು. ಮತಾಂತರಕ್ಕೆ ವ್ಯಕ್ತವಾದ ಜನರ ವಿರೋಧ ಕಂಡು ನಾಗರಿಕ ವಿಧಾನಗಳಿಂದ ಜನರನ್ನು ಮತಾಂತರಗೊಳಿಸುವ ತಮ್ಮ ಕಾರ್ಯಕ್ರಮದಿಂದ ಸಹ ಅವರು ಹಿಂದೆ ಸರಿಯುತ್ತಾರೆ. ಕ್ರೈಸ್ತ ಮತೀಯರ ಮೇಲೆ ಸಾರಾಸಗಟಾಗಿ ಮತಾಂತರದ ಯತ್ನಗಳ ಆರೋಪ ಹೊರೆಸಿ, ಅವರ ವಿರುದ್ಧ ದೇಶದಲ್ಲಿ ಈಗ ನಡೆದಿರುವ ಅಪಪ್ರಚಾರದ ಹಿನ್ನೆಲೆಯಲ್ಲಿ ನಾವು ಕಾರಂತರ 'ಚೋಮನ ದುಡಿ' ಮತ್ತು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಲ್ಲಿ ನಿರೂಪಿತ ವಾಗಿರುವ ಮತಾಂತರ ಯತ್ನಗಳನ್ನು ಮತ್ತೊಮ್ಮೆ ಪರಿಶೀಲಿಸಬೇಕಾಗಿದೆ. ಜಾತಿ ವ್ಯವ ಸ್ಥೆಯ ತಾರತಮ್ಯ, ಆಸ್ತಿ ಒಡೆತನದಲ್ಲಿ ಅಸಮಾನತೆ, ಸಾಮಾಜಿಕ ಅಸ್ಪೃಶ್ಯತೆ ಮುಂತಾದ ಈ ಸಮಾಜದ ಆಚರಣೆಗಳೇ ಮತಾಂತರದ ಯತ್ನಗಳಿಗೆ ಒಂದು ಸಂದರ್ಭವನ್ನು ಕಲ್ಪಿಸಿಕೊಟ್ಟವು ಎಂಬುದನ್ನು ಎರಡು ಕಾದಂಬರಿಗಳೂ ಮತ್ತೆ ಮತ್ತೆ ವಿಶದಪಡಿಸುತ್ತವೆ.

ಕುವೆಂಪು ತನ್ನ ಕಾದಂಬರಿಯಲ್ಲಿ ಪಾದ್ರಿ ಜೀವರತ್ನಯ್ಯ ಮತ್ತು ಸ್ವಾಮಿ ವಿವೇಕಾ ನಂದರನ್ನು ಒಟ್ಟಿಗೆ ನೆನಪಿಸಿಕೊಳುವುದು, ಅವರು ಮೈಗೂಡಿಸಿಕೊಂಡಿರುವ ಸರ್ವ ಧರ್ಮ ಸಮಭಾವಕ್ಕೆ ಒಪ್ಪುವಂತಹದ್ದು. ಸ್ವಾಮಿ ವಿವೇಕಾನಂದರು ಚಿಕಾಗೋ ಧರ್ಮ ಸಮ್ಮೇಲನದಲ್ಲಿ ತಮ್ಮ ಭಾಷಣದ ಶುರುವಿನಲ್ಲೇ ಹೇಳುತ್ತಾರೆ. "ಇಡೀ ಜಗತ್ತಿಗೆ ಸಹನೆ ಬೋಧಿಸಿದ ಹಾಗೂ ಎಲ್ಲವನ್ನೂ ಒಳಗೊಳ್ಳುವ ಒಂದು ಧರ್ಮಕ್ಕೆ ಸೇರಿದವನು ನಾನು ಎಂಬ ಬಗ್ಗೆ ನನಗೆ ಹೆಮ್ಮೆ ಇದೆ. ನಾವು ಸಹಿಷ್ಣುತೆಯನ್ನು ಪ್ರತಿಪಾದಿಸುವುದರ ಜೊತೆಗೆ ಎಲ್ಲ ಧರ್ಮಗಳೂ ಸತ್ಯ ಎಂದು ನಂಬುವವರು." ತನ್ನ ಭಾಷಣದಲ್ಲಿ ಮುಂದೆ ಅವರು ಹಿಂದು ಧರ್ಮದ ಸರ್ವಗ್ರಾಹ್ಯತೆ ಮತ್ತು ಔದಾರ್ಯಗಳ ಕುರಿತು ಹೇಳುತ್ತ ಭಾರತ ಎಲ್ಲ ಧರ್ಮಗಳ ಸಂತ್ರಸ್ತರಿಗೆ ಆಶ್ರಯ ನೀಡಿರುವುದರತ್ತ ಶ್ರೋತೃಗಳ ಗಮನ ಸೆಳೆಯುತ್ತಾರೆ. "I am proud to belong to a religion which has taught the world both tolerance and

universal acceptance" ಎಂದು ತನ್ನ ಮಾತು ಪ್ರಾರಂಭಿಸುವ ವಿವೇಕಾನಂದರು ಮತ್ತೆ ಮತ್ತೆ ಹಿಂದು ಧರ್ಮ, `Hindu religion' ಎಂಬ ನುಡಿಗಟ್ಟನ್ನೇ ಬಳಸುತ್ತಾರೆ. ಇಸ್ಲಾಂ, ಕ್ರೈಸ್ತ ಮತ್ತು ಯಹೂದಿ ಧರ್ಮಗಳ ಹಾಗೆ ಹಿಂದು ಎಂದರೆ ಒಂದು Religion ಅಥವಾ ಧರ್ಮವಲ್ಲ; ಅದು ಒಂದು ಜೀವನ ಕ್ರಮ ಎಂಬ ವಾದ ವಿವೇಕಾನಂದರ ಕಾಲದಲ್ಲಿ ಚಾಲ್ತಿಗೆ ಬಂದಿರಲಿಲ್ಲ. ಅದಕ್ಕಿಂತ ಮುಖ್ಯವಾದ ಅಂಶವೆಂದರೆ ವಿವೇಕಾ ನಂದರ ಮಾತಿನಲ್ಲಿ ತನ್ನ ಸಿದ್ಧಾಂತದ ಧ್ವಜವನ್ನು ಯಾರ ಮನಸ್ಸಿನಲ್ಲಿಯೂ ನೆಡುವ ಹವಣಿಕೆ ಇಲ್ಲ. ವಿವೇಕಾನಂದರನ್ನು ಅಧಿಕಾರ ರಾಜಕೀಯದ 'ಬಳಸು ಬಿಸಾಕು' ಸರಕು ಮಾಡಿ ಕೊಂಡವರಿಗೆ ತಮ್ಮ ಚಿಕಾಗೋ ಭಾಷಣದಲ್ಲಿ ಅವರು ಏನು ಹೇಳಿದರು ಎಂಬುದರ ಪರಿವೆಯೇ ಇಲ್ಲ. ಕುವೆಂಪು ಅವರಿಗೆ ವಿವೇಕಾನಂದ ಮಾತ್ರವಲ್ಲ, ಅವರ ಗುರು ರಾಮಕೃಷ್ಣ ಪರಮಹಂಸರು ಕೂಡ ಪರಮ ಪೂಜ್ಯರು; ಆದರೆ ಪರಮಹಂಸರು ಯಾರ ಬಳಕೆಗೂ ಸಿಗುವವರಲ್ಲ; ಅವರು ರಾಷ್ಟ್ರೀಯತೆಯ ಪ್ರತಿಮೆ, ಕೂಡ ಅಲ್ಲ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಬಹುತೇಕ ಪಾತ್ರಗಳು ತಮ್ಮನ್ನು ತಾವು 'ಹಿಂದು' ಎಂದು ಗುರುತಿಸಿಕೊಳ್ಳುವುದಿಲ್ಲ. ಭಾರತವೆಂಬ ರಾಷ್ಟ್ರಪ್ರಭುತ್ವದ ಪ್ರಜೆ ಎಂಬ ಗುರುತು ಚಹರೆಯ ವ್ಯಕ್ತಿತ್ವವೂ ಅವರಿಗೆ ಇಲ್ಲ. ಅವರೆಲ್ಲರಿಗೂ ತಾವು ನೆಲೆಸಿದ ಊರು, ಹಾಗೂ ಅದರ ಆಸುಪಾಸಿನ ಪ್ರದೇಶವೇ 'ದೇಶ' ಅಥವಾ 'ರಾಷ್ಟ್ರ'. ಉದಾಹರಣೆಗೆ ತನ್ನ ಹೊಲೆಗೇರಿಯಿಂದ, ದೂರದ ತೀರ್ಥಹಳ್ಳಿಗೆ ಪ್ರಯಾಣ ಬೆಳೆಸುವ ಗುತ್ತಿಗೆ ತಾನು ಬೇರೆಯೇ ದೇಶದಲ್ಲಿದ್ದೇನೆ ಎಂದು ಅನ್ನಿಸಿ ದಿಗ್ಭ್ರಮೆಯಾಗುತ್ತದೆ. ಕಾದಂಬರಿಯಲ್ಲಿ ಗುತ್ತಿ ತಿಮ್ಮಿಯನ್ನು ಲಗ್ನವಾಗಿ, ತನ್ನ ಹೊಲೆಗೇರಿಯನ್ನು ಬಿಟ್ಟು ಹೋಗುವ ಪ್ರಸಂಗವನ್ನು ಲೇಖಕರು ಹೀಗೆ ನಿರೂಪಿಸುತ್ತಾರೆ: "ಮುತ್ತೂರು ಸೀಮೆಯೂ ಕೂಡ 'ದೇಸಾಂತ್ರ' ವಾಗಿದ್ದ ಗುತ್ತಿಯ ಬದುಕೆಲ್ಲ ಇದುವರೆಗೆ ಸಿಂಭಾವಿ, ಮೇಗರವಳ್ಳಿ, ಹಳೆಮನೆ ಹೂವಳ್ಳಿ, ಕೋಣೂರು, ಬೆಟ್ಟಳ್ಳಿಗಳಿಗೇ ಸೀಮಿತವಾಗಿದ್ದುದರಿಂದ ಅವನೆಂದೂ ತೀರ್ಥಹಳ್ಳಿಯ ರಾಮತೀರ್ಥದ ದೃಶ್ಯವನ್ನು ನೋಡಿರಲಿಲ್ಲ. ಕಡೆಗೆ ಅವನ ಸಂಕುಚಿತ ಜೀವನದ ಹದಿನೆಂಟೊ ಇಪ್ಪತ್ತೊ ವರ್ಷಗಳಲ್ಲಿ ಒಮ್ಮೆಯಾದರೂ ಅವನು 'ಎಳ್ಳಮಾಸೆ' ಯ ಜಾತ್ರೆ ಗಾದರೂ ತೀರ್ಥಹಳ್ಳಿಯಂತಹ 'ದೂರದೇಶ'ಕ್ಕೆ ಬಂದವನಲ್ಲ. ಹೊಲೆಯನಾಗಿದ್ದ ಅವನಿಗೆ ಈ ಜನ್ಮದಲ್ಲಿ ಪರಶುರಾಮ ತೀರ್ಥದ ಸ್ನಾನವಂತೂ ಸರ್ವಥಾ ಅಲಭ್ಯ ವಾದುದರಿಂದ ಅಂತಹ ಅಗಮ್ಯ ಸ್ಥಾನಕ್ಕೆ ಏರಲು ಅವನೆಂದೂ ಆಶಿಸಿರಲಿಲ್ಲ. [ಮಲೆಗಳಲ್ಲಿ ಮದುಮಗಳು, ಪುಟ ೫೯೭] ಕುವೆಂಪು ಅವರ ಕಾದಂಬರಿ ಓದುತ್ತಿದ್ದಂತೆ ಭಾರತ ಇಲ್ಲಿ ಉಸಿರಾಡುತ್ತಿದೆ ಅನ್ನಿಸುತ್ತದೆ; ಆದರೆ ಅದು ಸಮಕಾಲೀನ ಭಾರತವಲ್ಲ. ಒಬ್ಬ ಕಾದಂಬರಿಕಾರನಾಗಿ, ಕುವೆಂಪು ಅವರಿಗೆ ಹೊಲೆಯರ ಗುತ್ತಿಯ ದೇಶ, ಈಗ

ನಾವು ನೀವು ಬದುಕುತ್ತಿರುವ ದೇಶ ಅಲ್ಲ ಎಂಬ ವಾಸ್ತವದ ಅರಿವು ಇದೆ. ಹಾಗಾಗಿ ಕುವೆಂಪು ಅವರ ದೃಷ್ಟಿಯಲ್ಲಿ ವಿವೇಕಾನಂದರು ಅಮೇರಿಕ ದೇಶದಲ್ಲಿ ಹಿಂದೂ ಧರ್ಮದ ಉದಾರತೆ, ಸಹಿಷ್ಣುತೆ ಮತ್ತು ಸರ್ವಗ್ರಾಹ್ಯತೆಗಳನ್ನು ಎತ್ತಿಹಿಡಿದ ಮಹಾನುಭಾವನೇ ಹೊರತು ಭಾರತವೆಂಬ ಈ ಕಾಲದ ರಾಷ್ಟ್ರಪ್ರಭುತ್ವದ ಪ್ರತಿಮೆ ಅಲ್ಲ.

ಕಾದಂಬರಿ ರಾಷ್ಟ್ರಪ್ರಭುತ್ವವೆಂಬ ಅಧಿಕಾರ ಕೇಂದ್ರವನ್ನು ಗುರುತಿಸುವುದಿಲ್ಲ; ಅ ಪರಿಕಲ್ಪನೆಗೆ, ಕೂಡ ಇಲ್ಲಿ ಸ್ಥಾನವಿಲ್ಲ. ಅಷ್ಟು ಮಾತ್ರವೇ ಅಲ್ಲ; ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ–ಯಾವ ಯಜಮಾನ ಶಕ್ತಿಯನ್ನೂ ಕಾದಂಬರಿ ಗೌರವಿಸುವುದಿಲ್ಲ. ಚಿಕಾಗೋ ನಗರದಲ್ಲಿ ವಿವೇಕಾನಂದರು ಹಿಂದು ಧರ್ಮದ ಹಿರಿಮೆಯನ್ನು ಜಗತ್ತಿಗೆ ಸಾರಿ ಹೇಳಿದ್ದು ಮತ್ತು ಅದೇ ಸಂದರ್ಭದಲ್ಲಿ 'ಯಃಕಶ್ಚತ್ ಪಾದ್ರಿಯೊಬ್ಬನು' ಮಲೆನಾಡಿನ ಒಂದು ಹಳ್ಳಿಯಲ್ಲಿ ಹಿಂದು ಧರ್ಮದ ಕೆಡುಕುಗಳನ್ನು ಎತ್ತಿತೋರಿಸಿದ್ದು–ಇವೆರಡನ್ನೂ ತನ್ನ ಕಾದಂಬರಿಯಲ್ಲಿ ಒಟ್ಟೊಟ್ಟಿಗೇ ಉಲ್ಲೇಖಿಸಿದ ನಂತರ ಕುವೆಂಪು 'ಆಚರಣೆಯಲ್ಲಿರುವ' ಹಿಂದು ಧರ್ಮಕ್ಕೆ ಹೀಗೆ ಸವಾಲು ಹಾಕುತ್ತಾರೆ, "ಅಮೇರಿಕಾದ ಚಿಕಾಗೋ ಬಹು ದೂರದಲ್ಲಿರಬಹುದು? ವಿವೇಕಾನಂದರ ಉತ್ತಾಲ ಧ್ವನಿ ಮಲೆನಾಡಿನ ಕೊಂಪೆಗೆ ಮುಟ್ಟದಿದ್ದಿರಬಹುದು? ಆದರೆ ಸಮೀಪದಲ್ಲಿಯೆ ಇದ್ದುವಲ್ಲ –ಶೃಂಗೇರಿ, ಧರ್ಮಸ್ಥಳ, ಉಡುಪಿ ಇತ್ಯಾದಿ ಪವಿತ್ರ ಕ್ಷೇತ್ರಗಳ ಗುರುಪೀಠಗಳು? ಅವೇನು ಮಾಡುತ್ತಿದ್ದವು?" [ಮಲೆಗಳಲ್ಲಿ ಮದುಮಗಳು–ಪುಟ ೧೯೭]

ಮಲೆನಾಡಿನ ಜಾತಿವ್ಯವಸ್ಥೆಯ ಅಸಮಾನತೆ, ತಾರತಮ್ಯ ಮತ್ತು ಶ್ರೇಣೀಕರಣಗಳ ಬಗ್ಗೆ ತಿರಸ್ಕಾರದ ನಿಲುವು ತಳೆದಿರುವ ಕಾದಂಬರಿ, ಆ ವ್ಯವಸ್ಥೆ ಲಾಗಾಯ್ತಿನಿಂದಲೂ ರೂಢಿಸಿ ಕೊಂಡಿರುವ ಲಿಂಗ ಅಸಮಾನತೆ ಹಾಗೂ ಪುರುಷ ಪ್ರಾಧಾನ್ಯಗಳನ್ನು ಸಹ ಪ್ರತಿರೋಧಿಸುತ್ತದೆ. ಕುವೆಂಪು ತಮ್ಮ ಕೃತಿಯಲ್ಲಿ ಪುರುಷ ಪಾತ್ರಗಳಿಗೆ ನೀಡುವಷ್ಟೇ ಪ್ರಾಶಸ್ತ್ಯವನ್ನು ಸ್ತ್ರೀಪಾತ್ರಗಳಿಗೂ ಕೊಟ್ಟಿದ್ದಾರೆ.ಕಾದಂಬರಿಯ ಸ್ತ್ರೀ ಪಾತ್ರಗಳು ಪುರುಷರಿಗೆ ಅಧೀನರಾಗಿದ್ದಾಗಲೂ ತಮ್ಮದೇ ಆದ ಖಾಸಗೀ ವ್ಯಕ್ತಿತ್ವ ಮತ್ತು 'ಸ್ವ'ವನ್ನು ರೂಪಿಸಿ ಕೊಂಡಿರುವಂತಹವು. ಕಾದಂಬರಿಯಲ್ಲಿ ನಮಗೆದುರಾಗುವ ಹೆಚ್ಚಿನ ಸ್ತ್ರೀಯರಿಗೆ ಲೈಂಗಿಕ ವ್ಯಕ್ತಿತ್ವವೂ ಇದೆ; ಅದರ ಆಸೆ, ನಿರಾಶೆಗಳೂ ಇವೆ.

ಉದಾಹರಣೆಗೆ ಮಧ್ಯವಯಸ್ಸು ದಾಟಿದ ವಿಧವೆ ನಾಗತ್ತೆಯ ಅತೃಪ್ತ ಲೈಂಗಿಕ ಬಯಕೆ ಮತ್ತು ವಿಷಮರತಿ ಹಾಗೂ ಅಕಾಲ ವಿಧವೆಯಾದ ಅವಳ ಸೊಸೆ ನಾಗಕ್ಕನಿಗೆ, ನಾಗತ್ತೆ ತನ್ನ ಸ್ವಾರ್ಥಕ್ಕಾಗಿ ಗಂಡಸೊಬ್ಬನ ಜೊತೆ 'ಸೀರುಡಿಕೆ' ಸಂಬಂಧ ಹೊಂದಿಸಲು ನಡೆಸಿದ ಕುತಂತ್ರ, ಕಾದಂಬರಿಯಲ್ಲಿ ಭೀಭತ್ಸಮಯ ಶೃಂಗಾರದ ಒಂದು ಕರಾಳ ವಿದ್ಯಮಾನಕ್ಕೆ ಕಾರಣವಾಗುತ್ತದೆ [ಮಲೆಗಳಲ್ಲಿ ಮದುಮಗಳು, ಪುಟ ೨೩೭–೨೪೦]. ತನ್ನ ತಾರುಣ್ಯ

ದಲ್ಲೇ ವಿಧವೆಯಾದ ನಾಗಕ್ಕ ಮಾತ್ರವಲ್ಲ, ಲೋಭಿಯೂ ಲಂಪಟೆಯೂ ಆದ ಅವಳ ಅತ್ತೆ ನಾಗಮ್ಮ ಕೂಡ ಕಾದಂಬರಿಯಲ್ಲಿ ನೊಂದ ಜೀವಿ. ಆದರೂ ಛಲಗಾತಿ ಎಂಬ ಬಗೆಯಲ್ಲಿ ಚಿತ್ರಿತಗೊಂಡಿರುವಾಕೆ. ಕಾದಂಬರಿಯ ಹೊಸ ಮದುಮಕ್ಕಳ ಎರಡು ಜೋಡಿಗಳಲ್ಲಿ ಚಿನ್ನಮ್ಮ ಮತ್ತು ಮುಕುಂದಯ್ಯರ ಪರಸ್ಪರ ಸಮರ್ಪಣ ಭಾವದ ಗಾಢ ಪ್ರೀತಿ ಹಾಗೂ ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ಮದುವೆ ಆಗಿಯೇ ಸಿದ್ಧವೆಂಬ ದೃಢಮನಸ್ಸಿನ ಗುತ್ತಿ ತಿಮ್ಮಿಯರ ಪ್ರೇಮ – ಈ ನಿರೂಪಣೆಗಳಲ್ಲಿ ಎಲ್ಲಿಯೂ ಗಂಡು ಮತ್ತು ಹೆಣ್ಣಿನ ನಡುವೆ ತರತಮ ಬೇಧ ಇಲ್ಲ. ಕಾದಂಬರಿಯಲ್ಲಿ ಹೊಸ ಮದುಮಕ್ಕಳ ಇನ್ನೊಂದು ಜೋಡಿ, ಐತ ಮತ್ತು ಪೀಂಚಲು. ಅವರ ಪರಸ್ಪರ ಪ್ರೀತಿ ಮಾತ್ರವಲ್ಲ, ದೈಹಿಕ ಸಮಾಗಮವನ್ನು ಸಹ ಲೇಖಕರು ಸಾದ್ಯಂತವಾಗಿ ಆದರೆ ಒಂದಿಷ್ಟೂ ರೋಚಕವೆನ್ನಿಸದ ಹಾಗೆ ವರ್ಣಿಸುತ್ತಾರೆ. 'ಶಿವಶಿವಾಣಿ' ಯರಂತೆ ಕಂಗೊಳಿಸುವ ಈ ದಂಪತಿಗಳ ದೈಹಿಕ ಮಿಲನವನ್ನು ನಿರೂಪಿಸುವ ಕಾದಂಬರಿಯ ಭಾಗಗಳು 'ದೇಹವೇ ದೇಗುಲ' ಎಂಬ ಭಾವವನ್ನು ಸ್ಫುರಿಸುತ್ತವೆ. [ಮಲೆಗಳಲ್ಲಿ ಮದುಮಗಳು, ಪುಟ ೧೭೯-೧೮೩, ೪೧೦, ೪೧೧]

ಈ ಬಗೆಯ ಬರವಣಿಗೆ ಕನ್ನಡದ ಮಟ್ಟಿಗೆ ಈಗಲೂ ಅನನ್ಯ; ಈಗಲೂ ಸರಿಸಾಟಿ ಇಲ್ಲದ್ದು. ಗಂಡು ಹೆಣ್ಣಿನ ಸಂಬಂಧ ಕುರಿತ ಕನ್ನಡ ಬರವಣಿಗೆಯ ಬಹುಭಾಗ ಪುರುಷ ಕೇಂದ್ರಿತವಾಗಿದ್ದು ಗಂಡಿನ ಆಸೆ, ನಿರೀಕ್ಷೆ, ಬೇಕುಬೇಡಗಳ ಸುತ್ತಲೇ ತಿರುತಿರುಗಿ ಸುತ್ತುವಂತಹದ್ದು. ಇಲ್ಲಿ ಕೌಪೀನವನ್ನು ಬಿಗಿಯಾಗಿ ಕಟ್ಟಿದ ಇಂದ್ರಿಯ ನಿಗ್ರಹಿಯೂ ಹೀರೋ; ಕಚ್ಚೆ ಹರುಕನಾದ ಲಂಪಟನೂ ಹೀರೋ. ಮನ್ಮಥ ವಿಜಯದ ಈ ಅಬ್ಬರದಲ್ಲಿ ಮನ್ಮಥನ ಸೋಲು, ಹತಾಶೆ, ವೈಫಲ್ಯ, ದೌರ್ಬಲ್ಯ-ಯಾವುದರ ಅಭಿವ್ಯಕ್ತಿಗೂ ಎಡೆಯಿಲ್ಲ. ರತಿ ವಿಲಾಪವಂತೂ ಯಾರಿಗೂ ಕೇಳಿಸುವುದೂ ಇಲ್ಲ. ಈ ಮಾತಿಗೆ ಅಪವಾದವಾಗಿ ಹೆಸರಿಸಬಹುದಾದ ಕನ್ನಡ ಕೃತಿಗಳು ಹೆಚ್ಚಿಲ್ಲ. ತಕ್ಷಣ ನೆನಪಿಗೆ ಬರುವ ಕೃತಿಗಳೆಂದರೆ ಶಿವರಾಮ ಕಾರಂತರ ಕಾದಂಬರಿಗಳಾದ 'ಸರಸಮ್ಮನ ಸಮಾಧಿ' ಮತ್ತು 'ಮೈಮನಗಳ ಸುಳಿಯಲ್ಲಿ', ದ.ರಾ. ಬೇಂದ್ರೆಯವರ ಕವಿತೆ, 'ಸಖೀಗೀತ', ಗೋಪಾಲಕೃಷ್ಣ ಅಡಿಗರ ಕವಿತೆ, 'ಚಿಂತಾಮಣಿಯಲ್ಲಿ ಕಂಡ ಮುಖ' ಹಾಗೂ ಕುವೆಂಪು ಅವರ ಕಾದಂಬರಿ

೧೦. 'ಮಲೆಗಳಲ್ಲಿ ಮದುಮಗಳು' : ಶೂದ್ರತ್ವದ ನಿರ್ವಚನ

– ವಾಸುದೇವ ಬೆಳ್ಳೆ

ಕುವೆಂಪು ಅವರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಥಮ ಬಾರಿಗೆ ಪ್ರಧಾನವಾಗಿ ಶೂದ್ರ ಅಸ್ತಿತ್ವವನ್ನು ನಿರ್ವಚಿಸಿದ ಪ್ರಮುಖ ಲೇಖಕರು. ಚಾರಿತ್ರಿಕವಾಗಿ ವಿದ್ಯೆ ವಂಚಿತ ಒಕ್ಕಲಿಗ ಸಮುದಾಯದಲ್ಲಿ ಜನಿಸಿದ ಅವರು ತನ್ನ ಸಾಹಿತ್ಯ ಮತ್ತು ಚಿಂತನೆಯ ಮೂಲಕ ಕನ್ನಡ ಸಾರಸ್ವತ ಲೋಕ ಹಾಗೂ ಸಾಮಾಜಿಕ ಲೋಕದ ಜಾತೀಯತೆಯ ಪ್ರಾಬಲ್ಯಕ್ಕೆ ಪ್ರತಿರೋಧ ನೀಡಿದ್ದಾರೆ. ಅವರು ರಚಿಸಿದ ಸಾಹಿತ್ಯದ ವಸ್ತು, ಭಾಷೆ ಹಾಗೂ ತಾತ್ವಿಕತೆ ಇದನ್ನು ಸ್ಪಷ್ಟಪಡಿಸುತ್ತದೆ. ಮೊದಲ ಬಾರಿಗೆ ಪ್ರಮುಖವಾಗಿ ಶೂದ್ರ ಮತ್ತು ದಲಿತ ಲೋಕವನ್ನು ಚಿತ್ರಿಸುವ ಮೂಲಕ ಅವರು ಕನ್ನಡದಲ್ಲಿ ಶೂದ್ರ ಚಿಂತನೆಯ ದಾರಿಯನ್ನು ತೆರೆದರು ಮಾತ್ರವಲ್ಲ ನಂತರದ ಶೂದ್ರ ಚಳುವಳಿ ಹಾಗೂ ದಲಿತ ಸಾಹಿತ್ಯ ಬರಹಗಳ ಹುಟ್ಟಿಗೆ ಅವಕಾಶ ನಿರ್ಮಾಣ ಮಾಡಿದರು ಎನ್ನಬಹುದು.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಬೃಹತ್ ಕಾದಂಬರಿಯು ಬ್ರಾಹ್ಮಣ್ಯದ ಸಾಂಸ್ಕೃತಿಕ ಯಾಜಮಾನಿಕೆಗೆ ಶೂದ್ರತ್ವದ ಮೂಲಕ ತೋರಿದ ಪ್ರತಿರೋಧದ ಒಂದು ಉತ್ತಮ ಮಾದರಿಯಾಗಿದೆ. ನವೋದಯ ಕಾಲಘಟ್ಟದ ಪ್ರಮುಖ ಲೇಖಕರಾದ ಅವರು, ಅವರ ಸಮಕಾಲೀನ ಬ್ರಾಹ್ಮಣ ವರ್ಗದ ಬರಹಗಾರರ ಮುಂದೆ ಸಾಹಿತ್ಯ ರಚಿಸಬೇಕಾದ ಸಂದರ್ಭದಲ್ಲಿ ತನ್ನ ಸಾಹಿತ್ಯ ರಚನೆಯ ಸಾಮರ್ಥ್ಯವನ್ನು ಮುಂದಿಡುವ ಅಗತ್ಯವಿತ್ತು. ಹಾಗಾಗಿಯೇ ಅವರು ತನ್ನೆದುರಿನ ಸಾಮಾಜಿಕ ಸವಾಲುಗಳನ್ನು ಮೀರಬೇಕಾಗಿದ್ದರಿಂದ ಅವರ ಬರವಣಿಗೆ ಶಿಷ್ಟ ಭಾಷೆಯಿಂದ ಕೂಡಿದ್ದು, ಪ್ರಾಚೀನ ಹಿಂದೂ ಧರ್ಮದ ದರ್ಶನ ಹಾಗೂ ಮಲೆನಾಡಿನ ಜೀವನವನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಸಾರಸ್ವತ ಲೋಕದಲ್ಲಿ ಅಪೂರ್ವವಾದ ಜಗತ್ತನ್ನು ಸೃಷ್ಟಿ ಮಾಡುತ್ತಾರೆ.

ಕುವೆಂಪು ಅವರ ಚಿಂತನೆ ರೂಪುಗೊಳ್ಳುವುದು ಬ್ರಿಟಿಷ್ ವಸಾಹತುಶಾಹಿಯ ವಿರುದ್ಧದ ರಾಷ್ಟ್ರೀಯ ಹೋರಾಟದ ಕಾಲಘಟ್ಟದಲ್ಲಿ. ಅದು ಹಿಂದೂ ರಾಷ್ಟ್ರೀಯತೆಯ ಮೂಲಕ ಬ್ರಾಹ್ಮಣ ಪ್ರಾಬಲ್ಯವನ್ನು ಮುಂದಿಡುವ ಕಾಲವೂ ಆಗಿತ್ತು. ಹಿಂದೂ ರಾಷ್ಟ್ರೀಯತೆ ಜಾತಿ, ವರ್ಣವನ್ನು ಪ್ರಶ್ನಿಸಲಿಲ್ಲ ಮತ್ತು ಈ ರಾಷ್ಟ್ರೀಯತೆಯ ಪ್ರತಿಪಾದಕರಿಗೆ ಭಾರತವನ್ನು ಸಾಮಾಜಿಕವಾಗಿ ನಿರೂಪಿಸುವುದು ಪ್ರಧಾನ ಎಂದು ಅನ್ನಿಸಲಿಲ್ಲ.

ಭಾರತವನ್ನು ಸಾಮಾಜಿಕವಾಗಿ ಜಾತಿ ಶ್ರೇಣೀಕರಣದ ನೆಲೆಯಲ್ಲಿ ವಿವರಿಸುವ ಆಸಕ್ತಿಯು ಜಾತಿವಿರೋಧಿ ಹೋರಾಟಗಳಲ್ಲಿ ಮತ್ತು ಮಹಾತ್ಮ ಫುಲೆಯವರ ಆರ್ಯೇತರ ಹೋರಾಟದ ನಂತರದಲ್ಲಿ ಕಂಡುಬರುತ್ತದೆ. ಪೆರಿಯಾರರ ಸ್ವಾಭಿಮಾನ ಚಳುವಳಿ ಬ್ರಾಹ್ಮಣ ಪ್ರಾಬಲ್ಯದ ವಿರುದ್ಧ ದೊಡ್ಡ ಹೋರ್ರಾಟವನ್ನೇ ನಡೆಸಿತ್ತು. ಈ ಹೋರಾಟಗಳು ಹಿಂದೂ ಪುರಾಣ, ನಂಬಿಕೆ, ಜಾತಿ, ವರ್ಣ ವ್ಯವಸ್ಥೆಯನ್ನು ತಿರಸ್ಕರಿತ್ತು. ಮಾತ್ರವಲ್ಲ ಈ ಹೋರಾಟಗಳಲ್ಲಿ ಪುರಾಣ, ನಂಬಿಕೆಗಳನ್ನು ವೈಜ್ಞಾನಿಕ, ಅವೈಚಾರಿಕವಾಗಿ ನೋಡುವ ವಾಸ್ತವವಾದಿ ನಿಲುವು ಪ್ರಧಾನವಾಗಿತ್ತು.

ಕುವೆಂಪು ಇಂಥ ಸಂದರ್ಭದಲ್ಲಿ ಪುರಾಣ, ನಂಬಿಕೆಗಳನ್ನು ಪೂರ್ಣ ತಿರಸ್ಕರಿಸದೇ ಅವುಗಳ ಒಳಗಡೆ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾರೆ. ಅವರು ಹಿಂದೂ ಧರ್ಮವನ್ನು ಬರೀ ಜಾತಿಮತವಾಗಿ ನೋಡುವ, ಆಚರಿಸುವ ಬ್ರಾಹ್ಮಣ ಪ್ರಣೀತ ಜಾತಿ-ಲಿಂಗ ವ್ಯವಸ್ಥೆಗೆ ವಿರೋಧ ತೋರುವುದು ಹಿಂದೂ ಧರ್ಮದ ಆಧ್ಯಾತ್ಮಿಕ ವಿಚಾರಧಾರೆಯಿಂದ. ಕುವೆಂಪು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಯಾಕೆ ಹದಿನೆಂಟನೆಯ ಶತಮಾನದ ಪೂರ್ವದ ಸಮಾಜವನ್ನು ಪುನಾರಚಿಸಿಕೊಳ್ಳುತ್ತಾರೆ ಎಂದರೆ ಜಾತಿ ವಿರೋಧಿ ಹೋರಾಟ ಮತ್ತು ಚಿಂತನಾಕ್ರಮದ ವೈಚಾರಿಕ, ವೈಜ್ಞಾನಿಕ ವಿಧಾನಕ್ರಮಕ್ಕೆ ಭಿನ್ನವಾಗಿ. ವಾಸ್ತವತಾವಾದಿ ವೈಜ್ಞಾನಿಕ ದೃಷ್ಟಿಕೋನದಲ್ಲಿ ಭಾರತೀಯ ಸಮಾಜವನ್ನು ನೋಡುವುದು ತಾತ್ವಿಕವಾಗಿ ಕಷ್ಟವಾಗಬಹುದು ಎನ್ನುವ ನಿಲುವಿನಿಂದ ಎಂದು ಅನ್ನಿಸುತ್ತದೆ. ಯಾಕೆಂದರೆ ಭಾರತೀಯ ಮನಸ್ಸು ಪುರಾಣ, ನಂಬಿಕೆ, ಆರಾಧನೆಗಳ ವೃತ್ತಾಕಾರದ ತಿಳುವಳಿಕೆಯಲ್ಲಿ ವ್ಯವಹರಿಸುವಂಥದ್ದು. ನಮ್ಮ ಸಮಾಜವನ್ನು, ಜನರ ಮನಸ್ಸನ್ನು ಆಧುನಿಕ ವಿಕಾಸವಾದದ ನೆಲೆಗಟ್ಟಿನಲ್ಲಿ ಅರ್ಥೈಸುವುದು ಮತ್ತು ಪರಿವರ್ತಿಸುವುದು ಸಾಧ್ಯವಿಲ್ಲ ಎನ್ನುವುದು ಕುವೆಂಪು ಅವರಿಗೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಬರೆಯುವ ಕಾಲಕ್ಕೆ ಸ್ಪಷ್ಟವಾಗತೊಡಗಿತ್ತು ಅನ್ನಿಸುತ್ತದೆ. ಹಾಗಾಗಿ ಕುವೆಂಪು ಹಿಂದು ಪುರಾಣ ಕಥೆಗಳನ್ನು ಬಳಸಿಕೊಂಡೇ ಬ್ರಾಹ್ಮಣ್ಯವನ್ನು ಮುರಿಯುವ ಕೆಲಸವನ್ನು ಮಾಡುತ್ತಾರೆ. ಆಧುನಿಕ ವಿಕಾಸವಾದ ಮತ್ತು ವಾಸ್ತವವಾದವು ಪುರಾಣ, ನಂಬಿಕೆಗಳನ್ನು ಮೌಢ್ಯವೆಂದು ಭಾವಿಸುತ್ತವೆ. ಭಾರತೀಯ ಮನಸ್ಸು ಏನಿದ್ದರೂ ಪುರಾಣ, ನಂಬಿಕೆಗಳ ಲೋಕವನ್ನೇ ಆಧರಿಸಿದೆ ಮತ್ತು ನಮ್ಮ ಸಮಾಜದ ಅಮಾನವೀಯ ಅಂಶಗಳನ್ನು ಅದರೊಳಗಿನ ರಚನಾತ್ಮಕ ವಿಶ್ಲೇಷಣೆಯಿಂದ ಸಾಂಸ್ಕೃತಿಕ ಶಕ್ತಿ ಯನ್ನು ಪಡೆದು ಪರಿವರ್ತನೆಗೊಳಿಸಲು ಸಾಧ್ಯ ಎನ್ನುವುದು ಕುವೆಂಪು ಅವರ ದಾರ್ಶನಿಕ ನಿಲುವು ಆಗಿದೆ. ಆದರೆ ಕುವೆಂಪು ಅವರು ಆಧುನಿಕ ಕಾಲಘಟ್ಟದ ಬ್ರಾಹ್ಮಣೇತರ ಚಿಂತನೆಗಳು ಕೊಟ್ಟ ಸಾಮಾಜಿಕ ವಿಶ್ಲೇಷಣಾ ದೃಷ್ಟಿಕೋನದ ವಿರೋಧಿಯಲ್ಲ. 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಈ ನಿಲುವು ಪ್ರಮುಖವಾಗಿತ್ತು ಎನ್ನುವುದು

ತಿಳಿದುಬರುವ ಸಂಗತಿಯಾಗಿದೆ. ಆದರೆ ಕುವೆಂಪು ಈ ಬಗೆಯ ಸಾಮಾಜಿಕ ಪರಿವರ್ತನೆಯನ್ನು ಜೀವ ಜೀವಾತ್ಮದ ಉದ್ಧಾರದ ನೆಲೆಗಟ್ಟಿನಲ್ಲಿ ಚರ್ಚೆಗೆ ತರುತ್ತಾರೆ.

ಈ ನೆಲೆಯಲ್ಲಿ ಕುವೆಂಪು ಮೂಲತ: ಹಿಂದೂ ದಾರ್ಶನಿಕತೆ ಆಧಾರದಲ್ಲಿ ಜೀವಾತ್ಮ, ಜೀವಕಾರುಣ್ಯ ತತ್ವದಂತೆ ಸಕಲ ಜೀವಿಗಳ ಉದ್ಧಾರ ಎನ್ನುವುದರ ನೆಲೆಯಲ್ಲಿ ಮಲೆನಾಡಿನ ಜಾತಿ ಸಮಾಜವನ್ನು ಚಿತ್ರಿಸುತ್ತಾರೆ. ಈ ಕಾದಂಬರಿಯ 'ಓದುಗರಿಗೆ' ಎನ್ನುವ ಮುನ್ನುಡಿ ರೂಪದ ಮಾತುಗಳಾದ, ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ, ಯಾವುದೂ ಯ:ಕಶ್ಚಿತವಲ್ಲ, ಎನ್ನುವ ಕುವೆಂಪು ಮಾತುಗಳು ಕಾದಂಬರಿಯ ತಾತ್ವಿಕತೆಯೇ ಆಗಿದೆ. ಈ ಮಲೆನಾಡಿನಲ್ಲಿ ದುಡಿಮೆ ಇದೆ, ಪರಿಶ್ರಮ ಇದೆ, ಅಪಾರವಾದ ಪ್ರಾಣಿ ಪಕ್ಷಿಗಳ ಜೀವ ಸಂಕುಲವಿದೆ, ಕಾಡು ಮರ ಪಕ್ಷಿ ಪ್ರಾಣಿಗಳ ಒಡನಾಟದಲ್ಲೇ ಮನುಷ್ಯ ಬದುಕನ್ನು ಕಲಿಯುವ ಬಹಳಷ್ಟು ವಿಚಾರಗಳಿವೆ, ಅಸೂಯೆ ದ್ವೇಷ ಜಾತಿ ಮತ ಮೌಢ್ಯಗಳಿವೆ. ದೈವಿಕತೆಯನ್ನು ಕಾಣಬಹುದಾದ ಪ್ರೀತಿ ಪ್ರೇಮವೂ ಇದೆ. ಮನುಷ್ಯ ಬದುಕನ್ನು ರೂಪಿಸಬಲ್ಲ, ಗಟ್ಟಿಗೊಳಿಸಬಲ್ಲ ಹತ್ತು ಹಲವಾರು ಸಂಗತಿಗಳು ಮಲೆನಾಡಿನ ಮಡಿಲಲ್ಲಿ ಅಪಾರವಾಗಿದೆ. ಇವೆಲ್ಲಾ ತಿರಸ್ಕಾರ ಮಾಡುವಂಥದ್ದಲ್ಲ. ಹುಟ್ಟು ಸಾವು, ದೈವಿಕತೆ, ಪುರಾಣ ಪ್ರಪಂಚವನ್ನು ನಂಬುವ ಈ ಜನರ ಮನಸ್ಸನ್ನು ಅದೇ ಲೋಕದ ನೆಲೆಗಟ್ಟಿನಲ್ಲಿ ಮರುರೂಪಿಕರಿಸುವ ಕೆಲಸ, ವಿಚಾರವನ್ನು ಕಟ್ಟಬೇಕಾಗಿದೆ.

ಕುವೆಂಪು ಈ ಕಾದಂಬರಿಯಲ್ಲಿ ಅಪಾರ ಪ್ರಮಾಣದಲ್ಲಿ ದಾಖಲಿಸುವ ಪ್ರಾಣಿ ಮತ್ತು ಪಕ್ಷಿ ಜೀವ ವೈವಿಧ್ಯಗಳ ಇರುವಿಕೆ, ಅವುಗಳ ವಿಶಿಷ್ಟತೆಗಳ ಆಧಾರದಲ್ಲೇ ಅವರು ಈ ಕಾಡು ಪ್ರಪಂಚಕ್ಕೆ ನೀಡುವ ಪ್ರಾಧಾನ್ಯ, ನೀಡುವ ಅರ್ಥದ ಮಹತ್ವವನ್ನು ಗಮನಿಸುವುದು ಅಗತ್ಯ. ಯಾಕೆ ಆ ಲೋಕವನ್ನು ಕುವೆಂಪು ಎತ್ತಿ ಹಿಡಿಯುತ್ತಾರೆ ಅಥವಾ ಮಾನ್ಯ ಮಾಡುತ್ತಾರೆ ಎನ್ನುವದು ಬಹಳ ಮುಖ್ಯ. ಇಡೀ ಕಾದಂಬರಿಯಲ್ಲಿ ಮನುಷ್ಯರಷ್ಟೇ ಅಥವ ಅದಕ್ಕಿಂತ ಹೆಚ್ಚಾಗಿಯೇ ಕಾಡು ಮತ್ತು ಪ್ರಾಣಿ ಪಕ್ಷಿಗಳ ಕುರಿತು ಸಮೃದ್ಧ ವಿವರಗಳಿವೆ. ಮತ್ತು ಅವುಗಳ ಭಾವಕೋಶಗಳ ವಿವರಣೆಗಳಿವೆ. ತಿಮ್ಮಿಯನ್ನು ಕರೆತರಲು ಹೊರಟಿರುವ ಗುತ್ತಿ ಕಣ್ಣಾಪಂಡಿತರ ಮನೆಯ ಹತ್ತಿರ ಗೊಬ್ಬರದ ಹುಳವೊಂದು ಉಂಡೆಯನ್ನು ಸಾಗಿಸಲು ಮಾಡುವ ಸತತ ಪ್ರಯತ್ನ ಗುತ್ತಿಗೆ ತನ್ನ ಪ್ರೇಮಿಯನ್ನು ತರಲು ಮಾಡುವ ಸಾಹಸಕ್ಕೆ ಪಾಠವಾಗುತ್ತದೆ.

ಇಡೀ ಹಳ್ಳಿಯನ್ನು ಒಂದು ಅನುಭವ ಲೋಕವಾಗಿ ನೋಡುವ ಈ ಕಾದಂಬರಿಯಲ್ಲಿ ಆಧುನಿಕತೆ ಪ್ರವೇಶ ಪಡೆಯುತ್ತಿರುವ ಈ ಸಂದರ್ಭದಲ್ಲಿ ಮಲೆನಾಡು ಕುವೆಂಪು ಅವರಿಗೆ ಬದುಕಿನ ವಿವಿಧ ಜ್ಞಾನ ಸಂಪತ್ತು ಇರುವ, ನಿಸರ್ಗದ ಪ್ರಾಣಿ ಪಕ್ಷಿಗಳ ಒಡನಾಟದಲ್ಲಿ ಮನುಷ್ಯನಾಗುವ ಲೋಕ. ಅವರ ಪ್ರಕಾರ ಪ್ರತಿಯೊಂದು ಜೀವಿಯೂ ಪ್ರಮುಖ.

ಹಾಗಾಗಿ ಹುಲಿಯನನ್ನು ಅದರ ಸ್ವಭಾವ ವಿಶೇಷತೆಯಲ್ಲಿ ವಿವರಿಸುತ್ತಾರೆ. ಆ ಹುಲಿಯನೇ ಎಷ್ಟೊಂದು ಸಲ ಮನುಷ್ಯನಿಗೆ ತನ್ನ ಜೀವದ ಹಂಗು ತೊರೆದು ರಕ್ಷಣೆ ಮಾಡುತ್ತದೆ. ಹುಲಿಯನ ಹಲವಾರು ಸಾಹಸಗಳು, ಬೇಟೆಯ ಕೌಶಲ್ಯಗಳನ್ನು ಕುವೆಂಪು ಪ್ರಾಣಿಯ ಮನೋಲೋಕವನ್ನು ಬಿಡಿಸಿಡುವ ಮಾತುಗಳು ಮನೋತಜ್ಞನ ವಿಶ್ಲೇಷಣೆಗಳಂತೆ ಕಂಡುಬರುತ್ತವೆ. ಹುಲಿಯನನ್ನು ಮುಕುಂದಯ್ಯ ಬೇಕೆಂದು ಕೇಳಿದಾಗ ಅದಕ್ಕೆ ಬದಲಾಗಿ ಕೆಲವು ವಸ್ತಗಳನ್ನು ಪಡೆದು ಭಾರವಾದ ಹೃದಯದಿಂದ ಹೊರಟ ಗುತ್ತಿ ಹಿಂತಿರುಗಿ ಬಂದು ವಸ್ತುಗಳನ್ನು ತಿರುಗಿ ನೀಡಿ ಭಾವನಾತ್ಮಕಗೊಳ್ಳುವ ಸನ್ನಿವೇಶವುಳ್ಳ ಸಮಾಜ ಅದು. ಹೀಗೆ ಹತ್ತಾರು ಉದಾಹರಣೆಗಳನ್ನು ನೀಡಬಹುದು. ಯಾವುದು ಅಂಚಿನ, ಅನಕ್ಷರಸ್ಥ, ಅನಾಗರಿಕ ಸಮಾಜವೆಂದು ಆಧುನಿಕತೆ ಭಾವಿಸುತ್ತದೋ ಅಂಥ ಸಮಾಜದಲ್ಲಿ ಜೀವಂಥವಾಗಿರುವ ಮಾನವೀಯ, ಮನಮಿಡಿಯುವ ಸಂಗತಿಗಳನ್ನು ಲೇಖಕರು ನೀಡುತ್ತಾರೆ.

ಪ್ರಾಣಿಗಳ ಲೋಕ ಈ ರೀತಿಯಾದರೆ ಮನುಷ್ಯರ ಲೋಕ ಇನ್ನೊಂದು ರೀತಿಯದು. ಹಳೆಮನೆಯ ಸುಬ್ಬಣ್ಣ ಹೆಗ್ಗಡೆ ಹೆಂಗಸರು ಸ್ನಾನ ಮಾಡಲು, ಬಟ್ಟೆ ಒಗೆಯಲು ಸಮಯ ವ್ಯರ್ಥ ಮಾಡಬಾರದೆಂದು ಭಾವಿಸುವವನು. ಇಂಥ ಕೆಲಸಗಳಿಗೆ ಹೆಚ್ಚು ಗಮನ ಕೊಡುವುದು, ತನ್ನ ಮಗ ತಿಮ್ಮಪ್ಪ ಹೆಗ್ಗಡೆ ಶಂಕರ ಹೆಗ್ಗಡೆಯ ಜೊತೆಗಿನ ಅಸೂಯೆ ಯಲ್ಲಿ ತನ್ನನ್ನು ಅಂದಗೊಳಿಸಿಕೊಳ್ಳಲು ಮಾಡುವ ಪ್ರಯತ್ನ ಮನೆಹಾಳಿನ ಸೂಚನೆ ಯೆಂದೇ ಭಾವಿಸುತ್ತಾನೆ. ಶಂಕರ ಹೆಗ್ಗಡೆ ಮನೆಗೆ ಹಂಚು ಹಾಕಿಸುವುದು ಮತ್ತು ಮಡಿ ಬಟ್ಟೆಗಳನ್ನು ಉಟ್ಟು ಬ್ರಾಹ್ಮಣರಂತೆ ಇರಲು ಪ್ರಯತ್ನಿಸುವುದು ಸುಬ್ಬಣ್ಣ ಹೆಗ್ಗಡೆಯ ಪ್ರಕಾರ ದಿವಾಳಿಯಾಗುವ ಸಂಕೇತ. ಯಾವಾಗಲೂ ದುಡಿಯುವ ಸುಬ್ಬಣ್ಣ ಹಂದಿ ದೊಡ್ಡಿ, ಕುರಿದೊಡ್ಡಿಗಳ ಒಡನಾಟದಲ್ಲಿ ಸಂತೋಷ ಕಾಣುತ್ತಾನೆ. ಕುವೆಂಪು ಅವರಿಗೆ ಮಲೆ ನಾಡಿನ ಹೊರಗಿನ ಲೋಕ ಮಾತ್ರ ವಿಶ್ವವಲ್ಲ. ಮಲೆನಾಡು ಕೂಡ ಒಂದು ವಿಶ್ವ. ಮತ್ತು ಸುಬ್ಬಣ್ಣ ಕೂಡಾ ಒಬ್ಬ ವಿಶ್ವಪ್ರಜೆ. ಈ ವಿಶ್ವಪ್ರಜೆ ಆಧುನಿಕ ಬದುಕಿಗೆ ಹೆಜ್ಜೆ ಇಡುವುದನ್ನು ಶೋಕಿ, ಲೋಲುಪತೆ ಎಂದೇ ಭಾವಿಸುತ್ತಾನೆ. ಹಾಗಾಗಿ ಹತ್ತು ಹಲವಾರು ಭಾವ ಕೋಶಗಳ ಲೋಕ ಹೊರಗಿನ ಚಿಂತನೆಯನ್ನು ಪಡೆದು ಉದ್ಧಾರವಾಗುವು ದಾದರೂ ಏನು?

ಆದರೆ ಇದೇ ಸಮಾಜ ಜಾತೀಯತೆಯ, ಲಿಂಗ ಅಸಮಾನತೆಯ ಹತ್ತು ಹಲವಾರು ತರತಮಗಳನ್ನು, ಅವಿಚಾರಗಳನ್ನು ಮೈಗೂಡಿಸಿಕೊಂಡಿದೆ. ದಲಿತರು ತಮ್ಮದೇ ಪ್ರತ್ಯೇಕ ಕೇರಿಯಲ್ಲಿ, ಹಟ್ಟಿಗಳಲ್ಲಿ ಬದುಕುತ್ತಾ ಗೌಡರ ಜೀತ ಮಾಡುತ್ತಿರುವುದು ಒಂದು ಕಡೆ ಗಾದರೆ, ಹಳೆಪೈಕದವರನ್ನು ಒಕ್ಕಲಿಗರು ನಿರ್ಬಂಧಿಸುವುದು ಇನ್ನೊಂದು ಕಡೆಯಲ್ಲಿ

ಕಂಡು ಬರುವ ಜಾತಿ ಅಸಮಾನತೆಯ ಸಂಗತಿಯಾಗಿದೆ. ಬಿಲ್ಲವರು, ಹಳೆಪೈಕದವರು ಭೂಮಿ ಹೊಂದುವುದು, ಮದುಮಕ್ಕಳನ್ನು ಮರವಣಿಗೆ ಮಾಡುವುದನ್ನು ಒಕ್ಕಲಿಗರು ಒಪ್ಪುವು ದಿಲ್ಲ. ಅದರ ವಿರುದ್ಧ ಪ್ರತಿಭಟಿಸುವ ಶಕ್ತಿ ಹಳೆಪೈಕದವರಲ್ಲೂ ಇಲ್ಲ. ಆದರೆ ಸೇಸ ನಾಯ್ಕನಂತ ಭೂಮಿ ಹೊಂದಿರುವವರು ತಮ್ಮ ಜನರ ಮುಂದೆ ಆಡಿಕೊಳ್ಳುತ್ತಾರಷ್ಟೆ.

ಇನ್ನೊಂದು ಕಡೆಯಲ್ಲಿ ತಿಮ್ಮಿಯನ್ನು ಗುತ್ತಿ ಮದುವೆಯಾದರೆ ಜೀತದ ಒಂದಾಳು ಕಡಿಮೆಯಾಗುವುದನ್ನು ಒಡೆಯ ಸಹಿಸುವದಿಲ್ಲ. ಇಂಥ ಸಮಾಜದಲ್ಲಿ ಅಪಾರ ಪ್ರಮಾಣದ ಅಂಧಚಾರಗಳು, ಮೌಢ್ಯಗಳು ತುಂಬಿಹೋಗಿವೆ. ಇದರ ಲಾಭವನ್ನು ಪಡೆಯಲು ಕಿಲಸ್ತರ ಪಾದ್ರಿ ಜೀವರತ್ನಯ್ಯ ಧರ್ಮಪ್ರಚಾರಕ್ಕೆ ತೊಡಗಿದ್ದಾನೆ. ಇಲ್ಲಿನ ಜಾತೀಯತೆಗೆ ಬ್ರಾಹ್ಮಣರು, ಮಠಮಾನ್ಯಗಳು ಕಾರಣ. ಇದರಿಂದಾಗಿ ಸಮಾಜ ಜಾತಿ ಯಿಂದ ಒಡೆದಿದೆ, ನಾಶವಾಗಿದೆ. ಇದರ ಲಾಭವನ್ನು ಕ್ರೈಸ್ತ ಮತಪ್ರಚಾರಕರು ಪಡೆದು ಕೊಳ್ಳುತ್ತಿದ್ದಾರೆ. ಸ್ವತ: ಒಕ್ಕಲಿಗ ಗೌಡ ದೇವಯ್ಯ ಮತಾಂತರಗೊಳ್ಳುವುದನ್ನು ಒಪ್ಪಿಕೊಂಡಿ ದ್ದಾನೆ. ಇಲ್ಲಿನ ಜಾತಿ, ಮೇಲು ಕೀಳು ಅಳಿಯಬೇಕಾದರೆ, ನಮ್ಮ ಮೌಢ್ಯಗಳು ದೂರವಾಗ ಬೇಕಾದರೆ ಮತಾಂತರಗೊಳ್ಳುವುದು ಸೂಕ್ತ ಎನ್ನವುದು ದೇವಯ್ಯನ ವಾದ. ತನ್ನ ಪತ್ನಿ ಹೆರಿಗೆಯಾಗಿ ಬಾಣಂತನದಲ್ಲಿ ಆಚರಿಸುವ, ನಂಬುವ ವಿವಿಧ ಸಂಗತಿಗಳು ಮೌಢ್ಯ ಗಳಾಗಿ ದೇವಯ್ಯನಿಗೆ ಸಿಟ್ಟು ತರಿಸುವಂಥದ್ದಾಗಿದೆ. ಇಂಥ ಸಂದರ್ಭದಲ್ಲಿ ಕ್ರೈಸ್ತ ಮತ ಪ್ರಚಾರ ನಡೆದಿದೆ. ಲೇಖಕರ ಪ್ರಕಾರ ಜಾತಿಯತೆಯ, ಮೌಢ್ಯದ ಲಾಭವನ್ನು ಪಡೆಯಲು ಮತಪ್ರಚಾರಕರು ಸಿದ್ಧವಾಗಿದ್ದಾರೆ. ಜೀವರತ್ನಯ್ಯನ ಬೈಸಿಕಲ್ ಸವಾರಿಗೆ ಜನ ಮರುಳಾಗಿ ದ್ದಾರೆ. ಈವರೆಗೆ ಯಂತ್ರವನ್ನು ನೋಡದ ಜನ ಯಂತ್ರದ ಮೋಡಿಗೆ ಒಳಗಾಗಿದ್ದಾರೆ, ದಾಸರಾಗುವುದಕ್ಕೆ ಸಿದ್ಧರಾಗಿದ್ದಾರೆ.

ಕಾದಂಬರಿಯೊಳಗಡೆ ಕಾಣಿಸಿಕೊಳ್ಳುವ ಇನ್ನೊಂದು ಸಂಗತಿಯೆಂದರೆ ಶಂಕರಪ್ಪನ ಬ್ರಾಹ್ಮಣ್ಯದ ಅನುಕರಣೆ. ಜೋಯಿಸರಾದ ಮಂಜಯ್ಯನವರ ಪ್ರಭಾವದಿಂದ ಶಂಕರಪ್ಪನ ತನ್ನ ಒಕ್ಕಲಿಗ ಬದುಕಿನ ಕ್ರಮಗಳನ್ನು ಬಿಟ್ಟು ಸುಸಂಸ್ಕೃತನಂತೆ ಮಡಿ ಬಟ್ಟೆ ತೊಟ್ಟು ತುಳಸಿಕಟ್ಟೆ ಮುಂತಾದ ಪೂಜೆ ಪುರಸ್ಕಾರಗಳನ್ನು ಕೈಗೊಂಡಿದ್ದಾನೆ. ಮನೆಗೆ ಹಂಚು ಹಾಕಿಸಿ ಹಿಂದಿನ ಸ್ಥಿತಿಯಲ್ಲೇ ಬದುಕುತ್ತಿರುವ ಸುಬ್ಬಣ್ಣ ಹೆಗ್ಗಡೆಯವರ ಮುಂದೆ ವೈದಿಕ ರಂತೆ ಪರಿವರ್ತನೆಗೊಳ್ಳುತ್ತಿದ್ದಾನೆ. ಇದರಿಂದ ನನಗೆ ಹೆಚ್ಚಿನ ಗೌರವ ಎನ್ನುವ ಭಾವನೆ ಅವನದಾಗಿದೆ. ಆದರೆ ಜಾತಿಯತೆಯ ಎದುರಿಗೆ ಬಂದಿರುವ ಈ ಎರಡೂ ಪ್ರಕ್ರಿಯೆಗಳು, ಅಂದರೆ ವೈದಿಕ ಅನುಕರಣೆ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುವಂಥದ್ದು ಕಾದಂಬರಿಯಲ್ಲಿ ಹಾಸ್ಯ, ವಿಡಂಬನೆಯ ಮನೋಭಾದಲ್ಲೇ ನಿರೂಪಿತವಾಗಿದೆ. ಬೈಸಿಕಲ್ ಸವಾರಿ, ಶಾಲೆಗೆ ಬಾವಿ ತೋಡಲು ನೀರಿನ ಸೆರೆ ನೋಡುವ ಸಂದರ್ಭದ ಪ್ರಸಂಗ ಮುಂತಾದವುಗಳಿಂದ ಇದನ್ನು ಗಮನಿಸಬಹುದು.

ದೇವಯ್ಯ ಗಡ್ಡದಯ್ಯನನ್ನು ಭೇಟಿಯಾಗುವುದು ಮತ್ತು ಅವನು ಕ್ರೈಸ್ತ ಧರ್ಮದ ನಿಲುವುಗಳಿಗೆ ಎದುರಾಗಿ ನೀಡುವ ಉತ್ತರ, ವಿವೇಕಾನಂದರಿಗಾಗಿ ಕಾಯುತ್ತಿರುವುದನ್ನು ತಿಳಿಸುವುದೆಲ್ಲ ಸನಾತನ ಹಿಂದೂ ಧರ್ಮದ ತಿಳುವಳಿಕೆ, ಆಧ್ಯಾತ್ಮ ಜ್ಞಾನದಿಂದ ಈ ಸಮಾಜದ ಏಳ್ಗೆ ಸಾಧ್ಯ ಎನ್ನುವುದನ್ನು ಮುಂದಿಡುತ್ತದೆ. ಅಂದರೆ ಜೀವರತ್ನಯ್ಯನ ಕ್ರಿಶ್ಚಿಯಾನಿಟಿಯ ಪ್ರಚಾರಕ್ಕೆ ಹಾಗೂ ಜಾತಿವ್ಯವಸ್ಥೆಗೆ ಪರಿಹಾರ ಸನಾತನ ಹಿಂದೂ ಆಧ್ಯಾತ್ಮಿಕ ಚಿಂತನೆ ಎನ್ನುವುದು ಕುವೆಂಪು ನಿಲುವಾಗಿದ್ದು, ಭಾರತದ ಪ್ರಾಚೀನ ಹಿಂದೂ ಧರ್ಮವನ್ನು ಮನುಷ್ಯ ಮತ್ತು ಸಮಾಜ ಉದ್ಧಾರದ ವೈಚಾರಿಕ ಚಿಂತನೆಯಾಗಿ ಬಳಸಿದ ವಿವೇಕಾನಂದ, ಅರವಿಂದರ ದಾರಿಯನ್ನು ಅನುಸರಿಸುತ್ತಾರೆ. ಹೀಗೆ ಮಲೆಗಳಲ್ಲಿ ಮದು ಮಗಳು ಕಾದಂಬರಿಯಲ್ಲಿ ಸ್ಥಳೀಯವಾದ ಸಾಮಾಜಿಕ ಜನಜೀವನವನ್ನು ಪ್ರಸ್ತುತಪಡಿ ಸುತ್ತಾ, ಅದರ ಅಪಾರ ಅನುಭವ ಲೋಕವನ್ನು ಮಂಡಿಸುತ್ತಾ, ಅಲ್ಲಿರುವ ಸಾಮಾಜಿಕ ಸಮಸ್ಯೆಗಳಿಗೆ ದಾರ್ಶನಿಕ ಪರಿಹಾರವನ್ನು ಕಂಡುಕೊಳ್ಳುವ ನಿರೂಪಣೆಯಿದೆ.

ಈಗಾಗಲೇ ಪ್ರಸ್ತಾಪಿಸಿದಂತೆ, ಕುವೆಂಪು ತಾನು ಬದುಕಿ ಬರೆದ ಕಾಲದ ಸಂದರ್ಭ ದಲ್ಲಿ ಮತ್ತು ರಾಷ್ಟ್ರೀಯತೆ ನಿರ್ದಿಷ್ಟ ಸನ್ನಿವೇಶದಲ್ಲಿ ತನ್ನ ಚಿಂತನೆಯನ್ನು ರೂಪಿಸಿ ಕೊಂಡರು. ಶೂದ್ರ ಮತ್ತು ತಳಸಮುದಾಯಗಳ ಸ್ವಾತಂತ್ರ್ಯ ಮತ್ತು ಸಮಾನತೆಯ ಕುರಿ ತಂತೆ ಸಾಮಾಜಿಕ ವಾಗ್ವಾದದ ನೆಲೆಗಟ್ಟಿನಲ್ಲಿ ಪ್ರಮುಖವಾಗಿ ದುಡಿದ ಮಾಹಾತ್ಮ ಫುಲೆ, ಅಂಬೇಡ್ಕರ್ ಮುಂತಾದವರ ಚಿಂತನೆಗಳು ಯಾಕೆ ಪ್ರಮುಖ ಅನ್ನಿಸಲಿಲ್ಲ ಎನ್ನವುದು ಮುಖ್ಯ ವಿಚಾರವಾಗಿದೆ. ಯಾಕೆಂದರೆ ಕುವೆಂಪು ಅವರದು ಒಂದು ಬಗೆಯಲ್ಲಿ ದರ್ಶನ ಪ್ರಧಾನವಾದ ಆಧ್ಯಾತ್ಮಿಕ ಚಿಂತನೆ. ಹೆಚ್ಚು ಕಡಿಮೆ ತಳ ಸಮುದಾಯಗಳ ಏಳಿಗೆಯ ಕುರಿತಂತೆ ಗಾಂಧಿಯವರ ಚಿಂತನೆ ಇದೇ ರೀತಿಯಾದಾಗಿತ್ತು. ಈ ಚಿಂತನಾಧಾರೆಗಳಿಗೆ ಕೂಡಾ ಬೌದ್ಧಿಕ ಮಹತ್ವ ಇದೆ. ಪ್ರಯೋಗಿಕ ಮಹತ್ವವೂ ಇದೆ. ಆದರೆ ಭಾರತದಂಥ ಕಠಿನ ತರತಮಗಳಿರುವ ಸಮಾಜದಲ್ಲಿ ಮೂಲತಃ ಸಾಮಾಜಿಕ ಬದಲಾವಣೆಗಳಾಗ ಬೇಕಾದರೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಚಿಂತನೆಗಳು ಮುಖ್ಯ ಎನ್ನುವ ವಿಚಾರವನ್ನು ಫುಲೆ, ಅಂಬೇಡ್ಕರಾದಿಯಾಗಿ ಮಾಡಿದ್ದಾರೆ. ಕುವೆಂಪು ಕುರಿತಂತೆ ವಿವೇಚಿಸುವಾಗ ಈ ಪ್ರಶ್ನೆಯನ್ನು ಪ್ರೊ॥ ಜಿ. ಎಚ್. ನಾಯಕ್ ಚರ್ಚೆ ಮಾಡಿದ್ದಾರೆ. ಹಾಗಾಗಿ ಕುವೆಂಪು ಅವರು ಬ್ರಾಹ್ಮಣ್ಯವನ್ನು ಪ್ರಶ್ನಿಸುತ್ತಾರೆ : ಆದರೆ ದಲಿತರ ವಿಚಾರ ಬಂದಾಗ ಒಕ್ಕಲಿಗರ ಪರವಾಗಿ ನಿಲ್ಲುತ್ತಾರೆ ಎನ್ನುವ ಪ್ರೊ. ಕೃಷ್ಣಪ್ಪ ಅವರ ವಿಮರ್ಶೆಯ ಮಾತುಗಳನ್ನು ಈ ನೆಲೆಯಲ್ಲಿ ಪರಿಶೀಲಿಸಿಕೊಳ್ಳಬಹುದೆಂದು ಅನ್ನಿಸುತ್ತದೆ.

೧೧. 'ಮಲೆಗಳಲ್ಲಿ ಮದುಮಗಳು' ಮತ್ತು ರಾಮಕೃಷ್ಣ ಪರಮಹಂಸ

– ಲಕ್ಷ್ಮೀಶ ತೋಳ್ಪಾಡಿ

ಕುವೆಂಪು ಮೇಲೆ ಸ್ವಾಮಿ ವಿವೇಕಾನಂದರ ಪ್ರಭಾವವು ಗಾಢವಾದದ್ದೆಂದು ಮತ್ತೆ ಹೇಳಬೇಕಿಲ್ಲ. ಕುವೆಂಪು ಭಾಷೆಯಲ್ಲಿಯೇ ಇದು ವ್ಯಕ್ತವಾಗುತ್ತದೆ. ವಿವೇಕಾನಂದರ ಬಡಿದೆಬ್ಬಿಸುವಂಥ ಧಾಟಿ, ಲೋಕಕ್ಕೆ ತಾನು ಒಂದು ಸಂದೇಶವನ್ನು ನೀಡುವುದಕ್ಕಿದೆ ಎಂಬ ಉತ್ತಾಲಧ್ವನಿ, ಲೋಕದ ಮೌಢ್ಯ, ದೌರ್ಜನ್ಯಗಳಿಗೆ ಕನಲುವ ಪರಿ ಮತ್ತು ಇವೆಲ್ಲ ವನ್ನೂ ಅಭಿವ್ಯಕ್ತಿಸಲು ಅಗತ್ಯವಾದ ಭಾಷೆಯ ರ್‍ಹೆಟರಿಕ್–ಈ ಎಲ್ಲ ಅಂಶಗಳೂ ಕುವೆಂಪು ಭಾಷೆಯಲ್ಲಿಯೂ ಅವತರಿಸಿವೆ. ವ್ಯಕ್ತಿತ್ವದ ಔನ್ನತ್ಯದ ಭಾವದಿಂದ–ಇಗೋಟಿ ಸ್ಟಿಕ್ ಸಬ್ಲೈಮ್–ನಿಂದ ಹುಟ್ಟುವ ಸೃಷ್ಟಿಶೀಲ ಕ್ರಿಯಾತ್ಮಕತೆ ಇದು. ಬೆಟ್ಟದ ಎತ್ತರದಲ್ಲಿಯೇ ಹೊಳೆ ಹುಟ್ಟುವಂತೆ!

"ಮಲೆಗಳಲ್ಲಿ ಮದುಮಗಳು"ವಿನಲ್ಲೂ ವಿವೇಕಾ ನಂದರ ಪ್ರಸ್ತಾವನೆ ಇದೆ. ಕಾದಂಬರಿಯ ೪೧ನೆಯ ಅಧ್ಯಾಯದಲ್ಲಿ ಬರುವ ಕಲ್ಲೂರು ಗಡ್ಡದಯ್ಯ–ಸ್ವಾಮಿ ವಿವೇಕಾನಂದರು ಇಂಡಿಯಕ್ಕೆ ಬರುವ ದಾರಿಯಲ್ಲಿದ್ದಾರೆ–ಎನ್ನುತ್ತಾನೆ. ಹೊಸತೊಂದು ಯುಗಶಕ್ತಿಯೇ ಉದ್ಬೋಧನೆಗೊಳ್ಳಲಿದೆ ಎನ್ನುತ್ತಾನೆ. ಇದಕ್ಕೆ ಪೂರಕವಾಗಿ–ನಾವು ಕೆಲವರು–ಸ್ಥಳೀಯ ದೇವತಾಶಕ್ತಿಗಳನ್ನು ಎಚ್ಚರಿಸುವಕೆಲಸ ಮಾಡುತ್ತಿದ್ದೇವೆ ಎನ್ನುತ್ತಾನೆ. "ಸ್ಥಳೀಯ ದೇವತಾಶಕ್ತಿಗಳ ಎಚ್ಚರ" ಎನ್ನುವ ಈ ಬಹು ಅರ್ಥಪೂರ್ಣವೂ ಆಳವೂ ಆದ ನುಡಿಗಟ್ಟಿನ ಬಗ್ಗೆ ಮುಂದೆ ನೋಡೋಣ. ಅದರೆ ಗಡ್ಡದಯ್ಯನ ಮಾತುಗಳಲ್ಲಿ–ಭವ್ಯ ಭವಿಷ್ಯ ಸೂಚಕಮಾತುಗಳಲ್ಲಿ–ಸ್ವಯಂ ಕುವೆಂಪು ಅವರ ಭವಿಷ್ಯವೂ ಅಡಗಿರುವುದನ್ನು ಕಾದಂಬರಿ ಅಡಗಿಸುವುದಿಲ್ಲ. ಇವು ಗಡ್ಡದಯ್ಯನ ಮಾತುಗಳು: "ಆ ಸ್ವಾಮೀ ವಿವೇಕಾ ನಂದರಿಂದ ಜಾಗ್ರತವಾಗುವ ಯುಗಧರ್ಮಶಕ್ತಿಗೆ ಸೇವೆ ಸಲ್ಲಿಸುವ ಚೇತನಗಳು ನಿಮ್ಮ ಸಂತಾನರಲ್ಲಿ ಮುಂದೆ ಸಂಭವಿಸಲಿವೆ! ಒಂದು ರೀತಿಯಿಂದ ಕೆಲವಾಗಲೇ ಸಂಭವಿ ಸಿಯೂ ಆಗಿದೆ!" ಇವು ಕುವೆಂಪು ತಮ್ಮ ಕುರಿತು, ತಮ್ಮ ಪೂರ್ವಜರ ಕುರಿತು ಹೇಳಿ ಕೊಂಡ ಮಾತುಗಳು! ಅಂದರೆ ಕಾದಂಬರಿಯಲ್ಲಿ–ಮಲೆನಾಡಿನ ಬದುಕಿನ ಆಳವಾದ ಕಥನದ ಜೊತೆಗೆ–ಆತ್ಮಕಥೆಯ ಒಂದು ಎಳೆಯೂ ನೇರವಾಗಿ ಸೇರಿಕೊಂಡಿತು ಮತ್ತು ಆ ಎಳೆ, ವಿವೇಕಾನಂದರನ್ನು ಕುರಿತ ಪ್ರಸ್ತಾವ ದೊಂದಿಗೇ ಸೇರಿಕೊಂಡಿತು. ಇಷ್ಟರಮಟ್ಟಿಗೆ

ವ್ಯಕ್ತಿತ್ವದ ಔನ್ನತ್ತ್ಯದ ಮನೋಧರ್ಮ–'ಮಲೆಗಳಲ್ಲಿ ಮದುಮಗಳು' ವಿನಲ್ಲೂ ಕಾಣಿಸುತ್ತದೆ. ನಿಜ. ಅಲ್ಲದೆ ಇಂಥದೊಂದು ಮಹಾಕಾದಂಬರಿಯನ್ನು ಬರೆ ಯಲು ಬೇಕಾದ ಸೃಷ್ಟಿಶಕ್ತಿ ಅಗಾಧವೂ ಉನ್ನತವೂ ಆದದ್ದೆನ್ನುವುದರಲ್ಲಿ ಎರಡು ಮಾತಿಲ್ಲ ವೆನ್ನುವುದೂ ನಿಜ. ಆದರೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಮತ್ತೆ ಮತ್ತೆ ನಿಕಟವಾಗಿ ಓದಿದಂತೆ ಅನ್ನಿಸುವುದೇನೆಂದರೆ ಕುವೆಂಪುವಿಗೆ–ಈ ಔನ್ನತ್ತ್ಯದ ಮನೋ ಧರ್ಮವನ್ನು ಕಳಚಿಕೊಳ್ಳಬೇಕಾಗಿದೆ! ಕಳಚಿಕೊಂಡಾಗಲೇ ಅದರ ನಿಜವಾದ ಕೃತಾರ್ಥತೆ! ನಿಜವಾದ ಔನ್ನತ್ತ್ಯ! ಏಕೆಂದರೆ ಈ ಔನ್ನತ್ತ್ಯದ ಮನೋಧರ್ಮವೂ ಕೂಡ ಒಂದು ಉಪಾಧಿ! ಒಂದು ಬಗೆಯ ಮಾನಸಿಕತೆ! ಎಲ್ಲ ಉಪಾಧಿಗಳಿಂದಲೂ ಕಳಚಿಕೊಂಡಾಗಲೇ ತನ್ನ ಪ್ರೀತಿಯ ನಿಸರ್ಗದ ಜೊತೆಗೆ ನಿಜವಾದ ತಾದಾತ್ಮ್ಯ!

ನಿಸರ್ಗವೆಂದರೆ ಬೆಟ್ಟ–ಕಾಡು–ಹೊಳೆಗಳು ಮಾತ್ರವಲ್ಲ. ನಿಸರ್ಗವೆಂದರೆ ಇಲ್ಲಿ ಬದುಕುವ ಚರಾಚರಗಳ ಒಟ್ಟು ಬದುಕು. ಈ ಬದುಕಿಗಿಂತ ತಾನು ಬೇರೆಯಲ್ಲ. ಬೇರೆ ಯಾಗುವುದು ಸಾಧ್ಯವೂ ಇಲ್ಲ. ಈ ಅರಿವನ್ನು, ಅಪೂರ್ವವಾದ ಸಾಧಾರಣೀಕರಣ ಸ್ವರೂಪದ ಈ ಅರಿವನ್ನು ಪಡೆಯುವುದಕ್ಕೆ, ಈಗಾಗಲೇ ಇರುವ ಈ ಅರಿವನ್ನು ಪಡೆ ಯುವುದಕ್ಕೆ ಎಲ್ಲ ಬಗೆಯ ಉಪಾಧಿಗಳೂ ಅಡ್ಡಿಯಾಗಿರುವುದರಿಂದ, ಉಪಾಧಿಗಳಿಂದ ಕಳಚಿಕೊಳ್ಳಬೇಕಾಗಿದೆ. ಬಯಲಾಗಬೇಕಿದೆ. ನಿರಾಳವಾಗಬೇಕಿದೆ. ಅನಿಕೇತನನಾಗ ಬೇಕಿದೆ. ಸರ್ವಸಾಧಾರಣನಾಗಬೇಕಿದೆ. 'ಮಲೆಗಳಲ್ಲಿ ಮದುಮಗಳು' ಈ ದಿಕ್ಕಿನತ್ತ ಹರಿಯುತ್ತಿದೆ. ಸಾಧಾರಣೀಕರಣವನ್ನು ಸಾಧಿಸುವುದೇ ಸಾಹಿತ್ಯದ ನಿಜವಾದ ಉದ್ದೇಶ ಎಂಬ ಶ್ರದ್ಧೆ ಇಲ್ಲಿ ಗಾಢವಾಗಿ ಕಾಣಿಸಿಕೊಂಡಿದೆ. ಈ ಅರ್ಥದಲ್ಲಿ ಕುವೆಂಪು ಇಲ್ಲಿ ರಾಮಕೃಷ್ಣರಿಗೆ ಹತ್ತಿರವಾಗಿದ್ದಾರೆ!

ಔನ್ನತ್ತ್ಯದ ಮನೋಧರ್ಮಕ್ಕೆ ಸಂಕೇತವೆನ್ನುವಂತೆ ಕಾದಂಬರಿಯ ಜಗತ್ತಿನಲ್ಲಿ 'ಹುಲಿಕಲ್ಲು ನೆತ್ತಿ' ಇದೆ ಎಂದು ಭಾವಿಸಿದೆವಾದರೆ– ಆ ನೆತ್ತಿಯ ಮೇಲಿಂದ ನೋಡಿದರೆ ಕಾಣಿಸುವುದು ಕೆಳಗೆ ಹರಡಿರುವ ಕಣಿವೆಯ ಸೌಂದರ್ಯ! ಹೌದು. ಕಣಿವೆಯ ಆಳದ ಸೌಂದರ್ಯ ತಿಳಿಯಬೇಕಾದರೆ ಬೆಟ್ಟದ ನೆತ್ತಿಯ ಮೇಲಿಂದಲೇ! ಆಗ, ಆ ಪರವಶತೆ ಯಲ್ಲಿ ಶಿಖರ–ಕಣಿವೆಗಳು ನಿಜಕ್ಕೂ ಬೇರೆಯಲ್ಲ ಎಂದು ಹೊಳೆಯುವುದು! ಆ ಹೊಳ ಹಿನಲ್ಲಿಯೇ 'ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ; ಯಾವುದೂ ಯಕಃಶ್ಚಿತವಲ್ಲ' ಎಂಬ ಸಾಲುಗಳು ಮೂಡಿಬರುವವು. ರಾಮಕೃಷ್ಣರು ಹೇಳುತ್ತಿದ್ದರಂತೆ: "ಮೆಟ್ಟಿಲುಗಳ ಮೇಲಿಂದ ಹೆಜ್ಜೆಇಡುತ್ತ ಮಾಳಿಗೆ ಹತ್ತಿದ ಮೇಲೆ ತಿಳಿಯುವುದು–ಮಾಳಿಗೆ ಯನ್ನು ಕಟ್ಟಿದ ಸಾಮಾಗ್ರಿಗಳಿಂದಲೇ ಮೆಟ್ಟಿಲುಗಳನ್ನೂ ಕಟ್ಟಿದ್ದೆಂದು". ಕುವೆಂಪು ನಿಸ್ಸಂ ದೇಹವಾಗಿ ಈ ಕಾಣ್ಕೆಯ ಪರ ಇದ್ದಾರೆ.

ರಾಮಕೃಷ್ಣರ ಬಗ್ಗೆ ಒಂದು ಘಟನೆ ಇದೆ. ಅದೇ ಆಗತಾನೇ ಕೊಲ್ಕೊತ್ತಾದಲ್ಲಿ ಮೃಗಾಲಯವನ್ನು ರೂಪಿಸಲಾಗಿತ್ತಂತೆ. ಶಿಷ್ಯರು ರಾಮಕೃಷ್ಣರನ್ನು ಮೃಗಾಲಯವನ್ನು ತೋರಿಸೋಣವೆಂದು ಅಲ್ಲಿಗೆ ಕರೆದೊಯ್ದರಂತೆ. ಚಿಕ್ಕಮಕ್ಕಳಂತೆ ಮೃಗಗಳನ್ನು ನೋಡಿ ಸಂತೋಷಪಡುತ್ತಿದ್ದ ರಾಮಕೃಷ್ಣರು ಪಂಜರದೊಳಗಿರುವ ಸಿಂಹದ ಬಳಿ ಬಂದರಂತೆ. ಅದನ್ನು ನೋಡಿದ್ದೇ;"ಹಾ! ತಾಯಿ ದುರ್ಗೆಯ ವಾಹನ" ಎಂದು ಉದ್ಗರಿಸಿ ಭಾವ ಸಮಾಧಿಯಲ್ಲಿ ಮುಳುಗಿದರಂತೆ!

ಈ ಘಟನೆ ಬಹು ಸೂಚಕವಾಗಿದೆ. ಆಳವಾಗಿದೆ. ಆಧ್ಯಾತ್ಮಿಕವಾಗಿದೆ. ಪ್ರತಿಯೊಂದು ಜೀವಿಯೂ– ಮನುಷ್ಯಜೀವಿಯೂ ಸೇರಿ–ಈಗ ಹೇಗಿರುವುದೋ ಅದಲ್ಲದೆ ಇನ್ನೊಂದು ಸಾಧ್ಯತೆಯನ್ನೂ ತನ್ನಲ್ಲಿ ಅಡಗಿಸಿಕೊಂಡಿದೆ. ಆ ಸಾಧ್ಯತೆಯನ್ನು ತನ್ನಲ್ಲಿ ಹೊತ್ತು ಕೊಂಡಿದೆ. ಅಂದರೆ ಆ ಸಾಧ್ಯತೆಯ ವಾಹಕವಾಗಿದೆ. ವಾಹನವಾಗಿದೆ. ವಾಹನವೆಂದರೆ ದೊಡ್ಡದನ್ನು ಹೊರಬಲ್ಲ ಧಾರಣಶಕ್ತಿ. ದೊಡ್ಡ ಅನುಭವವೊಂದರಲ್ಲಿ ಪಾಲ್ಗೊಳ್ಳುವ, ಪಾಲ್ಗೊಂಡು ಅದೇ ತನ್ನನ್ನು ವಾಹನವನ್ನಾಗಿ ಬಳಸಿಕೊಳ್ಳುವಂತೆ ಮಾಡುವ ಪಾಲು ದಾರಿಕೆಯ ಶಕ್ತಿ. ಇದನ್ನು ಕಂಡವನಿಗೆ ಯಾವುದೂ ಯ:ಕಶ್ಚಿತವಲ್ಲ!

ಮೃಗಶಾಲೆಯ ಸಿಂಹ ಅದು. ಅದು ಪಂಜರದಲ್ಲಿದೆ. ಬಂದಿಯಾಗಿದೆ. ಸ್ವಾತಂತ್ರ್ಯದ ಯಾವ ಸುಖವೂ ಅದಕ್ಕಿಲ್ಲ. ಅದು ಈ ಸ್ಥಿತಿಯಲ್ಲಿ ಖಂಡಿತವಾಗಿ ಸುಖವಾಗಿರಲಾರದು. ಬಡಪಾಯಿ ಸಿಂಹ! ಆದರೂ ಅದರ ಸಾಧ್ಯತೆ ಮಾತ್ರ ಕುಂದಿಲ್ಲ! ಅಥವಾ ಇಂಥ ವಿಪರ್ಯಾಸದ ಸ್ಥಿತಿಯಲ್ಲಿಯೇ ಅದರ ಒಳಗಿನ ಸಾಧ್ಯತೆ–ನೋಡಬಲ್ಲವರಿಗೆ–ಎದ್ದು ಕಾಣುವುದೇನೋ!

ರಾಮಕೃಷ್ಣರ ಈ ಮಾತು–ಈ ಉದ್ಗಾರ–ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಿಡಿತದಲ್ಲಿ ನಲುಗುತ್ತಿದ್ದ ಭಾರತೀಯರನ್ನು ಸಂಕೇತಿಸುತ್ತಿದೆ. ಹಾಗೆಂದು ರಾಮಕೃಷ್ಣರು ಹೇಳಿಲ್ಲ, ನಿಜ. ಅವರು ನೇರವಾಗಿ ಹೇಳಲಾರರು. ವಿಸ್ಡಮ್ ಸ್ಪೀಕ್ಸ್ ಇನ್ ಇಮೇಜಸ್– ಎಂಬ ಮಾತಿದೆ. ಅದು ನಿಜವಿರಬೇಕು!

ಆದರೆ ವಿವೇಕಾನಂದರಿಗೆ ರಾಮಕೃಷ್ಣರ ಈ ಉದ್ಗಾರ–ಹಾಗೆಯೇ, ಭಾರತೀಯರನ್ನು ಕುರಿತೇ ಹೇಳಿದಂತೆ ಅರ್ಥವಾಗಿಬಿಟ್ಟಿದೆ. ವಿವೇಕಾನಂದರ ಎಲ್ಲ ಮಾತುಗಳೂ ಶಕ್ತಿವಂತ ರಾಗುವ ಬಗೆಗೇ ಇದೆ. ದೊಡ್ಡದನ್ನು ಸಾಧಿಸುವ ಬಗೆಗೇ ಇವೆ. ವಿವೇಕಾನಂದರ "ಶಕ್ತಿ"ಯ ಪರಿಕಲ್ಪನೆ ಆಕ್ರಾಮಕ ಶಕ್ತಿಯ ಬಗೆಗೆ ಖಂಡಿತ ಇದ್ದಿರಲಾರದು. ಅದು ದೊಡ್ಡಶಕ್ತಿಯೊಂದರ ವಾಹಕವಾಗುವ ಧಾರಣಶಕ್ತಿಯ ಕಡೆಗೇ, ಒಳಗೊಳ್ಳುವ ಶಕ್ತಿಯ ಕಡೆಗೇ– ಇದೆ. ಆದರೂ ವಿವೇಕಾನಂದರದು ವ್ಯಾಖ್ಯಾನ. ರಭಸವಾದ, ಸಶಕ್ತವಾದ ವ್ಯಾಖ್ಯಾನ. ಲೋಕವನ್ನು ಗುರಿಯಾಗಿರಿಸಿಕೊಂಡಿರುವಂಥಾದ್ದು. ತಾನೇ ಗುರಿಯಾಗಿ,

ಅನುಭವಿಸಿ, ಉದ್ಗರಿಸಿದ್ದಲ್ಲ–ರಾಮಕೃಷ್ಣರಂತೆ. ಆದರೆ ಎಲ್ಲ ವ್ಯಾಖ್ಯಾನಗಳ ಗುರಿಯೂ– ಕೊನೆಗೆ ತಾನೇ ಆ ಸ್ಥಿತಿಯನ್ನು, ತನ್ನ ಸಾಧ್ಯತೆಯನ್ನು ಪಡೆಯುವುದು.

ಈಗ; ಕುವೆಂಪು ಕಡೆಗೆ ಬರೋಣ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ೮ನೇಯ ಅಧ್ಯಾಯದಲ್ಲಿ ಒಂದು ಬೆಳಗಿನ ವರ್ಣನೆ ಇದೆ. ಸುಬ್ಬಣ್ಣ ಹೆಗ್ಗಡೆ ಎಂಬ ಮುದುಕ ಬೆಳಗಿನ ಬಿಸಿಲಿಗೆ ಬೆನ್ನೊಡ್ಡಿ ನಿಂತಿದ್ದಾನೆ. " ಬೆನ್ನಿಗೆ ಬಿದ್ದ ಬಿಸಿಲು ನಾಲಗೆಗೆ ಬೀಳುವ ಜೇನಾಗಿತ್ತು. ಹೆಗ್ಗಡೆಯವರು 'ಸ್ ಸ್ ಸ್ ಅಯ್' ಎನ್ನುತ್ತ ಮುಂಡಾಡುವ ರೀತಿಯಲ್ಲಿ ಬೆನ್ನು ನೀವಿಕೊಂಡರು. ಲೋಕವೆಲ್ಲ ಅಶೋಕವಾಗಿ ಸುಖಮಯವಾಯಿತು. ಮನದಲ್ಲಿ ವಿಶ್ವಮೈತ್ರಿ ಮೂಡಿತು. ಹಂದಿ, ಕೋಳಿ, ಕುರಿ, ಮರ, ಕಾಡು, ಆಕಾಶ, ಹಾಡುತ್ತಿದ್ದ ಕಾಡುಹಕ್ಕಿಗಳ ಹಿಂಡು, ನೆರೆಹೊರೆ ಎಲ್ಲದರ ಮೇಲೆಯೂ ಅಕ್ಕರೆಯುಕ್ಕಿತು. ಹಳೆಮನೆಯಾದರೇನಂತೆ? ಹಂದಿ ದೊಡ್ಡಿಯ ಬಳಿಯಾದರೇನಂತೆ? ಅಕ್ಷರಹೀನ ಅಸಂಸ್ಕೃತ ಒಕ್ಕಲಿಗನಾದರೇನಂತೆ? ಮುಪ್ಪ ಡಸಿದ್ದರೇನಂತೆ? ಸುಬ್ಬಣ್ಣ ಹೆಗ್ಗಡೆಯೂ ಒಬ್ಬ ವಿಶ್ವಪ್ರಜೆ!

ಕುವೆಂಪು ಕಂಡರಿಸಿದ ಈ ಬೆಳಗು ಎಂಥ ಬೆಳಗು! ಇದು ಬರಿ ಬೆಳಗಲ್ಲೋ ಅಣ್ಣಾ ಎಂದು ಬೇಂದ್ರೆ ಹಾಡಿದಂತೆ! ಕುವೆಂಪು ಅವರ ನಿಸರ್ಗಪ್ರೇಮ, ಲೌಕಿಕದ ಉಪಾಧಿ ಗಳನ್ನು ಮೀರಿ, ಎಲ್ಲರನ್ನೂ, ಎಲ್ಲ ಜೀವಿಗಳನ್ನೂ, ವಿಶ್ವಪ್ರಜೆಗಳನ್ನಾಗಿ ಕಾಣುವುದರಲ್ಲಿ ಸಾರ್ಥಕವಾಗಿದೆ.

ಅನುಬಂಧಗಳು

ಅನುಬಂಧ – ೧

'ಮಲೆಗಳಲ್ಲಿ ಮದುಮಗಳು–೫೦ : ಮೈಸೂರಿನಲ್ಲಿ ವಿಚಾರ ಸಂಕಿರಣ

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಓದುತ್ತಾ ಹೋದರೆ ಈಗಲೂ ಅದು ಕನ್ಯೆಯಂತೆ ಮತ್ತು ಚಿರಯೌವ್ವನೆಯಂತೆ ಕಂಗೊಳಿಸುತ್ತದೆ. ಅದು ಕನ್ನಡಕ್ಕೆ ಮಾತ್ರವಲ್ಲ ಇಡೀ ಭಾರತದ ಸಂದರ್ಭದಲ್ಲೂ ಶತಮಾನದ ಕಾದಂಬರಿ ಎಂದು ಸಾಹಿತಿ ದೇವನೂರು ಮಹಾದೇವ ಹೇಳಿದರು. ಅವರು ಮಲೆಗಳಲ್ಲಿ ಮದುಮಗಳು ಕಾದಂಬರಿಗೆ ೫೦ ವರ್ಷಗಳು ತುಂಬಿದ ಸಂದರ್ಭದಲ್ಲಿ ಬೆಂಗಳೂರಿನ ಕುವೆಂಪು ವಿಚಾರ ವೇದಿಕೆ, ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ ಮತ್ತು ಮೈಸೂರು ವಿಶ್ವವಿದ್ಯಾನಿಲಯ ಒಟ್ಟು ಸೇರಿ ಇದೇ ಅಕ್ಟೋ. ೧೪ರಂದು ಮೈಸೂರಿನಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣ ಹಾಗೂ ನಾಟಕ ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಈ ಕಾದಂಬರಿಯನ್ನು ನಾನು ಬಿ.ಎ. ಪದವಿ ಸಂದರ್ಭದಲ್ಲಿ ಓದಿದ್ದೆ. ಆಗ ನವ್ಯರ ಕಾಲ. ಈ ಸಾಹಿತ್ಯ ವಲಯದಲ್ಲಿ ಅದನ್ನು ಕತ್ತರಿಸಿ ತುಂಡು ತುಂಡು ಮಾಡುತ್ತಿದ್ದರು. ಆಗ ನಾನು ಮುಗ್ಧವಾಗಿ ಕನ್ನಡದ ಇತರ ಶ್ರೇಷ್ಠ ಕೃತಿಗಳನ್ನೆಲ್ಲ ಒಟ್ಟಿಗಿಟ್ಟು ತೂಗಿದರೂ 'ಮಲೆಗಳಲ್ಲಿ ಮದುಮಗಳು'ವೇ ಹೆಚ್ಚಿಗೆ ತೂಗುತ್ತದೆ ಎಂದು ಸಮರ್ಥಿಸುತ್ತಿದ್ದೆ. ಅದು ಈಗಲೂ ಸರಿ ಎಂದೇ ನನ್ನ ಅಭಿಪ್ರಾಯ ಎಂದು ಅವರು ಹೇಳಿದರು

ಕಾರ್ಯಕ್ರಮದ ಆಶಯ ಮಾತುಗಳನ್ನಾಡಿದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್.ನಾಗಭೂಷಣ ಕುವೆಂಪು ಮತ್ತು ಲೋಹಿಯಾ ವಿಚಾರಗಳ ಮಧ್ಯೆ ಇರುವ ಸಾಮ್ಯತೆಗಳನ್ನು ಗುರುತಿಸುತ್ತಾ, 'ಮಲೆಗಳಲ್ಲಿ ಮದುಮಗಳು' ಭಾರತದ ಮಾತ್ರವಲ್ಲ ಶ್ರೇಷ್ಠ ಜಾಗತಿಕ ಕಾದಂಬರಿಗಳ ಸಾಲಿನಲ್ಲಿ ನಿಲ್ಲಬಲ್ಲ ಕೃತಿ ಎಂದರು. ಏಕೆಂದರೆ ಇದು ಕಾದಂಬರಿ ಎಂದರೇನು ಎಂಬ ಆವರೆಗಿನ ಕಲ್ಪನೆಯನ್ನೇ ಬದಲಿಸಿತು ಮತ್ತು ಕಾದಂಬರಿಗಳನ್ನು ಕಟ್ಟುತ್ತಿದ್ದ ವಾಸ್ತವತಾವಾದಕ್ಕೆ ಹೊಸ ಆಯಾಮಗಳನ್ನೇ ನೀಡಿತು ಎಂದರು. ಈ ಕಾಂದಬರಿ ಪಶ್ಚಿಮದ ಆಧುನಿಕತೆಯನ್ನು ಮುಖಾಮುಖಿ ಮಾಡಿಕೊಳ್ಳುವ ರೀತಿ ಇಂದಿನ ಹಿಂದುತ್ವ ರಾಜಕಾರಣದ ಹಿನ್ನೆಲೆಯಲ್ಲಿ ನಮ್ಮೆಲ್ಲರ ಗಮನ ಸೆಳೆಯಬೇಕು ಎಂದೂ ಅವರು ನುಡಿದರು.

ಮುಖ್ಯ ಅಥಿತಿಯಾಗಿದ್ದ ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಡಾ॥ ಆರ್. ರಾಜಣ್ಣ ಮಾತನಾಡಿ ಈ ಕಾರ್ಯಕ್ರಮಕ್ಕೆ ಕುವೆಂಪು ಅವರು ಕುಲಪತಿಗಳಾಗಿದ್ದ ತಮ್ಮ ವಿಶ್ವವಿದ್ಯಾನಿಲಯ ಸಹಯೋಗ ನೀಡುತ್ತಿರುವುದು ಹೆಮ್ಮೆಯ ವಿಷಯ ವಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ವಿಮರ್ಶಕ ಡಾ॥ ಜಿ.ಹೆಚ್. ನಾಯಕ ಅವರು ಮಾತನಾಡಿ, ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿದ್ದು, ಕುವೆಂಪು ಇಲ್ಲದಿದ್ದರೆ ನಮ್ಮ ನವೋದಯ ಸಾಹಿತ್ಯ ಇಷ್ಟು ಸಮೃದ್ದವಾಗಿ ಇರುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು. ಕೇವಲ ‘ಮಲೆಗಳಲ್ಲಿ ಮದುಮಗಳು’ ವಿಗೆ ಮಾತ್ರವಲ್ಲ ಇಡೀ ಕುವೆಂಪು ಸಾಹಿತ್ಯಕ್ಕೆ ಕನ್ನಡ ವಿಮರ್ಶಾಲೋಕ ಸಮರ್ಥವಾಗಿ ಸ್ಪಂದಿಸಲು ವಿಫಲವಾಗಿದೆ ಎಂದೂ ಅವರು ಹೇಳಿದರು.

ನಂತರ ನಡೆದ ಮೂರು ಗೋಷ್ಠಿಗಳಲ್ಲಿ ಸಾಹಿತಿ ಪ್ರೊ॥ ಓ.ಎಲ್. ನಾಗಭೂಷಣ ಸ್ವಾಮಿ ‘ಜಾಗತಿಕ ಕಾದಂಬರಿ ಪರಂಪರೆ ಮತ್ತು ಮಲೆಗಳಲ್ಲಿ ಮದುಮಗಳು’, ಡಾ॥ ಕೆ.ವೈ ನಾರಾಯಣಸ್ವಾಮಿ ‘ಮಲೆಗಳಲ್ಲಿ ಮದುಮಗಳು–ಸಾಮಾಜಿಕ ವಿನ್ಯಾಸಗಳು’ ಮತ್ತು ಡಾ॥ ಸಬಿತಾ ಬನ್ನಾಡಿ ‘ಮಲೆಗಳಲ್ಲಿ ಮದುಮಗಳು : ಗಂಡು–ಹೆಣ್ಣಿನ ಸಂಬಂಧಗಳು’ ವಿಷಯವಾಗಿ ಪ್ರಬಂಧಗಳನ್ನು ಮಂಡಿಸಿದರು.

ಸಂಜೆ ಕಾರ್ಯಕ್ರಮದ ಸಮಾರೋಪ ನುಡಿಗಳನ್ನಾಡಿದ ಪ್ರೊ॥ ಎನ್. ಬೋರಲಿಂಗಯ್ಯನವರು ‘ಮಲೆಗಳಲ್ಲಿ ಮದುಮಗಳು ೫೦ ವರ್ಷಗಳ ನಂತರ ಮಾತ್ರವಲ್ಲ, ನೂರು ವರ್ಷಗಳ ನಂತರವೂ ಹೀಗೇ ಜೀವಂತವಾಗಿರಬಲ್ಲ ಸತ್ವಯುತ ಕಾದಂಬರಿ ಎನ್ನುತ್ತಾ ಕಾದಂಬರಿಯ ಗುತ್ತಿ ಮತ್ತು ಸುಬ್ಬಣ್ಣ ಹೆಗ್ಗಡೆ ಪಾತ್ರಗಳ ವಿನ್ಯಾಸವನ್ನು ವಿವರಿಸುತ್ತಾ ತಮ್ಮ ಮಾತನ್ನು ಸಮರ್ಥಿಸಿಕೊಂಡರು. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಎನ್.ಆರ್. ವಿಶುಕುಮಾರ್ ಅಧ್ಯಕ್ಷತೆ ವಹಿಸಿದ್ದರು.

ನಂತರ ಶಿವಮೊಗ್ಗದ ‘ಸಹ್ಯಾದ್ರಿ ರಂಗತರಂಗ’ ತಂಡದಿಂದ ಕುವೆಂಪು ಅವರ ‘ಜಲಗಾರ’ ನಾಟಕ ಪ್ರದರ್ಶನಗೊಂಡಿತು.

(ಕೃಪೆ : **‘ಹೊಸ ಮನುಷ್ಯ’**, ನವೆಂಬರ್, ೨೦೧೮)

ಅನುಬಂಧ - ೨

‘ಮಲೆಗಳಲ್ಲಿ ಮದುಮಗಳು-೫೦ : ಧಾರವಾಡದಲ್ಲಿ ವಿಚಾರ ಸಂಕಿರಣ

ಕನ್ನಡದ ಶ್ರೇಷ್ಠ ಸಾಹಿತಿ ಕುವೆಂಪು ಅವರ ‘ಮಲೆಗಳಲ್ಲಿ ಮದುಮಗಳು’ ಕಾದಂಬರಿಯು ಜಾಗತಿಕ ಶ್ರೇಷ್ಠ ಕಾದಂಬರಿಗಳ ಸಾಲಿನಲ್ಲಿ ನಿಲ್ಲಬಲ್ಲ ಅಪರೂಪದ ಕೃತಿಯಾಗಿದ್ದು ಅದರಲ್ಲಿನ ನೂರಾರು ಪಾತ್ರಗಳು, ನಿಸರ್ಗ ಮತ್ತು ಸಂಸ್ಕೃತಿಯ ಅಪೂರ್ವ ವರ್ಣನೆಯಿಂದಾಗಿ ಕಾದಂಬರಿಯ ತುಂಬೆಲ್ಲಾ ಜೀವಂತಿಕೆಯು ಮೈಗೂಡಿಕೊಂಡಿದೆ ಎಂದು ಕನ್ನಡದ ಹಿರಿಯ ಕವಿ ಚೆನ್ನವೀರ ಕಣವಿ ಹೇಳಿದರು. ಅವರು ಶಿವಮೊಗ್ಗದ ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನ, ಧಾರವಾಡದ ಗಿರಡ್ಡಿ ಗೋವಿಂದರಾಜ ಪ್ರತಿಷ್ಠಾನ ಹಾಗೂ ಕುಪ್ಪಳಿಯ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ ಡಿಸೆಂಬರ್ ೯ರಂದು ಧಾರವಾಡದ ರಂಗಾಯಣದ ಆವರಣದಲ್ಲಿ ಹಮ್ಮಿಕೊಂಡಿದ್ದ ‘ಮಲೆಗಳಲ್ಲಿ ಮದುಮಗಳು- ೫೦’ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು,

ಪಾತ್ರರಚನೆಯಲ್ಲಿನ ವೈವಿಧ್ಯತೆ, ವಾಸ್ತವಿಕತೆಗೆ ದೂರವಾಗದ ಕಥನ, ಪ್ರಾದೇಶಿಕತೆಯ ಗಾಢ ಕಸುವು, ನಿಸರ್ಗದ ಜೊತೆಗಿನ ಮನುಷ್ಯನ ಅವಿನಾಭಾವ ಸಂಬಂಧಗಳು ಪರಸ್ಪರ ಒಂದಕ್ಕೊಂದು ಬೇರ್ಪಡದಂತೆ ಬೆಸೆದುಕೊಂಡಿರುವ ಚಿತ್ರಣವನ್ನು ಈ ಕೃತಿಯಲ್ಲಿ ನೋಡುತ್ತೇವೆ. ಮಾನವ ಪ್ರವೃತ್ತಿಗಳು ಇಲ್ಲಿ ಸಹಜವಾಗಿ ಅಭಿವ್ಯಕ್ತಗೊಂಡಿದ್ದು ,ಮಲೆನಾಡಿನ ದಟ್ಟ ಅರಣ್ಯದ ನಡುವೆ ಬದುಕುತ್ತಿರುವ ಕಾದಂಬರಿಯ ಪಾತ್ರಗಳು ಈ ಮಣ್ಣಿನಿಂದ ಹೊರತಾದುದಲ್ಲ ಎನ್ನುವುದನ್ನು ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ ಎಂದು ಕಣವಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ಅವರು ‘ಮಲೆಗಳಲ್ಲಿ ಮದುಮಗಳು’ ಕಾದಂಬರಿಯು ಕುವೆಂಪು ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನ ಪಡದಿರಲು ಒಂದು ಕಾರಣವೆಂದರೆ ಅದು ಅದುವರೆಗಿನ ಅವರ ಸಾಹಿತ್ಯಕ್ಕಿಂತ ನಿರ್ಣಾಯಕವಾಗಿ ಭಿನ್ನವಾಗಿರುವುದು ಎಂದರು. ಆ ಕೃತಿಯವರೆಗಿನ ಕುವೆಂಪು ಸಾಹಿತ್ಯದ ನಂಬಿಕೆಯಾಗಿ ಆವರೆಗಿನ ಅವರ ಮೇರು ಕೃತಿಯೆಂದು ಪರಿಗಣಿತವಾಗಿದ್ದ ‘ಶ್ರೀರಾಮಯಣ ದರ್ಶನಂ’ ಎತ್ತಿ ಹಿಡಿಯುವ ‘ನೆಯ್ದಾಳುವ ವಿರಾಣ್ಮನಂ’ ಮತ್ತು ಅದು ನೀಡುವ ‘ಜೀವಿಗಳ್ಗಿಚ್ಛೆಯಾ ಸ್ವಾತಂತ್ರಮಂ’ ನಡುವಣ ಸಂಬಂಧದಲ್ಲಿ ಕಾಣಿಸುವ ಅವಿಶದತೆ ಇಲ್ಲಿ ಜೀವಿಗಳ ಇಚ್ಛಾ ಸ್ವಾತಂತ್ರ್ಯದ ಕ್ರಿಯಾಶೀಲತೆಯೇ ವಿರಾಣ್ಮ

ನದ ಚಲನಶೀಲತೆಗೆ ಕಾರಣವೆಂದು ಸೂಚಿಸುವ ಮೂಲಕ ಪರಿಹಾರವಾಗಿದೆ ಎಂದರು, ಆ ಮೂಲಕ ಕುವೆಂಪು ಸಾಹಿತ್ಯದ ಅಧ್ಯಾತ್ಮಿಕತೆಗೆ ಮಣ್ಣಿನ ಗುಣ ಒದಗಿದೆ ಎಂದು ಅವರು ವಿವರಿಸಿದರು. ಹಾಗಾಗಿಯೇ ಈ ಕಾದಂಬರಿಯ ಅಂತ್ಯದಲ್ಲಿ ಮುಕುಂದಯ್ಯ ಮತ್ತು ಚಿನ್ನಮ್ಮರ ಪ್ರೇಮದ ಸಾಫಲ್ಯದ ಪ್ರತೀಕವಾಗೆಂಬಂತೆ ಆ ಹಳ್ಳಿಗಾಡಿನಲ್ಲಿ ಸರ್ವರಿಗೂ ಪ್ರವೇಶವಿರುವ ಶಾಲೆಯೊಂದರ ಸ್ಥಾಪನೆಯನ್ನು ಕುವೆಂಪು, '...ಇದೆಲ್ಲದರ ಪರಿಣಾಮವಾಗಿ ಅದರಲ್ಲಿ ಅಂತರ್ಗತವಾಗಿದ್ದ ದೈವ ಸಂಕಲ್ಪವೊಂದು ಸಹ ಈಡೇರಿತು' ಎಂದು ಹೇಳುತ್ತಾರೆ ಎಂದು ನಾಗಭೂಷಣ ಸೂಚಿಸಿದರು.

ನಂತರ ನಡೆದ ವಿವಿಧ ಗೋಷ್ಠಿಗಳಲ್ಲಿ "ಮಲೆಗಳಲ್ಲಿ ಮದುಮಗಳು-ಕನ್ನಡ ಕಾದಂಬರಿ ಲೋಕದ ಅಪೂರ್ವ ಕೃತಿ" ವಿಷಯವಾಗಿ ಡಾ॥ ರಾಜೇಂದ್ರ ಚೆನ್ನಿ ಮಾತನಾಡಿ, ಇದು ಎಲ್ಲ ವಿಮರ್ಶೆಗಳನ್ನೂ ಮೀರಿ ಇನ್ನೂ ಉಳಿಸಿಕೊಳ್ಳುವಂಥ ಸತ್ವವನ್ನು ಹೊಂದಿದ 'ಅಭಿಜಾತ' ಕೃತಿಯಾಗಿದೆ ಎಂದರು. ಕಾದಂಬರಿಯ ಆಯ್ದ ಭಾಗಗಳನ್ನು ಎ.ಎಂ.ಶಿವಸ್ವಾಮಿ ವಾಚಿಸಿದರು."ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕಾಡು" ವಿಷಯವಾಗಿ ಡಾ.ನಿತ್ಯಾನಂದ ಶೆಟ್ಟಿ ಮಾತನಾಡಿ ಈ ಕಾದಂಬರಿಯಲ್ಲಿ ಕಾಡು ಮನುಷ್ಯರು ಮೃಗಗಳ ಅಂತಃಪ್ರವೃತ್ತಿಯೊಂದಿಗೆ ಬಾಳುತ್ತಾ ಅದನ್ನು ದಾಟುವಂತೆ ಅವರನ್ನು ಪೊರೆಯುವ ಆಸರೆಯಾಗಿ ಚಿತ್ರಣವಾಗಿರುವ ಬಗೆಯನ್ನು ವಿವರಿಸಿದರು. 'ಮಲೆಗಳಲ್ಲಿ ಮದುಮಗಳು-ಸ್ತ್ರೀತ್ವದ ಶೋಧನೆ' ವಿಷಯವಾಗಿ ಡಾ.ವಿನಯ ಒಕ್ಕುಂದ ಮಾತನಾಡಿ ಬದುಕಿನ ಹಲವು ನೆಯ್ಗೆಗಳ ಅದ್ಭುತ ಹೆಣಿಗೆಯಲ್ಲಿ ಸ್ತ್ರೀ ಪಾತ್ರಗಳ ನಿರ್ಣಯ ಶಕ್ತಿಯನ್ನು, ಸ್ತ್ರೀತ್ವದ ಪ್ರಾಣಶಕ್ತಿಯನ್ನು ಕಾದಂಬರಿಯುದ್ದಕ್ಕೂ ಕುವೆಂಪು ಸೂಕ್ಷ್ಮವಾಗಿ ಹೆಣೆಯುತ್ತಾ ಹೋಗಿದ್ದಾರೆ ಎಂದರು.

ಹಿರಿಯ ಸಾಹಿತಿ ಡಾ॥ ಗುರುಲಿಂಗ ಕಾಪಸೆ ಸಮಾರೋಪ ಮಾತುಗಳನ್ನಾಡುತ್ತಾ 'ಮಲೆಗಳಲ್ಲಿ ಮದುಮಗಳು' ಮಲೆನಾಡಿನ ಬದುಕಿನ ನೈಜ ಚಿತ್ರಣ, ಸ್ವಾಭಾವಿಕವಾದ ವರ್ಣನೆಗಳು ಮೂಲಕ ಓದುಗರ ಮನಸೂರೆಗೊಳ್ಳುವ ಅದ್ಭುತ ಕೃತಿ ಎಂದರು. ಅಧ್ಯಕ್ಷತೆ ವಹಿಸಿದ್ದ 'ಗಿರಡ್ಡಿ ಗೋವಿಂದರಾಜ ಫೌಂಡೇಶನ್'ನ ಅಧ್ಯಕ್ಷ ವೆಂಕಟೇಶ ಮಾಚಕನೂರ ಅವರು ಕಾದಂಬರಿಯಲ್ಲಿ ಕುವೆಂಪು ಅವರು ಬಳಸಿದ ವೈವಿಧ್ಯಮಯ ಭಾಷೆಯ ಸೊಗಸನ್ನು ಸವಿಯಲಾದರೂ ವಿದ್ಯಾರ್ಥಿಗಳು ಇಂತಹ ಮಹತ್ಕೃತಿಯನ್ನು ಓದಬೇಕೆಂದು ಸಲಹೆ ನೀಡಿದರು. ಎಂ.ರಾಜು, ಸವಿತಾ ನಾಗಭೂಷಣ ಮತ್ತು ಬಾಳಣ್ಣ ಶೀಗೆಹಳ್ಳಿ ಕಾರ್ಯಕ್ರಮವನ್ನು ನಿರೂಪಿಸಿದರು.

(ಕೃಪೆ : **'ಹೊಸ ಮನುಷ್ಯ'**, ಜನವರಿ, ೨೦೧೯)

ಅನುಬಂಧ - ೩

'ಮಲೆಗಳಲ್ಲಿ ಮದುಮಗಳು-೫೦ : ಉಡುಪಿಯಲ್ಲಿ ವಿಚಾರ ಸಂಕಿರಣ

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯು ಏಕಾಕೃತಿ ಮತ್ತು ಕೇಂದ್ರೀಕೃತಗೊಂಡ ಪ್ರಜ್ಞೆಯಿಲ್ಲದ, ಮಲೆನಾಡೆಂಬ ವಿಶಾಲ ಭಿತ್ತಿಯಲ್ಲಿ ಜೀವನದ ವೈವಿಧ್ಯಮಯ ನೆಲೆಯಲ್ಲಿ ಚಿತ್ರಣಗೊಂಡ ಬದುಕಿನ ಬಗೆಗಿನ ಕಾದಂಬರಿಯಾಗಿರುವುದೇ ಅದರ ಶ್ರೇಷ್ಠತೆ, ವಿಶಿಷ್ಟತೆ ಮತ್ತು ಸೊಬಗಿಗೆ ಕಾರಣವಾಗಿದೆ ಎಂದು ಕನ್ನಡದ ಹಿರಿಯ ವಿದ್ವಾಂಸರಾದ ಡಾ॥ ಬಿ.ಎ. ವಿವೇಕ ರೈ ಅವರು ಅಭಿಪ್ರಾಯಪಟ್ಟರು. ಅವರು ಕಳೆದ ಜನವರಿ ಐದರಂದು ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಉಡುಪಿಯ 'ರಥಬೀದಿ ಗೆಳೆಯರ ಬಳಗ'ದ ಸಹಯೋಗದಲ್ಲಿ ಉಡುಪಿಯ ಎಂಜಿಎಂ ಕಾಲೇಜಿನ 'ಧ್ವನ್ಯಾಲೋಕ' ಸಭಾಂಗಣದಲ್ಲಿ ಆಯೋಜಿಸಿದ್ದ "ಮಲೆಗಳಲ್ಲಿ ಮದುಮಗಳು-೫೦" ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಕಾದಂಬರಿಯಲ್ಲಿ ಮಾನವ ಕೇಂದ್ರಿತ ದೃಷ್ಟಿಕೋನವನ್ನು ಮೀರಿದ ಜೀವಕೇಂದ್ರಿತ ಲೋಕದೃಷ್ಟಿ ಅಂತರ್ಗತವಾಗಿದೆ ಎಂದೂ ಅವರು ಹೇಳಿದರು.

ಇದಕ್ಕೆ ಮುನ್ನ ಎಲ್ಲರನ್ನೂ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ಅವರು ದೇಶೀ ಪಾದ್ರಿ ಆರಂಭಿಸುವ ಮತಾಂತರದ ಪ್ರಯತ್ನದ ಭಾಗವಾಗಿ ಕಾದಂಬರಿಯನ್ನು ಪ್ರವೇಶಿಸುವ ಆಧುನಿಕತೆಯ ಈವರೆಗಿನ ಪ್ರಯಾಣವನ್ನು ಇಂದಿನ ಜಾಗತೀಕರಣದ ಪರಿಣಾಮಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಮತ್ತು ಈ ಕಾದಂಬರಿಯಲ್ಲಿ ಅಡಕವಾಗಿರುವ ಧರ್ಮ ಜಿಜ್ಞಾಸೆಯನ್ನು ಇಂದಿನ ಕೋಮುವಾದ ಮತ್ತು ಸೆಕ್ಯುಲರಿಸಂಗಳ ಮುಖಾಮುಖಿಯ ಸಂದರ್ಭದಲ್ಲಿ ಪರಿಶೀಲಿಸುವುದು ಅರ್ಥಪೂರ್ಣವೆನಿಸಬಹುದು ಎಂದು ನುಡಿದರು.

ನಂತರ ನಡೆದ ವಿಚಾರಗೋಷ್ಠಿಯಲ್ಲಿ 'ಮಲೆಗಳಲ್ಲಿ ಮದುಮಗಳು': ನನ್ನ ನೋಟದಲ್ಲಿ' ಎಂಬ ಶೀರ್ಷಿಕೆಯಡಿ ಮುವ್ವರು ಚಿಂತಕರು ತಮ್ಮ ವಿಚಾರಗಳನ್ನು ಮಂಡಿಸಿದರು. ಮೊದಲು ಮಾತನಾಡಿದ ಹಿರಿಯ ಚಿಂತಕ ಜಿ. ರಾಜಶೇಖರ ಅವರು, ಮನುಷ್ಯ ಬದುಕಿನ ಸಕಲ ವಿವರಗಳನ್ನೂ ಮಲೆನಾಡಿನ ಜೀವವೈವಿಧ್ಯದ ದಟ್ಟ ಹಿನ್ನೆಲೆ ಯಲ್ಲಿ ರಾಗದ ಆಲಾಪದಂತೆ ಅತ್ಯಂತ ನಿರುದ್ವಿಗ್ನತೆಯಲ್ಲಿ ವಿಸ್ತರಿಸುತ್ತಾ ಹೋಗುವುದು

ಕುವೆಂಪು ಅವರ ಸ್ವಭಾವದಲ್ಲೇ ಬೆರೆತುಹೋಗಿರುವ ಜೀವದಯೆ ಮತ್ತು ನಿರಂಕುಶಮತಿತ್ವಕ್ಕೆ ದೊಡ್ಡ ಉದಾಹರಣೆ ಎಂದು ಹೇಳಿದರು.

ನಂತರ ಮಾತನಾಡಿದ ಇನ್ನೋರ್ವ ಚಿಂತಕ ಡಾ॥ ವಾಸುದೇವ ಬೆಳ್ಳೆಯವರು 'ಮಲೆಗಳಲ್ಲಿ ಮದುಮಗಳು' ವಿನಲ್ಲಿ ಕುವೆಂಪು ಅನೇಕ ಶೂದ್ರ, ತಳವರ್ಗಗಳ, ಮಹಿಳಾ ಕಥನಗಳನ್ನು ಕನ್ನಡದ ಸಾರಸ್ವತ ಲೋಕದೊಳಗೆ ತಂದಿರುವುದು ಚಾರಿತ್ರಿಕವಾಗಿ ಬಹಳ ಮುಖ್ಯವಾದ ಸಂಗತಿಯಾಗಿದ್ದು, ಈ ಮೂಲಕ ಅವರು ಈ ಸಮುದಾಯಗಳ ವಿಮೋಚನೆಯ ಸಾಧ್ಯತೆಯನ್ನು ಕನ್ನಡ ಸಮಾಜದ ಮುಂದಿಟ್ಟಿದ್ದಾರೆ ಎಂದರು. ಕೊನೆಯಲ್ಲಿ ಮಾತನಾಡಿದ ಹಿರಿಯ ಚಿಂತಕ ಲಕ್ಷ್ಮೀಶ ತೋಳ್ಪಾಡಿ 'ಮಲೆಗಳಲ್ಲಿ ಮದುಮಗಳು' ವಿನಲ್ಲಿ ಕುವೆಂಪು ಸಾಧಾರಣೀಕರಣವನ್ನು ಅದರ ಗರಿಷ್ಠ ಮಟ್ಟಕ್ಕೆ ತೆಗೆದುಕೊಂಡುಹೋಗಿ. ತರ್ಕಬದ್ಧತೆಯನ್ನು ಮೀರಿ, ಅದು ಇದ್ದ ಹಾಗೇ ನೋಡುವ, ಚಿತ್ರಿಸುವ–ಕ್ರಮವನ್ನು ಇಲ್ಲಿ ಅದ್ಭುತವಾಗಿ ಸಾಧಿಸಿದ್ದಾರೆ ಎಂದರು. ಈ ಕಾದಂಬರಿಯನ್ನು ಓದಿದಮೇಲೆ ಆಗುವ ಆಂತರಿಕ ಕ್ರಾಂತಿಯೇ ಬೇರೆತೆರನದ್ದು ಎಂದು ಅವರು ಹೇಳಿದರು. ಕೊನೆಯಲ್ಲಿ ಸ್ವಾಮಿ ವಿವೇಕಾನಂದರು ಶೂದ್ರರಾಗಿರದಿದ್ದಲ್ಲಿ ಕುವೆಂಪು ನಮಗೆ ದಕ್ಕುತ್ತಿರಲಿಲ್ಲವೇನೋ ಎಂದೂ ಅವರು ನುಡಿದರು.

ವಾಸಂತಿ ಶೆಣ್ಯೆ ಅವರು ಹಾಡಿದ ಕುವೆಂಪು ಅವರ ಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮವನ್ನು 'ರಥಬೀದಿ ಗೆಳಯರು' ವಿನ ಕಾರ್ಯದರ್ಶಿ ಸುಬ್ರಮಣ್ಯ ಜೋಶಿ ನಿರೂಪಿಸಿದರು. ಅಧ್ಯಕ್ಷ ಮುರಳೀಧರ ಉಪಾಧ್ಯ ವಂದಿಸಿದರು.

(ಕೃಪೆ: **'ಹೊಸ ಮನುಷ್ಯ'** ಫೆಬ್ರುವರಿ ೨೦೧೯)

(ವರದಿಗಳು : ಬಿ.ವಿ. ಸುರೇಂದ್ರ)

ಲೇಖಕರ ವಿಳಾಸಗಳು

ಡಿ.ಎಸ್. ನಾಗಭೂಷಣ
ಎಚ್.ಐ.ಜಿ.-೫, 'ನುಡಿ'
ಕಲ್ಲಳ್ಳಿ ಬಡಾವಣೆ,
ವಿನೋಬನಗರ
ಶಿವಮೊಗ್ಗ-೫೭೭೨೦೪

ದೇವನೂರ ಮಹಾದೇವ
೫ನೇ ಕ್ರಾಸ್, ನವಿಲು ರಸ್ತೆ
ಕುವೆಂಪುನಗರ,
ಮೈಸೂರು-೫೭೦೦೨೩

ಓ.ಎಲ್. ನಾಗಭೂಷಣ ಸ್ವಾಮಿ
ನಂ. ೪೪೫, ೮ನೇ ಕ್ರಾಸ್,
೧ನೇ ಮೇನ್
ಸರಸ್ವತಿಪುರಂ,
ಮೈಸೂರು-೯

ಡಾ|| ಕೆ.ವೈ. ನಾರಾಯಣಸ್ವಾಮಿ
ನಂ. ೪೭, ಎನ್.ಆರ್. ಲೇಔಟ್
೯ನೇ ಕ್ರಾಸ್, ವಿರಾಟ್‌ನಗರ
ಬೊಮ್ಮನಹಳ್ಳಿ,
ಬೆಂಗಳೂರು-೫೬೦೦೬೮

ಡಾ|| ಸಬಿತಾ ಬನ್ನಾಡಿ
ಕನ್ನಡ ಪ್ರಾಧ್ಯಾಪಕರು
ಸರ್ಕಾರಿ ಪ್ರ.ದ. ಕಾಲೇಜು
ತರೀಕೆರೆ -೫೭೭೨೨೮
(ಚಿಕ್ಕಮಗಳೂರು ಜಿಲ್ಲೆ)

ಡಾ|| ರಾಜೇಂದ್ರ ಚೆನ್ನಿ
ನಂ. ೧೩೭, 'ಸಿದ್ಧಾರೂಢ ನಿಲಯ;
ಅಲ್‌ಹರೀಂ ಬಡಾವಣೆ, ಗೋಪಾಳ
ಶಿವಮೊಗ್ಗ-೫೭೭೨೦೫

ಡಾ|| ನಿತ್ಯಾನಂದ ಬಿ.ಶೆಟ್ಟಿ
ನಿರ್ದೇಶಕರು
ಡಾ|| ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಸಂಸ್ಥೆ
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು-೫೭೨೧೦೩

ಡಾ|| ವಿನಯಾ ಒಕ್ಕುಂದ
'ನೆಮ್ಮದಿ', ಸಿ.ಐ.ಟಿ.ಬಿ. ಕಾಲೋನಿ
ಶ್ರೀನಗರ, ಧಾರವಾಡ-೫೮೦೦೦೩

ಜಿ. ರಾಜಶೇಖರ
'ವಿಷ್ಣುನಂದನ',
ಚಾಕೋಲೇಟ್ ಕಾರ್ಖಾನೆ ಬಳಿ ಕೊಳಂಬೆ,
ಉಡುಪಿ-೫೭೬೧೦೧

ಡಾ|| ವಾಸುದೇವ ಬೆಳ್ಳೆ
ಕೇ/ಆ ಮೇರಿಹಿಲ್ ಸ್ಟೋರ್ಸ್
ಮೇರಿ ಹಿಲ್,
ಮಂಗಳೂರು-೫೭೦ ೦೦೮

ಲಕ್ಷ್ಮೀಶ ತೋಳ್ಪಾಡಿ
ಶಾಂತಿಗೋಡು ಅಂಚೆ
ಪುತ್ತೂರು-೫೭೪೨೦೨ (ದ.ಕ.)

ಮೆ॥ ಎಂ. ಮೂನಿಸ್ವಾಮಿ ಆಂಡ್ ಸನ್ಸ್ ಪ್ರಕಾಶನದ ಇತರ ಪ್ರಕಟನೆಗಳು :

೧) **ಮೌನ ಕ್ರಿಯಾಶೀಲತೆ** ಲೇ: ಬಿ.ಆರ್. ರಮೇಶ್

೨) **ಅನುರಕ್ತಿ** (ಕುವೆಂಪು ಕವಿತೆಗಳ ಸಚಿತ್ರ ದರ್ಶನ) ಸಂ: ಕೆ.ಸಿ. ಶಿವಾರೆಡ್ಡಿ

೩) **ಭೂಗಳ್ಳರು ಕಬಳಿಸಿದ ಸರ್ಕಾರಿ ಜಮೀನನ್ನು ಉಳಿಸಿದ ಹೋರಾಟ**

ಲೇ: ಡಾ॥ ಎಚ್.ಎಸ್. ದೊರೆಸ್ವಾಮಿ

೪) **ಕತೆ ಕಲ್ಲಾಯಿತು ಮತಿ ಬಂಗಾರಾಯಿತು** ಲೇ: ಜಿ.ಎಸ್. ಜಯದೇವ

೫) **ಘಟನೆಗಳಲ್ಲಿ ಗಾಂಧೀಜಿ** ಲೇ: ಜಿ.ಎಸ್. ಜಯದೇವ

೬) **ತನ್ನ ಮುಕ್ತಿಯೂ ಜಗದ ಹಿತವು** ಲೇ: ಡಾ॥ ಎಚ್.ಎನ್. ಮುರುಳಿಧರ

೭) **Cellphone Toone Kya Kiya Writer**: Ep Menon

೮) **ಇಂದಿಗೆ ಬೇಕಾದ ಗಾಂಧಿ** ಲೇ: ಡಿ.ಎಸ್. ನಾಗಭೂಷನ್

೯) **ಗಾಳಿಗೆ ಸಿಕ್ಕ ತರಗೆಲೆ** ಲೇ: ಬಿ.ಆರ್. ರಮೇಶ್

(**ಸೂಚನೆ :** ೨೦೧೨ ರಿಂದ ೨೦೧೯ ರವರೆಗೆ ಪ್ರಕಟನೆಗೊಂಡ ಈ ಪುಸ್ತಕಗಳನ್ನು ಕೊಂಡುಕೊಳ್ಳಲು ಬಯಸುವವರು ಸಂಪರ್ಕಿಸಬೇಕಾದ ವಿಳಾಸ :

ಮೆ॥ ಎಂ. ಮೂನಿಸ್ವಾಮಿ ಆಂಡ್ ಸನ್ಸ್
(ಪ್ರಕಾಶಕರು ಮತ್ತು ವಿತರಕರು) :
'ಸರ್ವೋದಯ' ನಂ: ೭೨,
ಪ್ರೊ॥ ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ,
(ಸರ್ವೇಯರ್ ಸ್ಟ್ರೀಟ್) ಬಸವನಗುಡಿ,
ಬೆಂಗಳೂರು-೫೬೦ ೦೦೪.

ದೂರವಾಣಿ ಸಂಖ್ಯೆ : ೯೮೮೦೧೭೪೮೯

ನನ್ನ ಭಾವಕೋಶದೊಳಗೆ ಇರುವ ರಾಮಾಯಣದ ಅರಣ್ಯವನ್ನು ಬಿಟ್ಟರೆ ಬಹುಶಃ 'ಮಲೆಗಳಲ್ಲಿ ಮದುಮಗಳು'ವಿನಲ್ಲೆ ಅರಣ್ಯ ಬೃಹತ್ ಆಗಿ ಮೈ ತಳೆದಿರುವುದು ಅನ್ನಿಸುತ್ತದೆ. ಈ ಅರಣ್ಯದೊಳಗೆ ಅರಣ್ಯವನ್ನೂ ಒಳಗೊಂಡ ಜೀವ ಸಂಕುಲದ ಪ್ರವಾಹವು ಏರಿಳಿತಗಳಲ್ಲಿ ಹರಿಯುತ್ತದೆ. ಇದರೊಳಗೆ ಕಗ್ಗಂಟಾಗಿರುವ ಮನುಷ್ಯನ ಕತೆಯೂ ಬರುತ್ತದೆ. ಹೀರೋ ಹುಲಿಯ ಎಂಬ ನಾಯಿಯ ಕತೆಯೂ ಬರುತ್ತದೆ. ಜಡವಾದ ಹುಲಿಕಲ್ಲು ನೆತ್ತಿಯೂ ಕೂಡ ಕಂಪನಗಳಿಂದ ಜೀವಂತವಾಗಿದೆ. ಪ್ರಕೃತಿಯ ಜೀವಂತಿಕೆ ಹೇಗಿದೆ ಎಂಬುದಕ್ಕೆ ಕಾದಂಬರಿಯ ಪುಟ 472ರಿಂದ ಕೆಲವು ವಾಕ್ಯಗಳನ್ನು ಆಯ್ದು ಇಡುತ್ತಿರುವೆ. "ಯಾರು ಬದುಕಲಿ, ಯಾರು ಸಾಯಲಿ, ಯಾರು ಹುಟ್ಟಲಿ, ಹುಟ್ಟದೆ ಹೋಗಲಿ, ಮಳೆಗಾಲ ನಿಲ್ಲುತ್ತದೆಯೆ? ಮಳೆ ಹಿಡಿದು ಕೂತಿತ್ತು. ನಾಲ್ಕು ಪಾದಗಳನ್ನೂ ಬಲವಾಗಿ ಊರಿ!... ಆ ಪ್ರಕೃತಿಯ ಪ್ರತಿರೂಪದ ಸಹ್ಯಾದ್ರಿ ಪರ್ವತ ಕಾನನ ಶ್ರೇಣಿ ಮನುಷ್ಯನ ಅಲ್ಪ ಸುಖದುಃಖಗಳಿಗೆ ಸಂಪೂರ್ಣ ನಿಸ್ಸಂಗಿಯಾಗಿ..." ಎಂದು ಬರುತ್ತದೆ. ಮನುಷ್ಯ ಬದುಕಿನ ಆಸೆ ನಿರಾಸೆ ಕಷ್ಟ ಸುಖ ಶೋಕ ತಾಪಾದಿಗಳು ಯಃಕಶ್ಚಿತಗಳಾಗಿದ್ದುದರಲ್ಲಿ ಆಶ್ಚರ್ಯವೇನು? ಇವೆಲ್ಲಾ ಪ್ರಕೃತಿಯ ಕಡೆಗಣ್ಣಿನ ನೋಟಕ್ಕೂ ಬರಲಾರದೇನೊ ಎಂಬಂತೆ ಬರೆಯುತ್ತಾರೆ. ಈ ಗ್ರಹಿಕೆ ಈ ನೋಟ ಯಾರಿಗೆ ದಕ್ಕಲು ಸಾಧ್ಯ? ತಪ್ಪಸ್ಸು ಮಾಡಿ ಪ್ರಕೃತಿಯನ್ನು ಸಾಕ್ಷಾತ್ಕರಿಸಿಕೊಂಡು ವರ ಪಡೆದವನಿಗೆ ಸಾಧ್ಯ ಅನ್ನಿಸಿಬಿಡುತ್ತದೆ. ಹರಿಯುತ್ತಿರುವ, ನಿಲುಕದ ಬದುಕಿನಂತೆ ಕೃತಿ ಚಲಿಸುತ್ತದೆ. ಸ್ಪರ್ಶ, ವಾಸನಾ, ಶಬ್ಧ, ರುಚಿ–ಇವು ಭಾಷೆಯಲ್ಲಿ ಚಿಗುರೊಡೆಯುವಂತೆ ರೂಪ ತಳೆಯುತ್ತದೆ. ಹೀಗೆ ಇರುವುದರಿಂದಲೇ ಏನೋ, 'ಮಲೆಗಳಲ್ಲಿ ಮದುಮಗಳು'ಗೆ ಐವತ್ತೊಂದನೆ ವರ್ಷ ನಡೆಯುತ್ತಿದ್ದರೂ ಮಕ್ಕಳು ಮೊಮ್ಮಕ್ಕಳು ಆಗಿದ್ದರೂ ಕನ್ಯೆಯಂತೆ ಕಂಗೊಳಿಸುತ್ತಿದೆ, ನಿತ್ಯತ್ವದಲ್ಲಿ.

–ದೇವನೂರ ಮಹಾದೇವ

₹: 90/-

PUBLICATION
Bangalore